ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

45

ಮೇ 19 ಭಾನುವಾರ 2024

ಸಂಪುಟ: 45 | ಸಂಚಿಕೆ: 33 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಪ್ರಜ್ವಲ್ ರೇವಣ್ಣ ತಪ್ಪು ಮಾಡಿದ್ದರೆ

ಕಾನೂನು ಕ್ರಮವಾಗಲಿ; ಅದಕ್ಕೆ ನಮ್ಮ ಆಕ್ಷೇಪವಿಲ್ಲ

● ಮಾಜಿ ಪ್ರಧಾನಿ ದೇವೇಗೌಡರ ಮೊದಲ ಪ್ರತಿಕ್ರಿಯೆ ● ಈ ವಿಷಯ ಮುಂದಿಟ್ಟುಕೊಂಡು ನಮ್ಮ ಕುಟುಂಬವನ್ನು ರಾಜಕೀಯವಾಗಿ ಮುಗಿಸುವ ಷಡ್ಯಂತರ ನಡೆದಿದೆ ● ನಾವ್ಯಾರೂ ಪ್ರಜ್ವಲ್ ವಹಿಸಿಕೊಂಡು ಮಾತಾಡಲ್ಲ; ಆದರೆ ರೇವಣ್ಣ ವಿಚಾರ ಕಟ್ಟುಕತೆ ● ಈ ವಿಚಾರದಲ್ಲಿ ಮಾಜಿ ಸಿಎಂ ಕುಮಾರಸ್ವಾಮಿ ಎಲ್ಲವನ್ನೂ ಹೇಳಿದ್ದಾರೆ ● 92ನೇ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಜೆಪಿ ನಗರದಲ್ಲಿ ಶ್ರೀನಿವಾಸನ ದರ್ಶನ



ಬೆಂಗಳೂರು, ಮೇ18 (ಕೆಎಂಶಿ)– ಸಂಸದ ಪ್ರಜ್ವಲ್ ರೇವಣ್ಣ ತಪ್ಪೆಸಗಿರುವುದು ಸಾಬೀತಾದರೆ ಕಾನೂನು ಪ್ರಕಾರ ಕ್ರಮ ಜರುಗಿಸಲಿ, ಅದಕ್ಕೆ ನಮ್ಮ ಆಕ್ಷೇಪ ಇಲ್ಲ ಎಂದು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ಇಂದಿಲ್ಲಿ ತಿಳಿಸಿದ್ದಾರೆ.

ಜೆ.ಪಿ.ನಗರದ ಶ್ರೀನಿವಾಸ ದೇವಸ್ಥಾನದಲ್ಲಿ ತಮ್ಮ ಹುಟ್ಟುಹಬ್ಬದ ಪ್ರಯುಕ್ತ ದೇವರಿಗೆ ಪೂಜೆ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ವಿಷಯವನ್ನು ಮುಂದಿಟ್ಟುಕೊಂಡು ಇಲ್ಲದ ಕಟ್ಟುಕತೆಗಳನ್ನು ಕಟ್ಟಿ ನಮ್ಮ ಕುಟುಂಬವನ್ನು ರಾಜಕೀಯವಾಗಿ ಮುಗಿಸುವ ಷಡ್ಯಂತರ ನಡೆದಿದೆ. ಇಂತಹ ಷಡ್ಯಂತರಗಳನ್ನು ಎದುರಿಸುವ ಶಕ್ತಿಯನ್ನು ಭಗವಂತ ನೀಡಿದ್ದಾನೆ. ಪ್ರಜ್ವಲ್ ಮೇಲಿನ ಆರೋಪಕ್ಕೆ ಸಂಬಂಧಿಸಿದಂತೆ ನಮ್ಮ ತಕರಾರಿಲ್ಲ. ಆ ಬಗ್ಗೆ ತನಿಖೆ ನಡೆಯುತ್ತಿದೆ. ● 9ನೇ ಪುಟಕ್ಕೆ

ಗೌಡರ ಹುಟ್ಟುಹಬ್ಬಕ್ಕೆ ಪ್ರಧಾನಿ ಮೋದಿ ಶುಭ ಹಾರೈಕೆ

ಕಾರ್ಯಕರ್ತನ ಮೂಲಕ ಹಲಸಿನ ಹಣ್ಣು ಉಡುಗೊರೆ ಕಳಿಸಿದ ಪ್ರಧಾನಿ!!; ವಾಸನೆ ಆಸ್ವಾದಿಸಿದ ಗೌಡರು



ತೊಂಭತ್ತೊಂದನೇ ವರ್ಷ ಪೂರ್ಣಗೊಳಿಸಿ 92ಕ್ಕೆ ಕಾಲಿರಿಸಿರುವ ದೇವೇಗೌಡರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಎಕ್ಸ್ ಖಾತೆ ಮೂಲಕ ಶುಭ ಕೋರಿರುವುದಲ್ಲದೆ, ರೈತನ ಮಗನಿಗೆ ತಮ್ಮ ಕಾರ್ಯಕರ್ತನ ಮೂಲಕ ಹಲಸಿನಹಣ್ಣು ಕಳುಹಿಸಿಕೊಟ್ಟಿದ್ದಾರೆ. ತಮ್ಮ ಎಕ್ಸ್ ಖಾತೆಯಲ್ಲಿ ಪ್ರಧಾನಿ ಅವರು, ಗೌಡರ ದೀರ್ಘ ಮತ್ತು ಆರೋಗ್ಯಕರ ಜೀವನಕ್ಕಾಗಿ ನಾನು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ. ನಿಮ್ಮ ಸೇವೆ ಗಣನೀಯವಾಗಿದ್ದು, ರಾಜಕೀಯ ವಲಯದಲ್ಲಿ ಅತ್ಯಂತ ಗೌರವದಿಂದ ಕಾಣಲಾಗುತ್ತದೆ ಎಂದಿದ್ದಾರೆ. ಪ್ರಧಾನಿ ಅವರು ಪಕ್ಷದ ಕಾರ್ಯಕರ್ತನ ಮೂಲಕ ಕಳುಹಿಸಿಕೊಟ್ಟ ಹಲಸಿನ ಹಣ್ಣನ್ನು ದೇವೇಗೌಡರು, ತಮ್ಮ ಮೂಗಿನ ಬಳಿ ಇಟ್ಟುಕೊಂಡು ಆಸ್ವಾದಿಸಿದರು.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಅಡ್ಡಾದಿಡ್ಡಿ ವಾಹನ ಚಾಲನೆ; ಬರೀ 15 ದಿನದಲ್ಲಿ

12,192 ಕೇಸ್ ದಾಖಲು



ಬೆಂಗಳೂರು, ಮೇ 18– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಸಂಚಾರ ನಿಯಮ ಉಲ್ಲಂಘನೆ ಮಾಡುವ ವಾಹನ ಚಾಲಕರು, ಮಾಲೀಕರ ಮೇಲೆ ಬರೋಬ್ಬರಿ 12 ಸಾವಿರಕ್ಕೂ ಅಧಿಕ ಕೇಸ್ ದಾಖಲಾಗಿದೆ.

ಮೇ 1 ರಿಂದ ಮೇ 16 ವರೆಗೆ ಒಟ್ಟು 12,192 ಕೇಸ್‌ಗಳು ದಾಖಲಾಗಿವೆ. ಹೆದ್ದಾರಿಯಲ್ಲಿ ಅಳವಡಿಸಿರುವ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ (ಎಐ) ಕ್ಯಾಮೆರಾ ಕಣ್ಣಿನಲ್ಲಿ ಸೆರೆಯಾಗಿರುವ ದೃಶ್ಯಾವಳಿಗಳ ಆಧಾರದ ಮೇಲೆ ಕೇಸ್ ಹಾಕಲಾಗಿದೆ

ಅತಿಯಾದ ವೇಗ, ಚಾಲಕರು ಸೀಟ್ ಬೆಲ್ಟ್ ಧರಿಸದೇ ಇರುವುದು ಹಾಗೂ ಪಕ್ಕದಲ್ಲಿ ಕುಳಿತುಕೊಂಡಿರುವ ವ್ಯಕ್ತಿ ಸೀಟ್ ಬೆಲ್ಟ್ ಧರಿಸದೇ ಇರುವುದು ಈ ಎಲ್ಲಾ ಸಂಚಾರಿ ನಿಯಮ ಉಲ್ಲಂಘನೆ ಮೇಲೆ ಪೊಲೀಸರು ಸಂಬಂಧಪಟ್ಟ ಮಾಲೀಕನ ವಿಳಾಸಕ್ಕೆ ನೋಟಿಸ್ ಕಳುಹಿಸಿದ್ದಾರೆ

ಸಂಚಾರಿ ಪೊಲೀಸರು ಕಳುಹಿಸಿದ ನೋಟಿಸ್ ತಲುಪಿದ 7 ದಿನದಲ್ಲಿ ಸಂಬಂಧಪಟ್ಟ ಸಂಚಾರಿ ಠಾಣೆಗೆ ಹೋಗಿ ದಂಡ ಪಾವತಿಸಬೇಕು. ಇಲ್ಲದಿದ್ದರೆ ಕಾನೂನು ರೀತಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ. ದಂಡ ಕಟ್ಟದೇ ಮೊಂಡಾಟ ಮಾಡಿದರೆ 6 ತಿಂಗಳು ಜೈಲು ಅಥವಾ 5,000 ರೂ. ದಂಡ ವಿಧಿಸುವ ಎಚ್ಚರಿಕೆಯನ್ನು ನೋಟಿಸ್‌ನಲ್ಲಿ ನೀಡಲಾಗಿದೆ. ಎಕ್ಸ್‌ಪ್ರೆಸ್ ವೇಯಲ್ಲಿ ವೇಗ ನಿಯಂತ್ರಣಕ್ಕೆ ಪೊಲೀಸರು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಮೊರೆ ಹೋಗಿದ್ದು ಎಐ ಕ್ಯಾಮೆರಾ ● 9ನೇ ಪುಟಕ್ಕೆ

100 ಕೋಟಿ ಆಫರ್: ದೇವರಾಜೇಗೌಡ ಮಾನಸಿಕ ಅಸ್ವಸ್ಥ, ಅವರಿಗೆ ಚಿಕಿತ್ಸೆ ಕೊಡಿಸಬೇಕು

ಬೆಂಗಳೂರು, ಮೇ 18– ಹಾಸನ ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಅವರ ರಾಸಲೀಲೆ ಪೆನ್ ಡ್ರೈವ್ ಹಂಚಿಕೆಯಲ್ಲಿ ತಮ್ಮ ಪಾತ್ರ ತಳ್ಳಿಹಾಕಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ದೇವರಾಜೇಗೌಡ ಒಬ್ಬ ಮಾನಸಿಕ ಅಸ್ವಸ್ಥ, ಅವರಿಗೆ ಎಸ್‌ಐಟಿ ಸೂಕ್ತ ಚಿಕಿತ್ಸೆ ಕೊಡಿಸಬೇಕು ಎಂದು ಶನಿವಾರ ಹೇಳಿದ್ದಾರೆ.

ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಬಂಧಿತರಾಗಿರುವ ಬಿಜೆಪಿ ಮುಖಂಡ ಮತ್ತು ವಕೀಲ ಜಿ.ದೇವರಾಜೇಗೌಡ ಅವರು, ಪೆನ್‌ಡ್ರೈವ್ ಹಂಚಿಕೆಯಲ್ಲಿ ಶಿವಕುಮಾರ್ ಮತ್ತು ಇತರ ನಾಲ್ವರು ಸಚಿವರ ಕೈವಾಡವಿದೆ ಎಂದು ಶುಕ್ರವಾರ ಆರೋಪಿಸಿದ್ದರು.

ಪ್ರಜ್ವಲ್ ರೇವಣ್ಣ ಅವರ ಅಶ್ಲೀಲ ವಿಡಿಯೋ ಪ್ರಕರಣದಲ್ಲಿ ಬಿಜೆಪಿ ಮತ್ತು ಪ್ರಧಾನಿ ನರೇಂದ್ರ ಮೋದಿಗೆ ಕೆಟ್ಟ ಹೆಸರು ತರಲು ಮತ್ತು ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರ ಹೆಸರನ್ನು ಕೆಡಿಸಲು ಡಿಕೆ ಶಿವಕುಮಾರ್ ತಮಗೆ 100 ಕೋಟಿ ರೂ. ಆಫರ್ ನೀಡಿದ್ದರು ಎಂದು ದೇವರಾಜೇಗೌಡ ಆರೋಪಿಸಿದ್ದರು.



ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಶಿವಕುಮಾರ್, ಗೌಡರು ಲೋಕಾಯುಕ್ತ ಅಥವಾ ಇನ್ನಾವುದೇ ಏಜೆನ್ಸಿಯ ಮುಂದೆ ಪ್ರಕರಣ ದಾಖಲಿಸಲಿ. ಅವರಿಗೆ ಮಾನಸಿಕವಾಗಿ ಕೆಲವು ಸಮಸ್ಯೆಗಳಿವೆ ಎಂದು ನಾನು ಭಾವಿಸುತ್ತೇನೆ. ● 9ನೇ ಪುಟಕ್ಕೆ

ಜೂನ್ 14ರಿಂದ 22ರವರೆಗೆ ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆ

ಬೆಂಗಳೂರು, ಮೇ 18– ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಶನಿವಾರ ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಯ ವೇಳಾಪಟ್ಟಿಯನ್ನು ಪ್ರಕಟಿಸಿದ್ದು, ಜೂನ್ 14ರಿಂದ 22ರವರೆಗೆ ಪರೀಕ್ಷೆ ನಡೆಯಲಿದೆ.

ಜೂನ್ 7 ರಿಂದ ನಡೆಯಬೇಕಿದ್ದ ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಯನ್ನು ಇತ್ತೀಚೆಗೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಮುಂದೂಡಿತ್ತು. ಇದೀಗ ಪರಿಷ್ಕೃತ ವೇಳಾಪಟ್ಟಿಯನ್ನು ಇಂದು ಮಂಡಳಿಯ ಜಾಲತಾಣ https://kseab.karnataka.gov.in/english ಪ್ರಕಟಿಸಲಾಗಿದೆ. ಕಳೆದ ಮೇ 9ರಂದು 2023–24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶವನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಪ್ರಕಟಿಸಿತ್ತು. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಫಲಿತಾಂಶ ಕುಸಿತ ಕಂಡಿದೆ.

ಪ್ಲೇಆಫ್‌ಗೆ **RCB**

■ ಪೂರ್ಣ ವರದಿ ಪಟ–2





ಪ್ಲೇ ಆಫ್‌ಗೆ ಆರ್‌ಸಿಬಿ ಎಂಟ್ರಿ: ಸಿಎಸ್‌ಕೆ ಔಟ್



ಬೆಂಗಳೂರು, ಮೇ 18– ಕೊನೆವರೆಗೂ ರೋಚಕತೆಯಿಂದ ಕೂಡಿದ್ದ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು, ಬದ್ಧ ಎದುರಾಳಿ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ 27 ರನ್‌ಗಳ ಭರ್ಜರಿ ಜಯ ಸಾಧಿಸಿದೆ.

ಆ ಮೂಲಕ ರಾಯಲ್ ಚಾಲೆಂಜರ್ಸ್ ಬೆಂಗಳೂರು ಆಡಿರುವ 14 ಪಂದ್ಯಗಳಲ್ಲಿ ತಲಾ 7 ಜಯ ಹಾಗೂ ಸೋಲಿನೊಂದಿಗೆ ಅಂಕಪಟ್ಟಿಯಲ್ಲಿ 14 ಅಂಕ ಸಂಪಾದಿಸಿ ರನ್‌ರೇಟ್ ಆಧಾರದ ಮೇಲೆ ಪ್ಲೇ ಆಫ್‌ಗೆ ಲಗ್ಗೆ ಹಾಕಿದರೆ, ಇತ್ತ 219 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಚೆನ್ನೈ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 191ರನ್ ಗಳಿಸಲಷ್ಟೇ ಶಕ್ತವಾಗಿ ಸೋಲಿನೊಂದಿಗೆ ಟೂರ್ನಿಗೆ ವಿದಾಯ ಹೇಳಿತು.

ಪ್ಲೇ ಆಫ್‌ಗೆ ಅರ್ಹತೆ ಪಡೆಯಲು 201 ರನ್‌ಗಳ ಗುರಿ ಬೆನ್ನತ್ತಿದ ಚೆನ್ನೈ ಮೊದಲ ಓವರ್‌ನ ಮೊದಲ ಎಸೆತದಲ್ಲೇ ನಾಯಕ ಋತುರಾಜ್ ಗಾಯಕ್ವಾಡ್ ವಿಕೆಟ್ ಕಳೆದುಕೊಂಡಿತು. ಇದರ ಬೆನ್ನಲ್ಲೇ ಡ್ಯಾರೆಲ್ ಮಿಚೆಲ್ 4 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಈ ವೇಳೆ ಜೊತೆಯಾದ ರಚಿನ್ ರವೀಂದ್ರ, ಅಜಿಂಕ್ಯಾ ರಹಾನೆ 3ನೇ ವಿಕೆಟ್‌ಗೆ 66 ರನ್‌ಗಳ ಜೊತೆಯಾಟವಾಡಿ ತಂಡಕ್ಕೆ ಆಸರೆಯಾದರು. ಆದರೆ ರಹಾನೆ 33 ರನ್ ಬಾರಿಸಿ ಔಟಾದರು. ಮತ್ತೊಂದು ತುದಿಯಲ್ಲಿ ಸ್ಫೋಟಕ ಬ್ಯಾಟಿಂಗ್ ನಡೆಸಿದ ರಚಿನ್ ರವೀಂದ್ರ 37 ಎಸೆತಗಳಲ್ಲಿ 5 ಬೌಂಡರಿ, 3 ಸಿಕ್ಸರ್ ಸಹಿತ 61 ರನ್ ಗಳಿಸಿ ರನೌಟಾದರು. ನಂತರ ಬಂದ ಶಿವಂ ದುಬೆ 7, ಮಿಚೆಲ್ ಸ್ಯಾಂಟ್ನರ್ 3ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಕೊನೆಯಲ್ಲಿ ರವೀಂದ್ರ ಜಡೇಜಾ ಹಾಗೂ ಎಂ.ಎಸ್.ಧೋನಿ 27 ಎಸೆತಗಳಲ್ಲಿ 61 ರನ್‌ಗಳ ಜತೆಯಾಟವಾಡಿದರು. ಧೋನಿ 13 ಎಸೆತಗಳಲ್ಲಿ 25 ರನ್ ಸಿಡಿಸಿ ವಿಕೆಟ್ ಒಪ್ಪಿಸಿದರು. ಮತ್ತೊಂದು ತುದಿಯಲ್ಲಿ ರವೀಂದ್ರ ಜಡೇಜಾ ಅಜೇಯ 42 ರನ್ ಬಾರಿಸಿದರಾದರೂ ತಂಡವನ್ನು ಸೋಲಿನಿಂದ ಪಾರು ಮಾಡಲು ಸಾಧ್ಯವಾಗಲಿಲ್ಲ. ಆರ್‌ಸಿಬಿ ಪರ ಯಶ್ ದಯಾಳ್ 2, ಗ್ಲೆನ್ ಮ್ಯಾಕ್ಸ್‌ವೆಲ್, ಮೊಹಮ್ಮದ್ ಸಿರಾಜ್, ಲೂಕಿ ಫರ್ಗ್ಯೂಸನ್ ಹಾಗೂ ಕ್ಯಾಮರೂನ್ ಗ್ರೀನ್ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿ ಪರ ನಾಯಕ ಫಾಫ್ ಡು ಪ್ಲೆಸಿಸ್ ಹಾಗೂ ವಿರಾಟ್ ಕೊಹ್ಲಿ 78 ರನ್‌ಗಳ ಜತೆಯಾಟವಾಡಿ ಉತ್ತಮ ಆರಂಭ ಒದಗಿಸಿದರು. ಆದರೆ ವಿರಾಟ್ ಕೊಹ್ಲಿ 47 ರನ್ ಸಿಡಿಸಿದರೆ, ನಾಯಕ ಫಾಫ್ ಡು ಪ್ಲೆಸಿಸ್ 54 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು.

ಇನ್ನು ರಜತ್ ಪಾಟೀದಾರ್ 41 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು. ಕ್ಯಾಮರೂನ್ ಗ್ರೀನ್ ಕೇವಲ 17 ಎಸೆತಗಳಲ್ಲಿ ಅಜೇಯ 38 ರನ್ ಬಾರಿಸಿದರೆ, ದಿನೇಶ್ ಕಾರ್ತಿಕ್ 14 ಹಾಗೂ ಗ್ಲೆನ್ ಮ್ಯಾಕ್ಸ್‌ವೆಲ್ 16 ರನ್ ಸಿಡಿಸುವ ಮೂಲಕ ತಂಡದ ಮೊತ್ತವನ್ನು ಇನ್ನೂರರ ಗಡಿ ದಾಟಿಸಿದರು. ಅಂತಿಮವಾಗಿ ಆರ್‌ಸಿಬಿ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 218 ರನ್ ಕಲೆ ಹಾಕಿತು. ಸಿಎಸ್‌ಕೆ ಪರ ಶಾರ್ದೂಲ್ ಠಾಕೂರ್ 2, ತುಷಾರ್ ದೇಶಪಾಂಡೆ, ಮಿಚೆಲ್ ಸ್ಯಾಟ್ನರ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. ಫಾಫ್ ಡು ಪ್ಲೆಸಿಸ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಪಂದ್ಯ ವೀಕ್ಷಿಸಿದ ಸಿಎಂ: ರಾಜಕೀಯ ಒತ್ತಡಗಳ ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆರ್‌ಸಿಬಿ ವರ್ಸಸ್ ಸಿಎಸ್‌ಕೆ ಪಂದ್ಯವನ್ನು ವೀಕ್ಷಿಸಿದರು.

ಈ ವೇಳೆ ಅವರಿಗೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಚಿವರಾದ ಡಾ.ಪರಮೇಶ್ವರ್, ಡಾ.ಹೆಚ್.ಸಿ. ಮಹದೇವಪ್ಪ ಸಾಥ್ ನೀಡಿದರು. ಈ ವೇಳೆ ಅಲ್ಲೇ ಇದ್ದ ನಟ ಶಿವರಾಜ್ ಕುಮಾರ್ ಸಿಎಂ ಭೇಟಿಯಾದರು. ಸಿದ್ದರಾಮಯ್ಯ ಕಡೆ ಬಂದ ಶಿವಣ್ಣ, ಸಿಎಂ ಕೈಕುಲುಕಿ ಕುಶಲೋಪರಿ ವಿಚಾರಿಸಿದರು. ಈ ಹೈವೋಲ್ಟೇಜ್ ಪಂದ್ಯವನ್ನು ನಟ ರಿಶಬ್ ಶೆಟ್ಟಿ ಸೇರಿದಂತೆ ಹಲವಾರು ಸೆಲೆಬ್ರಿಟಿಗಳು ಕಣ್ತುಂಬಿಕೊಂಡು ಸಂಭ್ರಮಿಸಿದರು.

ಇಂದಿನ ಪಂದ್ಯ (ಮೇ 19)

ಸನ್‌ರೈಸರ್ಸ್ ಹೈದರಾಬಾದ್ / ಪಂಜಾಬ್ ಕಿಂಗ್ಸ್
ಸ್ಥಳ: ಹೈದರಾಬಾದ್, ರಾಜೀವ್ ಗಾಂಧಿ ಅಂತರರಾಷ್ಟ್ರೀಯ ಕ್ರೀಡಾಂಗಣ
ಸಮಯ: ಮಧ್ಯಾಹ್ನ 3.30ಕ್ಕೆ.

ರಾಜಸ್ಥಾನ್ ರಾಯಲ್ಸ್ / ಕೋಲ್ಕತ್ತಾ ನೈಟ್ ರೈಡರ್ಸ್
ಸ್ಥಳ: ಗುವಾಹಟಿ, ಬರ್ಸಾಪುರ ಕ್ರೀಡಾಂಗಣ
ಸಮಯ: ಸಂಜೆ 7.30ಕ್ಕೆ

ಇಡೀ ದೇಶದಲ್ಲಿ ಗಗನಚುಂಬಿ ಕಟ್ಟಡಗಳು ಮುಂಬೈನಲ್ಲೇ ಹೆಚ್ಚು

● ಭಾಮೀಸ್ ಗ್ರೂಪ್ ಆಫ್ ಕಂಪನೀಸ್ ಸಂಸ್ಥಾಪಕ ಡಾ.ಎಂ.ಡಿ.ರಾಘವೇಂದ್ರ ಪ್ರಸಾದ್

● ಗಗನಚುಂಬಿ ಕಟ್ಟಡಗಳು; ಒಂದು ಅವಲೋಕನ ಕುರಿತು ಡಿ.ವಿ.ನರಸಿಂಹರಾವ್ ಸ್ಮಾರಕ ಉಪನ್ಯಾಸ

ಮೈಸೂರು,ಮೇ 18(ಪಿಎಂ)– ಇಡೀ ದೇಶದಲ್ಲಿ ಮುಂಬೈ ನಗರವು ಹೆಚ್ಚಿನ ಸಂಖ್ಯೆಯಲ್ಲಿ ಗಗನಚುಂಬಿ ಕಟ್ಟಡಗಳನ್ನು ಹೊಂದಿದೆ ಎಂದು ಭಾಮೀಸ್ ಗ್ರೂಪ್ ಆಫ್ ಕಂಪನೀಸ್ ಸಂಸ್ಥಾಪಕ ಮತ್ತು ವ್ಯವಸ್ಥಾಪಕ ನಿರ್ದೇಶಕ ಡಾ.ಎಂ.ಡಿ. ರಾಘವೇಂದ್ರ ಪ್ರಸಾದ್ ಹೇಳಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸಿಟಿಟ್ಯೂಷನ್ ಆಫ್ ಇಂಜಿನಿಯರ್ಸ್‌ನ ಎಸ್.ಪಿ.ಭಟ್ ಸಭಾಂಗಣದಲ್ಲಿ ಇನ್ಸಿಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಮೈಸೂರು ಕೇಂದ್ರ ಹಾಗೂ ದೇಸಿರಾಜು ಕುಟುಂಬದ ಜಂಟಿ ಆಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಡಿ.ವಿ.ನರಸಿಂಹರಾವ್ ಸ್ಮಾರಕ ಉಪನ್ಯಾಸ ಕಾರ್ಯಕ್ರಮ'ದಲ್ಲಿ 'ಗಗನಚುಂಬಿ ಕಟ್ಟಡಗಳು ; ಒಂದು ಅವಲೋಕನ' ಕುರಿತು ಮಾತನಾಡಿದರು.

ಎಲ್ಲಿ ಜಾಗ ಕಡಿಮೆ ಇರುತ್ತದೆಯೋ ಅಲ್ಲಿ ಮುಗಿಲೆತ್ತ ಮುಖ ಮಾಡುವುದು ಸಾಮಾನ್ಯ. ಅಂತೆಯೇ ಮುಂಬೈನಲ್ಲಿ ಸುತ್ತಲು ಸಮುದ್ರ ಇರುವ ಹಿನ್ನೆಲೆಯಲ್ಲಿ ಅಲ್ಲಿ ಜಾಗ ಕಡಿಮೆ ಇದೆ. ಹಾಗಾಗಿ ಮುಂಬೈ ನಗರದಲ್ಲಿ ಎತ್ತರ ಕಟ್ಟಡಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಭಾರತದಲ್ಲಿ 15 ಮೀಟರ್ ಎತ್ತರದಲ್ಲಿ ನಿರ್ಮಾಣಗೊಳ್ಳುವ ಕಟ್ಟಡಗಳಿಗೆ ಅಗ್ನಿ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಳ್ಳಬೇಕಿತ್ತು. ಈಗ ಇದು 21 ಮೀಟರ್‌ಗೆ ಹೆಚ್ಚಳಗೊಂಡಿದೆ ಎಂದರು.

ಎತ್ತರದ ಕಟ್ಟಡಗಳಿಗೆ ಸಂಬಂಧಿಸಿದಂತೆ 'ಕೌನ್ಸಿಲ್ ಆಫ್ ಟಾಲ್ ಬಿಲ್ಡಿಂಗ್ಸ್ ಅಂಡ್ ಅರ್ಬನ್ ಹ್ಯಾಬಿಟ್ಯಾಟ್' ನಾಲ್ಕು ಮಾನದಂಡ ವಿಧಿಸಿದೆ. 50 ಮೀಟರ್‌ಗಿಂತ ಹೆಚ್ಚು ಎತ್ತರವನ್ನು ಹೊಂದಿರುವುದನ್ನು 'ಟಾಲ್ ಬಿಲ್ಡಿಂಗ್' ಎಂದು ವರ್ಗೀಕರಿಸಲಾಗಿದೆ. ಅಂತೆಯೇ 100 ಮೀಟರ್‌ಗಿಂತಲೂ ಹೆಚ್ಚು ಎತ್ತರ ಹೊಂದಿರುವ ಕಟ್ಟಡಗಳನ್ನು 'ಸ್ಕೈ ಸ್ಕ್ರೇಪರ್' ಎಂದು ಕರೆಯಲಾಗಿದ್ದು, 300 ಮೀಟರ್‌ಗೂ ಹೆಚ್ಚು ಎತ್ತರ ಹೊಂದಿರುವ ಕಟ್ಟಡಗಳನ್ನು 'ಸೂಪರ್ ಟಾಲ್', 600 ಮೀಟರ್‌ಗಳಿಗೂ ಅಧಿಕ ಎತ್ತರ ಹೊಂದಿರುವ ಕಟ್ಟಡಗಳನ್ನು 'ಮೆಗಾ ಟಾಲ್' ಎಂದು ವರ್ಗೀಕರಿಸಲಾಗಿದೆ ಎಂದು ವಿವರಿಸಿದರು.

ಏಷ್ಯಾ ಖಂಡವು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಎತ್ತರದ ಕಟ್ಟಡಗಳನ್ನು ಹೊಂದಿರುವುದರಲ್ಲಿ ಮೊದಲ ಸ್ಥಾನದಲ್ಲಿದೆ. ಇಲ್ಲಿ ಶೇ.33.16ರಷ್ಟು ಎತ್ತರದ ಕಟ್ಟಡಗಳಿವೆ. ಈ ಪೈಕಿ ಹಾಂಗ್‌ಕಾಂಗ್ ನಗರವು 7 ಸಾವಿರಕ್ಕೂ ಹೆಚ್ಚು ಗಗನಚುಂಬಿ ಕಟ್ಟಡಗಳನ್ನು ಹೊಂದಿರುವುದನ್ನು ಕಾಣಬಹುದು. ನಂತರದ ಸ್ಥಾನದಲ್ಲಿ ನಾರ್ತ್ ಅಮೇರಿಕ ಇದ್ದು, ಇಲ್ಲಿನ ನ್ಯೂಯಾರ್ಕ್ ನಗರದಲ್ಲಿ 5,317 ಎತ್ತರದ ಕಟ್ಟಡಗಳು ಇವೆ. ಅಂತೆಯೇ ಯೂರೋಪ್ 17.89 ರಷ್ಟು ಎತ್ತರದ ಕಟ್ಟಡಗಳನ್ನು ಹೊಂದಿದ್ದರೆ, ದಕ್ಷಿಣ ಅಮೇರಿಕಾವು ಶೇ.13.15, ಓಸಿಯಾನಿಯಾ (ಭೌಗೋಳಿಕ ಪ್ರದೇಶ) ಶೇ.3.06 ಹಾಗೂ ಆಫ್ರಿಕಾ ಶೇ.1.17ರಷ್ಟು ಎತ್ತರದ ಕಟ್ಟಡಗಳನ್ನು ಹೊಂದಿವೆ ಎಂದು ತಿಳಿಸಿದರು.

ಪ್ರಸ್ತುತ ಹಾಂಗ್‌ಕಾಂಗ್ ನಗರವನ್ನು ಹಿಂದಿಕ್ಕಿ ದುಬೈ ಗರಿಷ್ಠ ಸಂಖ್ಯೆಯ ಎತ್ತರದ ಕಟ್ಟಡಗಳನ್ನು ಹೊಂದಿದೆ. ಹಾಂಗ್‌ಕಾಂಗ್, ದುಬೈ ಅಥವಾ ನ್ಯೂಯಾರ್ಕ್‌ಗಳಲ್ಲಿ ಏಕೆ ಹೆಚ್ಚಿನ ಸಂಖ್ಯೆಯಲ್ಲಿ ಎತ್ತರದ ಕಟ್ಟಡಗಳಿವೆ ಎಂದು ಅವಲೋಕಿಸಿದರೆ, ಅಲ್ಲಿ ಭೂಮಿಯ ಲಭ್ಯತೆ ಕಡಿಮೆ ಇರುವುದೇ ಕಾರಣ. ಹಾಗಾಗಿ ಅಲ್ಲೆಲ್ಲಾ ಅಡ್ಡಲಾಗಿ ಕಟ್ಟಡ ವಿಸ್ತೀರ್ಣಗೊಳ್ಳುವುದು ಕಡಿಮೆ. ಇದಕ್ಕೆ ಬದಲಾಗಿ ಎತ್ತರದ ಕಟ್ಟಡಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾಣಸಿಗುತ್ತವೆ ಎಂದು ಹೇಳಿದರು.

ಗಗನಚುಂಬಿ ಕಟ್ಟಡಗಳು ಪರಿಸರಕ್ಕೆ ಪೂರಕವೋ ಅಥವಾ ಮಾರಕವೋ ಎಂಬ ಸಭಿಕರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಅದು ಯಾವ ರೀತಿಯ ಸಾಮಗ್ರಿ ಬಳಸುತ್ತೇವೆ ಎಂಬುದನ್ನು ಅವಲಂಬಿಸಿದೆ. ಇದಕ್ಕಾಗಿ ಐಜಿಬಿಸಿಯಲ್ಲಿ (ಇಂಟರ್‌ನ್ಯಾಷನಲ್ ಗ್ರೀನ್ ಬಿಲ್ಡಿಂಗ್ ಕೌನ್ಸಿಲ್) ರೇಟಿಂಗ್ ಆಧಾರದಲ್ಲಿ ನೋಡಬೇಕಾಗುತ್ತದೆ. ಈ ಕೌನ್ಸಿಲ್ ಯಾವ ಸಾಮಗ್ರಿ ಬಳಸಿದರೆ ಪರಿಸರಕ್ಕೆ ಮಾರಕ ಎಂಬ ಮಾರ್ಗಸೂಚಿ ನೀಡಿದೆ. ಹಾಗಾಗಿ ಬಳಸುವ ಸಾಮಗ್ರಿ ಆಧಾರದಲ್ಲಿ ಮಾರಕ ಅಥವಾ ಪೂರಕ ಎಂಬುದು ನಿರ್ಣಯವಾಗುತ್ತದೆ ಎಂದು ತಿಳಿಸಿದರು.

ಡಿವಿಎನ್ ಸ್ಮಾರಕದ ಟ್ರಸ್ಟಿಗಳೂ ಆದ ಡಿ.ವಿ.ನರಸಿಂಹರಾವ್ ಮೊಮ್ಮಗ ಪ್ರೊ. ಡಿ.ಎಸ್.ರಾಮಕೃಷ್ಣರಾವ್ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಇನ್ಸಿಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಮೈಸೂರು ಕೇಂದ್ರದ ಮಾಜಿ ಅಧ್ಯಕ್ಷ ಬಿ.ಎಸ್.ಪ್ರಭಾಕರ್, ಕಾರ್ಯದರ್ಶಿ ಡಾ.ಎಸ್.ಎ.ಮೋಹನ್ ಕೃಷ್ಣ, ಕಾರ್ಯಕ್ರಮ ಸಂಚಾಲಕರಾದ ಬಿ.ವಿ.ರವೀಂದ್ರನಾಥ್, ಕೆ.ಬಿ.ಭಾಸ್ಕರ್ ಮತ್ತಿತರರು ವೇದಿಕೆಯಲ್ಲಿದ್ದರು. ಇನ್ಸಿಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಮೈಸೂರು ಕೇಂದ್ರದ ಸದಸ್ಯರು, ಇಂಜಿನಿಯರಿಂಗ್ ವಿದ್ಯಾರ್ಥಿಗಳು ಸೇರಿದಂತೆ ಮತ್ತಿತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸಿಟಿಟ್ಯೂಷನ್ ಆಫ್ ಇಂಜಿನಿಯರ್ಸ್‌ನ ಎಸ್.ಪಿ.ಭಟ್ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಡಿ.ವಿ.ನರಸಿಂಹರಾವ್ ಸ್ಮಾರಕ ಉಪನ್ಯಾಸ ಕಾರ್ಯಕ್ರಮ'ದಲ್ಲಿ ಭಾಮೀಸ್ ಗ್ರೂಪ್ ಆಫ್ ಕಂಪನೀಸ್ ವ್ಯವಸ್ಥಾಪಕ ನಿರ್ದೇಶಕ ಡಾ.ಎಂ.ಡಿ.ರಾಘವೇಂದ್ರ ಪ್ರಸಾದ್ ಮಾತನಾಡಿದರು. (ಎಡದಿಂದ) ಇಂಜಿನಿಯರ್ಸ್ ಸಂಸ್ಥೆ ಮಾಜಿ ಕಾರ್ಯದರ್ಶಿ ಕೆ.ಬಿ.ಭಾಸ್ಕರ್, ಕಾರ್ಯದರ್ಶಿ ಡಾ.ಎಸ್.ಎ.ಮೋಹನ್‌ಕೃಷ್ಣ, ಮಾಜಿ ಅಧ್ಯಕ್ಷ ಬಿ.ಎಸ್.ಪ್ರಭಾಕರ್, ಡಿವಿಎನ್ ಸ್ಮಾರಕದ ಟ್ರಸ್ಟಿ ಪ್ರೊ.ಡಿ.ಎಸ್.ರಾಮಕೃಷ್ಣರಾವ್, ಇಂಜಿನಿಯರ್ಸ್ ಸಂಸ್ಥೆ ಮಾಜಿ ಕಾರ್ಯದರ್ಶಿ ಬಿ.ವಿ.ರವೀಂದ್ರನಾಥ್ ಅವರನ್ನು ಚಿತ್ರದಲ್ಲಿ ಕಾಣಬಹುದು.



ಡಿ.ವಿ.ನರಸಿಂಹರಾವ್ ಅವರು ಮೈಸೂರು ಸಂಸ್ಥಾನದ ರೈಲ್ವೆ ಇಲಾಖೆಯ ಕೊನೆ ಮುಖ್ಯ ಇಂಜಿನಿಯರ್ ಆಗಿದ್ದವರು. ಅಲ್ಲದೆ, ಮೈಸೂರಿನ ಪ್ರತಿಷ್ಠಿತ ಎನ್‌ಐಇ ಇಂಜಿನಿಯರಿಂಗ್ ಕಾಲೇಜು ಸಂಸ್ಥಾಪಕರಲ್ಲಿ ಒಬ್ಬರು.

ಅರ್ಜಿ ಆಹ್ವಾನ

ಮೈಸೂರು, ಮೇ 18–ಮೈಸೂರು ಸರಸ್ವತಿಪುರಂನ ಶ್ರೀ ಕೃಷ್ಣಧಾಮದ ಶ್ರೀ ಕೃಷ್ಣ ಮಿತ್ರ ಮಂಡಳಿ ವತಿಯಿಂದ ತ್ರಿಮತಸ್ಥ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಎಸ್‌ಎಸ್‌ಎಲ್‌ಸಿಯಲ್ಲಿ ಶೇ.95, ಪಿಯುಸಿಯಲ್ಲಿ ಶೇ.90, ಸಿಬಿಎಸ್‌ಸಿಯಲ್ಲಿ ಶೇ.96ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಹ ವಿದ್ಯಾರ್ಥಿಗಳು ಸ್ವವಿವರ, ಅಂಕಪಟ್ಟಿ, ಮೊಬೈಲ್ ನಂಬರ್ ಹಾಗೂ ಭಾವಚಿತ್ರದೊಂದಿಗೆ ಮೇ 28ರೊಳಗೆ ಅರ್ಜಿ ಸಲ್ಲಿಸಲು ಕೋರಲಾಗಿದೆ. ಮಾಹಿತಿಗೆ ದೂ. 0821–2544004, ಮೊ. 9845955417 ಸಂಪರ್ಕಿಸಬಹುದು.

ಮಾಜಿ ಪ್ರಧಾನಿ ಹೆಚ್‌ಡಿಡಿ ಜನ್ಮದಿನ ಸಂಭ್ರಮ




ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ 92ನೇ ಹುಟ್ಟುಹಬ್ಬವನ್ನು ಅವರ ಅಭಿಮಾನಿಗಳು ಮೈಸೂರಿನ ಅರಮನೆ ಕೋಟೆ ಆಂಜನೇಯ ದೇವಸ್ಥಾನದ ಬಳಿ ಶನಿವಾರ ಸರಳವಾಗಿ ಆಚರಿಸಿದರು. ರಾಜವಂಶಸ್ಥ, ಬಿಜೆಪಿ ಮುಖಂಡ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಜೆಡಿಎಸ್ ರಾಜ್ಯ ವಕ್ತಾರ, ವಕೀಲ ರವಿಚಂದ್ರೇಗೌಡ, ಜೆಡಿಎಸ್ ಚಾಮರಾಜ ಕ್ಷೇತ್ರದ ಅಧ್ಯಕ್ಷ ಪಿ.ಮಂಜುನಾಥ, ನಗರ ಹಿರಿಯ ಉಪಾಧ್ಯಕ್ಷ ಫಾಲ್ಕನ್ ಬೋರೇಗೌಡ, ನರಸಿಂಹರಾಜ ಕ್ಷೇತ್ರದ ಅಧ್ಯಕ್ಷ ರಾಮು ಸೇರಿದಂತೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

ಎಸ್‌ಎಸ್‌ಎಲ್‌ಸಿ: ಭೂಮಿಕಾ ರಾಜ್ಯಕ್ಕೆ 3ನೇ ಸ್ಥಾನ



ಮೈಸೂರು, ಮೇ 18–ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೈಸೂರಿನ ಮರಿಮಲ್ಲಪ್ಪ ಪ್ರೌಢಶಾಲೆ ವಿದ್ಯಾರ್ಥಿನಿ ಆರ್.ಭೂಮಿಕಾ 625ಕ್ಕೆ 621 ಅಂಕ ಗಳಿಸುವ ಮೂಲಕ ಜಿಲ್ಲೆಗೆ 3ನೇ ಸ್ಥಾನ, ರಾಜ್ಯಕ್ಕೆ 5ನೇ ಸ್ಥಾನ ಪಡೆದಿದ್ದಾರೆ. ಈಕೆ ಮೈಸೂರಿನ ನಿವಾಸಿ ರಂಗನಾಥ ಮತ್ತು ಗಾಯತ್ರಿ ದಂಪತಿ ಪುತ್ರಿ.


ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು, ಮೇ 18–ಆಯರಹಳ್ಳಿ ಮತ್ತು ಬನ್ನಿಮಂಟಪ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಕಾಮಗಾರಿ ನಿಮಿತ್ತ ಮೇ 19ರಂದು ಬೆಳಗ್ಗೆ 10 ರಿಂದ ಸಂಜೆ 5.30ರವರೆಗೆ ಆಯರಹಳ್ಳಿ ವಿವಿ ಕೇಂದ್ರದ ವ್ಯಾಪ್ತಿಗೆ ಬರುವ ಚಿಕ್ಕೇಗೌಡನಹುಂಡಿ, ದೇವಲಾಪುರ, ರಾಯನಹುಂಡಿ, ಆಯರಹಳ್ಳಿ, ಮರಿಗೌಡನಹುಂಡಿ, ಕುಂಬ್ರಹಳ್ಳಿ, ಕುಂಬ್ರಹಳ್ಳಿ ಮಠ, ಸೋಮೇಶ್ವರಪುರ, ಬಸಹಳ್ಳಿಹುಂಡಿ, ಕಿರಾಳು, ಹದಿನಾರು, ಹದಿನಾರು ಮೊಳೆ, ಮೂಡಳ್ಳಿ, ಮಲ್ಲ ರಾಜಹುಂಡಿ, ಭರಣಿ ಕುಡಿಯುವ ನೀರಿನ ಸ್ಥಾವರ ಹಾಗೂ ಸುತ್ತಮುತ್ತ. ಬನ್ನಿಮಂಟಪ ವಿ.ವಿ ಕೇಂದ್ರದ ವ್ಯಾಪ್ತಿಗೆ ಬರುವ ಸಿದ್ದಿಖಿನಗರ, ಶಿವರಾತ್ರೀಶ್ವರ ನಗರ, ಮಣಿಪಾಲ್ ಹಾಸ್ಪಿಟಲ್ಸ್, ಹನುಮಂತನಗರ, ಹುಡ್ಕೊ, ಇಂಡಸ್ಟ್ರಿಯಲ್ 'ಎ' ಬಡಾವಣೆ, 'ಸಿ' ಬಡಾವಣೆ, ಟೆಲಿಫೋನ್ ಎಕ್ಸ್‌ಚೇಂಜ್, ಕೆಎಸ್‌ಆರ್‌ಟಿಸಿ ಡಿಪೋ, ಲಿಡ್ಕರ್ ಕಾಲೋನಿ, ಇಂಡಸ್ಟ್ರಿಯಲ್ 'ಬಿ' ಬಡಾವಣೆ, ಹೈವೆ ವೃತ್ತ, ಸ್ಟಾರ್ ಆಫ್ ಮೈಸೂರ್, ಪರಹಾ ಕಾಂಪೌಂಡ್, ಕಾವೇರಿನಗರ, ಬೆಲವತ್ತ, ಸಾದನಹಳ್ಳಿ, ಸಿದ್ದಲಿಂಗಪುರ, ಕೆ.ಆರ್.ಮಿಲ್ ಕಾಲೋನಿ, ನಾಗನ ಹಳ್ಳಿ, ಲಕ್ಷ್ಮಿ ಪುರ, ಕಳಸ್ತವಾಡಿ, ಮೈಸೂರು–ಬೆಂಗಳೂರು ಮುಖ್ಯ ರಸ್ತೆ ಹಾಗೂ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ನಿಧನ

ಭ್ರಮರಾಂಬ (ಕಲ್ಯಾಣಿ)




ಮೈಸೂರು, ಮೇ 18– ಮೂಲತಃ ಪಿರಿಯಾಪಟ್ಟಣ ತಾಲೂಕಿನ ಕಂಪಲಾಪುರ ಗ್ರಾಮದವರೂ ಆದ ಮೈಸೂರಿನ ವಿದ್ಯಾರಣ್ಯಪುರಂ ನಿವಾಸಿ ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ಮಾಜಿ ನಿರ್ದೇಶಕ ಲೇಟ್ ಕೆ.ವಿ.ಶೇಷಾದ್ರಿ ಅವರ ಧರ್ಮಪತ್ನಿ ಶ್ರೀಮತಿ ಭ್ರಮರಾಂಬ (ಕಲ್ಯಾಣಿ) ಅವರು ಶುಕ್ರವಾರ ನಿಧನರಾದರು. ಅವರಿಗೆ 80 ವರ್ಷ ವಯಸ್ಸಾಗಿತ್ತು. ಮೃತರು ನಾಲ್ವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಶನಿವಾರ ಬೆಳಗ್ಗೆ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು.

ಬಿದ್ದಂಡ ಪುಷ್ಪಾ ಪೊನ್ನಪ್ಪ



ಮೈಸೂರು, ಮೇ 18–ಮೈಸೂರಿನ ರೂಪಾ ನಗರ ನಿವಾಸಿ ದಿವಂಗತ ಬಿದ್ದಂಡ ಪೊನ್ನಪ್ಪ (ಲೋಕೇಶ್) ಅವರ ಪತ್ನಿ ಬಿದ್ದಂಡ ಪುಷ್ಪಾ ಪೊನ್ನಪ್ಪ (ತಾಮನೆ ಮಂದೆಡ) ಅವರು ಶನಿವಾರ ಸಂಜೆ ನಿಧನರಾದರು. ಅವರಿಗೆ 71 ವರ್ಷ ವಯಸ್ಸಾಗಿತ್ತು. ಮೃತರು ಇಬ್ಬರು ಪುತ್ರರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ಮೇ 20ರಂದು ಮಧ್ಯಾಹ್ನ 2 ಗಂಟೆಗೆ ವಿಜಯನಗರ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.05.2024 ಭಾನುವಾರ, ಮಳೆ ನಕ್ಷತ್ರ: ಕೃತ್ತಿಕ 11.05.2024 ರಿಂದ 24.05.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಹಸ್ತ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಶ್ರೀ ರೇಣುಕಾದೇವಿ ಕರಗ ದೇವಸ್ಥಾನ ಟ್ರಸ್ಟ್, ಇಟ್ಟಿಗೆಗೂಡು :** ಮೈಸೂರು ಕರಗ ಶತಮಾನೋತ್ಸವ, ಮಧ್ಯಾಹ್ನ 12 ಗಂಟೆಗೆ ಅಂಬಲಿ ಪೂಜೆ, ಅರಿಶಿನ ನೀರಿನ ಓಕುಳಿಯಾಟ, ಸಂಜೆ 4 ಗಂಟೆಯಿಂದ ಭಕ್ತಾದಿಗಳಿಂದ ತಂಬಿಟ್ಟು ಆರತಿ, ರಾತ್ರಿ 7ಕ್ಕೆ ಇಟ್ಟಿಗೆಗೂಡಿನ ಬೀದಿಗಳಲ್ಲಿ ಕರಗ ಉತ್ಸವ, ರಾತ್ರಿ 11 ಗಂಟೆಗೆ ಅಮ್ಮನವರ ಕರಗದ ಉಯ್ಯಾಲೋತ್ಸವ, ರಾತ್ರಿ 12 ಗಂಟೆಗೆ ಮಹಾಮಂಗಳಾರತಿ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮಕ್ಕಳ ಕಣ್ಣಿನ ದೃಷ್ಟಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ವಿಶೇಷ ಬೇಸಿಗೆ ಆರೋಗ್ಯ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್ :** ಬ್ರಹ್ಮ ರಥೋತ್ಸವ, ಬೆಳಗ್ಗೆ 9ಕ್ಕೆ ಚತುಸ್ಥಾನಾರ್ಚನೆ, ಪ್ರಾಕಾರೋತ್ಸವ, ನಿತ್ಯಹೋಮ, ಸಂಜೆ 6ಕ್ಕೆ ಶಾಂತಿಹೋಮ, ಮಹಾಪೂರ್ಣಾಹುತಿ, ಧ್ವಜಾವರೋಹಣ, ಪುಷ್ಪಯಾಗ, ರಾಷ್ಟ್ರಾಶೀರ್ವಾದ, ಸ್ಥಳ: ಟ್ರಸ್ಟ್ ಆವರಣ, ಗೋಕುಲಂ 3ನೇ ಹಂತ.

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್:** ಆರ್ಟಿಸ್ಟ್ರಿ ಚಿನ್ನಾಭರಣ ಪ್ರದರ್ಶನ, ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋ ರೂಂ, ಬಿ.ಎನ್.ರಸ್ತೆ, ಬೆಳಗ್ಗೆ 10 ಗಂಟೆಯಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಪಾರಂಪರಿಕ ಹಾಸು ಆಟಗಳ 10ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್–ಹ್ಯಾಂಡಿಕ್ರಾಫ್ಟ್ ಸೇಲ್ಸ್ ಎಂಪೋರಿಯಂ, ಮೃಗಾಲಯ ಎದುರು, ಬೆಳಗ್ಗೆ 10 ರಿಂದ.

■ **ನರೆಡ್ಕೋ ಫೌಂಡೇಷನ್, ರೋಟರಿ ಕ್ಲಬ್ ಆಫ್ ಮೈಸೂರು ವೆಸ್ಟ್ :** ಆರೋಗ್ಯ ತಪಾಸಣಾ ಶಿಬಿರ, ರಕ್ತದಾನ ಶಿಬಿರ, ಕಟ್ಟಡ ಕಾರ್ಮಿಕರ ಕಾರ್ಡ್ ನೋಂದಣಿ, ಮುಖ್ಯ ಅತಿಥಿಗಳು : ಶಾಸಕ ಹರೀಶ್‌ಗೌಡ, ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಚೆಸ್ಕಾಂ ಅಧ್ಯಕ್ಷರು ಮತ್ತು ಶಾಸಕರಾದ ರಮೇಶ್ ಬಂಡಿಸಿದ್ದೇಗೌಡ, ಹೆಬಿಟೇಟ್ ಶೆಲ್ಟರ್ಸ್ ವ್ಯವಸ್ಥಾಪಕ ನಿರ್ದೇಶಕ ದೀಪಕ್ ಲುಲ್ಲಾ, ಸ್ಥಳ: ರೋಟರಿ ಕ್ಲಬ್ ಆಫ್ ಮೈಸೂರು ವೆಸ್ಟ್, ಕಾಮಾಕ್ಷಿ ಆಸ್ಪತ್ರೆ ಹತ್ತಿರ, ಸರಸ್ವತಿಪುರಂ, ಬೆಳಗ್ಗೆ 10ಕ್ಕೆ

■ **ಸಹಜ ಸಮೃದ್ಧ :** ದೇಸಿ ಅಕ್ಕಿ ಮೇಳ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ಬೆಳಗ್ಗೆ 10 ರಿಂದ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರದ 25ನೇ ವಾರ್ಷಿಕೋತ್ಸವ, ಬೆಳಗ್ಗೆ 10ಕ್ಕೆ ಗಣಪತಿ ಹೋಮ, ಉಚಿತ ಸಾಮೂಹಿಕ ಸತ್ಯನಾರಾಯಣಸ್ವಾಮಿ ವ್ರತ, ಸಂಜೆ 6ಕ್ಕೆ ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರದ ರಜತೋತ್ಸವ ಉದ್ಘಾಟನೆ, ಉಪಸ್ಥಿತರು : ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಸ್ಥಳ: ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಕನ್ನಡ ಸಾಹಿತ್ಯ ಕಲಾಕೂಟ, ಹೊಯ್ಸಳ ಕನ್ನಡ ಸಂಘ :** ಪ್ರಕಾಶಕರಾದ ಟಿ.ಎಸ್.ಛಾಯಾಪತಿ ಸಂಸ್ಕೃತಿ ಪುರಸ್ಕಾರ ಹಾಗೂ ಪುಸ್ತಕಗಳ ಲೋಕಾರ್ಪಣಾ ಸಮಾರಂಭ, ಅಧ್ಯಕ್ಷತೆ ಹಾಗೂ ಪ್ರಶಸ್ತಿ ಪ್ರದಾನ : ರಾಜಶೇಖರ್ ಮೆಡಿಕಲ್ ಫೌಂಡೇಷನ್ ನಿರ್ದೇಶಕ ಡಾ. ಹೆಚ್.ಬಿ. ರಾಜಶೇಖರ್, ಕೃತಿಗಳ ಲೋಕಾರ್ಪಣೆ : ಸಂಸ್ಕೃತಿ ಚಿಂತಕ ಪ್ರೊ. ಎಂ. ಕೃಷ್ಣೇಗೌಡ, ಪ್ರಶಸ್ತಿ ಸ್ವೀಕಾರ : ಕರ್ನಾಟಕ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಪುಸ್ತಕಗಳ ಕುರಿತು : ಜೆಎಸ್‌ಎಸ್ ಮಹಾವಿದ್ಯಾಪೀಠ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ, ಮುಖ್ಯ ಅತಿಥಿಗಳು : ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ಪ್ರಾಸ್ತಾವಿಕ ನುಡಿ : ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಉಪಸ್ಥಿತರು : ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ ಪ್ರಕಾಶಕ ಶ್ರೀಮತಿ ಪ್ರತಿಭಾ ಛಾಯಾಪತಿ, ಹೊಯ್ಸಳ ಕನ್ನಡ ಸಂಘದ ಕಾರ್ಯದರ್ಶಿ ರಂಗನಾಥ್, ಮೈಸೂರು, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ರಚನ ಪ್ರಕಾಶನ :** ಪ್ರೊ. ಸಿ.ಪಿ. ಸಿದ್ಧಾಶ್ರಮ ಅವರು ಬರೆದಿರುವ ಕೃತಿಗಳ ಬಿಡುಗಡೆ ಸಮಾರಂಭ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉದ್ಘಾಟನೆ: ಸಾಹಿತಿ ಪ್ರೊ. ಬರಗೂರು ರಾಮಚಂದ್ರಪ್ಪ, ಕೃತಿಗಳ ಬಿಡುಗಡೆ : ವಿದ್ವಾಂಸರಾದ ಪ್ರೊ. ರಾಮೇಗೌಡ (ರಾಗೌ), ಕೃತಿಗಳ ಕುರಿತು ಮಾತನಾಡುವವರು : ಪ್ರೊ. ಎಂ.ಎಚ್. ರುದ್ರಮುನಿ, ಡಾ. ಆರ್. ಗುರುಸ್ವಾಮಿ, ಡಾ. ಎಂ.ಎಸ್. ಅನಿತಾ, ಪ್ರಾಸ್ತಾವಿಕ ನುಡಿ : ಪ್ರೊ. ಕೆ. ತಿಮ್ಮಯ್ಯ, ಉಪಸ್ಥಿತರು : ಪ್ರಕಾಶಕ ಕೆ.ಸಿ. ಓಂಕಾರಪ್ಪ, ಡಾ. ಜಿ. ಮಾದಪ್ಪ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 11ಕ್ಕೆ

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ಘಟಕ :** ವಚನ ಗಾಯನ ಶಿಬಿರದ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಜೆಎಸ್‌ಎಸ್ ವಿದ್ಯಾಸಂಸ್ಥೆ ಪ್ರಾಂಶುಪಾಲ ಪ್ರೊ. ಕೆ. ರಾಮಮೂರ್ತಿರಾವ್, ಪ್ರಮಾಣ ಪತ್ರ ವಿತರಣೆ : ನಾದಹಂಸಿನಿ ಭಜನಾ ಸಂಘದ ಅಧ್ಯಕ್ಷ ಉಮಾ ಮಹದೇವಸ್ವಾಮಿ, ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ, ಬೆಳಗ್ಗೆ 11ಕ್ಕೆ.

■ **ಮೈಸೂರು ವೀರಶೈವ ಸಜ್ಜನ ಸಂಘ :** ಜಗಜ್ಯೋತಿ ಶ್ರೀ ಬಸವೇಶ್ವರರ ಜಯಂತ್ಯೋತ್ಸವ, ಬಸವ ಜಯಂತಿ ಆಚರಣೆ ಮತ್ತು ಮೆರವಣಿಗೆ, ಬೆಳಗ್ಗೆ 11ಕ್ಕೆ ಶ್ರೀ ಶಾರದಾ ಮಹಿಳಾ ಸೇವಾ ಸಮಾಜದವರಿಂದ ಮಹಿಳೆಯರು ಹಾಗೂ ಮಕ್ಕಳಿಗೆ ವಚನ ಗಾಯನ ಸ್ಪರ್ಧೆ, ವಿವಿಧ ಮನೋರಂಜನಾ ಕಾರ್ಯಕ್ರಮಗಳು, ಮಧ್ಯಾಹ್ನ 12.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 1ಕ್ಕೆ ಪ್ರಸಾದ, ಮಧ್ಯಾಹ್ನ 3 ರಿಂದ ಸಭಾ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಉಪನಿರ್ದೇಶಕರಾದ ಡಾ. ಮಂಜುಳ ಹುಲ್ಲಹಳ್ಳಿ, ಸಂಘದ ಹಿರಿಯ ಸದಸ್ಯರಾದ ಸಿ. ನಾಗರಾಜ್, ಜಿ. ವಿರೂಪಾಕ್ಷಪ್ಪ, ಎಂ.ಬಿ. ವಿಜಯಶಂಕರ್, ಎಂ.ಸಿ. ಶಿವಶಂಕರ್ ಮತ್ತು ಶ್ರೀಮತಿ ದ್ರಾಕ್ಷಾಯಿಣಿ ಅವರಿಗೆ ಸನ್ಮಾನ, ಅಧ್ಯಕ್ಷತೆ : ಮೈಸೂರು ವೀರಶೈವ ಸಜ್ಜನ ಸಂಘದ ಅಧ್ಯಕ್ಷ ಎಂ.ಟಿ. ಮಲ್ಲಿಕಾರ್ಜುನ್, ಸ್ಥಳ: ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರ, ಕಬೀರ್ ರಸ್ತೆ.

■ **ಕನ್ನಡ ಕಲಿಕಾ ಗಾನ ಕಲಾವಿದರ ವೇದಿಕೆ :** ಡಾ. ಎಸ್.ಪಿ. ಬಾಲಸುಬ್ರಮಣ್ಯಂ ಸ್ಮರಣಾರ್ಥ ರಾಜ್ಯ ಮಟ್ಟದ ಗಾಯನ ಕಾರ್ಯಕ್ರಮ, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಮಧ್ಯಾಹ್ನ 2 ರಿಂದ.

■ **ಜನ ಚೈತನ್ಯ ಫೌಂಡೇಷನ್ :** ಡಾ. ಬಿ.ಆರ್. ಅಂಬೇಡ್ಕರ್‌ರವರ 133ನೇ ಜಯಂತಿ, ಮಾನವತಾವಾದಿ, ಸಾಂಸ್ಕೃತಿಕ ನಾಯಕ ಶ್ರೀ ಬಸವೇಶ್ವರ ಜಯಂತಿ ಪ್ರಯುಕ್ತ ಸಾಂಸ್ಕೃತಿಕ ಕಾರ್ಯಕ್ರಮ, ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸ್ಥಳ: ಪುರಭವನ, ಸಂಜೆ 4ಕ್ಕೆ.

■ **ಶ್ರೀ ಸುಬ್ರಮಣ್ಯಸ್ವಾಮಿ ದೇವಸ್ಥಾನ ಟ್ರಸ್ಟ್ :** 50ನೇ ವರ್ಷದ ವರ್ಧಂತಿ ಮಹೋತ್ಸವ, ಬೆಳಗ್ಗೆ 4.15ಕ್ಕೆ ಸಂಕಲ್ಪ, ಶ್ರೀ ಕಾಮಕಾಮೇಶ್ವರಿ ದೇವಸ್ಥಾನದಿಂದ 50ನೇ ಸಹಸ್ರ ಕಾವಡಿ ಪಾದಯಾತ್ರೆ, ಕಳಶ ಸ್ಥಾಪನೆ, ಕಳಶಾರ್ಚನೆ, ಸುಬ್ರಹ್ಮಣ್ಯ ಹೋಮ, ಪೂರ್ಣಾಹುತಿ, ಕುಂಭಾಭಿಷೇಕ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 6ಕ್ಕೆ ವಾಸ್ತು ಬೀದಿಯಲ್ಲಿ ಬೆಳ್ಳಿ ರಥೋತ್ಸವ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ವಿಶ್ವೇಶ್ವರನಗರ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹಾಮೇಧಾನಂದ ಅವರಿಂದ ಮನುಷ್ಯನ ನೈಜ ಸ್ವರೂಪ ಕುರಿತು ಉಪನ್ಯಾಸ, ಸ್ಥಳ : ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ರಂಗಾಯಣ :** ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಆ ಮನಿ ನಾಟಕ ಪ್ರದರ್ಶನ, ನಿರ್ದೇಶನ : ಮಂಜುನಾಥ ಬಡಿಗೇರ, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ.

■ **ನಮ್ದೆ ನಟನೆ ಸಾಂಸ್ಕೃತಿಕ ವೇದಿಕೆ :** ಬೆಂಗಳೂರಿನ ನಮ್ದೆ ನಟನೆ ಸಾಂಸ್ಕೃತಿಕ ವೇದಿಕೆ ಕಲಾವಿದರಿಂದ ನಾಯಿ ಕಳೆದಿದೆ ನಾಟಕ ಪ್ರದರ್ಶನ, ನಿರ್ದೇಶನ : ರಾಜೇಂದ್ರ ಕಾರಂತ್, ಸ್ಥಳ: ಕಿರು ರಂಗಮಂದಿರ, ಕಲಾಮಂದಿರದ ಆವರಣ, ಸಂಜೆ 7ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಒಡಹುಟ್ಟಿನ ನುಡಿಗಳು–ಕನ್ನಡದ ಒಡನಾಡಿ ಭಾಷೆಗಳನ್ನು ಕುರಿತ ಬಾನುಲಿ ಸರಣಿ, ಲೇಖನ ಹಾಗೂ ಪ್ರಸ್ತುತಿ: ಡಾ. ತೀತೀರ ರೇಖಾ ವಸಂತ, 6.40 ಪದ ಸಂಸ್ಕೃತಿ, ಪ್ರಸ್ತುತಿ:ಡಾ. ಆರ್. ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು –ಪ್ರೊಫೆಸರ್ ಎಂ. ಗೋಪಾಲಕೃಷ್ಣ ಅಡಿಗರ ರಚನೆಗಳು, 9.40 ನಮ್ಮ ಆರೋಗ್ಯ ಕಾರ್ಯಕ್ರಮ: 'ಮಕ್ಕಳಲ್ಲಿ ಭಾವನಾತ್ಮಕ ಒತ್ತಡದಿಂದ ಉಂಟಾಗುವ ತೊಂದರೆಗಳು, ನಿರ್ವಹಣೆ ಮತ್ತು ಪರಿಹಾರ' ಕುರಿತು ಮೈಸೂರಿನ ಎಂಡೋಕ್ರೈನಾಲಜಿಸ್ಟ್ ಡಾ. ರೇಖಾ ವಿ. ಭಟ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್ 10.00 ಕೇಳಿ ಗಿಳಿಗಳೇ – ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ? ನೇರ ಫೋನ್ ಇನ್ ಕಾರ್ಯಕ್ರಮ, 10.30 ಮಕ್ಕಳ ಮಂಟಪ–ಮುಖಾಮುಖಿ ಗ್ರಂಥಾಲಯ ಬಳಕೆ, ಕಲಿಕೆ ಕುರಿತು ಮಕ್ಕಳ ಪ್ರಶ್ನೆಗಳಿಗೆ ಉತ್ತರಿಸುತ್ತಾರೆ ಗ್ರಂಥ ಪಾಲಿಕೆ ಜೆ. ರಜನಿ. ಭಾಗವಹಿಸುವ ಮಕ್ಕಳು: ಮೈತ್ರಿ ಹಾಗೂ ಶಾನ್ ಗೌಡ, 11.00 ಮಿಶ್ರ ಮಾಧುರ್ಯ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ–ಯರಗನಹಳ್ಳಿ ಗ್ರಾಮದ ಸಣ್ಣಮ್ಮ ಮತ್ತು ಸಂಗಡಿಗರಿಂದ ಹೊನ್ನಮ್ಮನ ಹಾಡು, ಪ್ರಸ್ತುತಿ: ಡಾ. ಮೈಸೂರು ಉಮೇಶ್, 1.20 ಭಾವಗೀತೆ– ಆರ್. ವಿ. ಅನುಪಮ, 2.40 ಕನ್ನಡ ಚಲನಚಿತ್ರ ಧ್ವನಿ ವಾಹಿನಿ 'ಅರಗಿಣಿ', 3.45 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ: ತಾಟಕಿ ಸಂಹಾರ, ಪ್ರಸ್ತುತಿ: ಕುಳಾಯಿಯ ಬ್ರಹ್ಮಶ್ರೀ ಗುರುನಾರಾಯಣ ಯಕ್ಷಗಾನ ಮಂಡಳಿಯ ಕಲಾವಿದರು, 6.55 ಕೃಷಿರಂಗ : ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರು ಉಮೇಶ್, ಕೃಷಿ ಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ, ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್. ಲೋಕೇಶ್ವರಿ, 8.00 'ಹಾದಿಯಲ್ಲಿ ಕಂಡ ಮುಖ' ಬಾನುಲಿ ಸರಣಿ ಕೊಳ್ಳೇಗಾಲ ತಾಲೂಕು ಮುಡಿಗುಂಡ ಗ್ರಾಮದ ಚಿತ್ರ ಕಲಾವಿದ, ರಂಗ ಸಂಘಟಕ, ಗಾಯಕ ಜೆ. ಮೂರ್ತಿ ಅವರೊಂದಿಗೆ ಸಂವಾದ, ಪ್ರಸ್ತುತಿ:ಅಬ್ದುಲ್ ರಶೀದ್, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ ವಿದೂಷಿ ಉಷಾ ವಿಜಯ ಕುಮಾರ್–ಗೋಟು ವಾದ್ಯ

ಹಸಿರು ನಮ್ಮ ಉಸಿರು

ನಕ್ಕರೆ ಅದೇ ಸ್ವರ್ಗ

ಆತ : "ನನಗೆ ತುಂಬಾ ನೆಗಡಿಯಾದಾಗ ಒಂದು ಕ್ವಾರ್ಟರ್ ವಿಸ್ಕಿ ತರಿಸ್ತೀನಿ. ಅರ್ಧ ಗಂಟೇಲಿ ಮಾಯ ಆಗಿ ಬಿಡುತ್ತೆ"

ಈತ : "ಭೇಷ್ ! ನೆಗಡಿ ಅಷ್ಟು ಬೇಗ ಹೋಗುತ್ತಾ?"

ಆತ : "ಮಾಯವಾಗೋದು ನೆಗಡಿಯಲ್ಲ, ವಿಸ್ಕಿ!"

ಮೈಸೂರು ಮಿತ್ರ

ಭಾನುವಾರ, 19 ಮೇ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಬುದ್ಧಿವಂತರು ತಾವು ಇಚ್ಛಾಪೂರ್ವಕವಾಗಿ ಕೈಗೊಂಡ ಕಾರ್ಯವನ್ನು ಕೈಗೂಡುವವರೆಗೂ ಬಿಡುವುದಿಲ್ಲ –ಸಮಯೋಚಿತ ಪದ್ಯಮಾಲಿಕಾ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಒಪ್ಪವಿಲ್ಲದ ಮಾತು / ತುಪ್ಪವಿಲ್ಲದ ಊಟ

ನಿಮ್ಮ ಪತ್ರಗಳು

■ ಮೋಡ ಕವಿದ ವಾತಾವರಣ ಇದ್ದರೆ ಮಾತ್ರ ಮೋಡ ಬಿತ್ತನೆ ಸಾಧ್ಯ?

ಮಾನ್ಯರೆ,

ಮುಖ್ಯಮಂತ್ರಿಗಳು ಮೋಡ ಬಿತ್ತನೆ ಮಾಡಿ, ಕೆರೆ ಕಟ್ಟೆಗಳಿಗೆ ನೀರು ತುಂಬಿಸ ಬೇಕೆಂದು, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮನವಿ ಮಾಡಿದ್ದಾರೆ. ಅವರ ಸಲಹೆಯೇನೋ ಚೆನ್ನಾಗಿದೆ. ಆದರೆ ಅದಕ್ಕೂ ಪ್ರಕೃತಿಯ ಸಹಕಾರ ಬೇಕೆ ಬೇಕು.

ಭೂಮಿಯಿಂದ ಮೋಡವನ್ನು ತೆಗೆದುಕೊಂಡು ಹೋಗಿ ಆಕಾಶದಲ್ಲಿ ಮೋಡ ಬಿತ್ತನೆ ಮಾಡಲು ಬರುವುದಿಲ್ಲ. ಇಲ್ಲಿ ನಾವು ಗಮನಿಸಬೇಕಾದ ಮುಖ್ಯ ಸಂಗತಿ ಎಂದರೆ ಮುಂಗಾರು ಮಳೆ ಸುರಿಯದೆ ವಿಫಲವಾದರೆ ಆ ನಂತರವಷ್ಟೇ ಮೋಡ ಬಿತ್ತನೆಯ ಯೋಚನೆ ಮಾಡಲು ಸಾಧ್ಯ. ನಮ್ಮ ದೇಶದಲ್ಲಿ ಇನ್ನೂ ಮುಂಗಾರು ಆರಂಭವಾಗಿಲ್ಲ. ಮುಂಗಾರು ಆರಂಭವಾಗುವುದೇ ಜೂನ್ ಒಂದರ ನಂತರ. ದಟ್ಟ ಮೋಡಗಳು ಕವಿದು ಕೆಲ ದಿನಗಳವರೆಗೂ ನಿರಂತರ ಮಳೆಯಾಗುವುದೇ ಮುಂಗಾರಿನ ಲಕ್ಷಣ.

ಆದರೆ ದಟ್ಟ ಮೋಡಗಳು ಆಕಾಶದಲ್ಲಿ ಕವಿದರೂ ಕೇವಲ ಅಲ್ಪ ಸ್ವಲ್ಪ ಮಳೆಯಾಗುವುದು ಅಥವಾ ಮಳೆಯೇ ಆಗದಿರುವುದು ಸಂಭವಿಸಿದಾಗ (ಮುಂಗಾರು ವಿಫಲವಾದ ನಂತರ) ಮಾತ್ರ ರಾಸಾಯನಿಕಗಳ (ಅಲ್ಯೂಮಿನಿಯಂ ಹರಳು)ನ್ನು ವಿಮಾನದಲ್ಲಿ ಸಿಂಪಡಿಸುವ ಮೂಲಕ ಮೋಡ ಬಿತ್ತನೆ ಮಾಡಿ ಮಳೆ ಬರಿಸುವ ಮಾನವ ಪ್ರಯತ್ನ ಮಾಡಬಹುದು.

ನಮ್ಮ ದೇಶ, ರಾಜ್ಯ ಸೇರಿದಂತೆ ವಿದೇಶಗಳಲ್ಲಿ ಕೂಡ ಮೋಡ ಬಿತ್ತನೆ ಮಾಡಿದ ಉದಾಹರಣೆಗಳಿವೆ. ಆದರೆ ಮೋಡ ಬಿತ್ತನೆ ವಿಫಲವಾದದ್ದೇ ಹೆಚ್ಚು. ಆಗೊಮ್ಮೆ ಮಳೆಯಾಗಿದ್ದರೂ ಅದು ಕಾಕತಾಳೀಯವಷ್ಟೇ.

ಇದೀಗ ಮಳೆಯೇ ಆಗದ ಸೌದಿ ಅರೇಬಿಯಾದಲ್ಲಿ ಕಳೆದ ವಾರ 25 ಸೆ.ಮೀ. ಹಾಗೂ ಈ ವಾರ 5 ಸೆ.ಮೀ. ಮಳೆ ಸುರಿದು ಪ್ರವಾಹ ಎಬ್ಬಿಸಿದೆ. ಇದಕ್ಕೂ ಮೋಡ ಬಿತ್ತನೆ ಮಾಡಿದ್ದು ಕಾರಣ ಎಂದು ಕೆಲವರು ಹೇಳಿದ್ದಾರೆ. ಆದರೆ ಈ ವರ್ಷ ದಾಖಲಾಗಿರುವ ಭಾರಿ ತಾಪಮಾನ ಏರಿಕೆ ಹಾಗೂ ಹಾಗೂ ಹವಾಮಾನ ಬದಲಾವಣೆಯೇ ಇದಕ್ಕೆ ಕಾರಣವೆಂದು ವೈಜ್ಞಾನಿಕ ವರದಿಗಳು ತಿಳಿಸುತ್ತವೆ. ಆದ್ದರಿಂದ ಮೋಡ ಕವಿದ ವಾತಾವರಣವಿದ್ದರೆ ಮಾತ್ರ ಮೋಡ ಬಿತ್ತನೆ ಸಾಧ್ಯ ಎನ್ನುವುದನ್ನು ತಿಳಿಸಬಯಸುತ್ತೇನೆ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

■ ಪ್ರವಾಸಿ ತಾಣಗಳಲ್ಲಿ ಭದ್ರತೆ ಒದಗಿಸಲಿ

ಮಾನ್ಯರೆ,

ಬೇಸಿಗೆ ಕಾಲ ಮುಗಿದು ಈಗ ತಾನೆ ಮಳೆಗಾಲ ಆರಂಭವಾಗಿದೆ. ನಾಡಿನಲ್ಲಿರುವ ಅನೇಕ ಕೆರೆ, ಕಾಲುವೆ, ನದಿ, ಡ್ಯಾಮ್‌ಗಳಲ್ಲಿ ನೀರಿಲ್ಲದೆ ಪ್ರವಾಸಿಗರು ಸಹ ಕಡಿಮೆಯಾಗಿದ್ದರು. ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಮಳೆ ಆರ್ಭಟ ಶುರುವಾಗಿರುವ ಹಿನ್ನೆಲೆಯಲ್ಲಿ ಪ್ರವಾಸಿ ತಾಣಗಳಾದ ಮಡಿಕೇರಿಯ ಅಬ್ಬಿ ಜಲಪಾತ, ಚಿಕ್ಲಿಹೊಳೆ, ಚಾಮರಾಜನಗರದ ಸುವರ್ಣಾವತಿ ಜಲಾಶಯ, ಮೈಸೂರಿನ ತಲಕಾಡು, ಕಬಿನಿ ಹಿನ್ನೀರು, ಕಾವೇರಿ – ಕಪಿಲಾ ನದಿ, ಮಂಡ್ಯ ಜಿಲ್ಲೆಯ ಕನ್ನಂಬಾಡಿ ಕಟ್ಟೆಯ ಹಿನ್ನೀರು, ಬಲಮುರಿ – ಎಡಮುರಿ ಮತ್ತು ಶಿವನಸಮುದ್ರದ ಗಗನಚುಕ್ಕಿ, ಭರಚುಕ್ಕಿ, ಶಿವಮೊಗ್ಗದ ಜೋಗ್ ಜಲಪಾತ, ಇತರ ಕೆರೆ ಕಾಲುವೆಗಳಿಗೂ ಅಪಾರ ಪ್ರಮಾಣದ ಯುವಕ ಯುವತಿಯರು, ಶಾಲಾ ಕಾಲೇಜಿನ ವಿದ್ಯಾರ್ಥಿಗಳು, ಅನೇಕ ಕುಟುಂಬ ಗಳು, ಸ್ನೇಹಿತ – ಸ್ನೇಹಿತೆಯರ ಗುಂಪುಗಳು ಪ್ರವಾಸಿ ತಾಣಗಳಿಗೆ ಸಮಯ ಕಳೆಯಲು ಬರುತ್ತಾರೆ. ಈ ಸಮಯಗಳಲ್ಲಿ ನೀರಿಗೆ ಇಳಿದು ಆಟ ಆಡುವ ಸಮಯಗಳಲ್ಲಿ ಎಷ್ಟೋ ಅನಾಹುತಗಳು ಈಗಾಗಲೇ ಸಂಭವಿಸಿವೆ. ಮುಂದಿನ ದಿನಗಳಲ್ಲಿ ನೀರಿನಲ್ಲಿ ಆಟವಾಡುವ ಸಮಯದಲ್ಲಿ ಸಾವು ನೋವುಗಳು ಆಗದಿರಲಿ ಎಂಬ ಉದ್ದೇಶದಿಂದ ಜಲಾವೃತ ಪ್ರವಾಸಿ ತಾಣಗಳಲ್ಲಿ ಭದ್ರತೆ ಒದಗಿಸಲು ರಾಜ್ಯ ಸರ್ಕಾರವು ಪ್ರವಾಸೋದ್ಯಮ ಇಲಾಖೆಗೆ ಮಾಹಿತಿ ನೀಡಿ ಸಾರ್ವಜನಿಕರ ಗಮನಕ್ಕೆ ತಲುಪುವಂತೆ ಸುತ್ತೋಲೆಯ ಅಧಿಸೂಚನೆ ಹೊರಡಿಸಬೇಕು. ಜಲಾವೃತ ತಾಣಗಳಲ್ಲಿ ನೀರಿನ ಮಟ್ಟ ಹೆಚ್ಚಳವಾದರೆ ತಾತ್ಕಾಲಿಕವಾಗಿ ನೀರಿಗೆ ಇಳಿಯದಂತೆ ಸೂಚಿಸಲು ಭದ್ರತಾ ಸಿಬ್ಬಂದಿಗಳನ್ನು ನೇಮಿಸಬೇಕಾಗಿ ವಿನಂತಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು

■ ಪಡಿತರ ಚೀಟಿಯ ತಿದ್ದುಪಡಿಗೆ ಅವಕಾಶ ಕಲ್ಪಿಸಿ

ಮಾನ್ಯರೆ,

ಪಡಿತರ ಚೀಟಿಯು ಒಂದು ಮಹತ್ವಪೂರ್ಣವಾದ ಅಧಿಕೃತ ಸರಕಾರಿ ದಾಖಲೆಯಾಗಿದ್ದು, ಪ್ರತಿ ಕುಟುಂಬದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಯನ್ನು ಸೂಚಿಸುವ ಮಾನದಂಡ. ಇದು ಕೇವಲ ಸರ್ಕಾರ ನೀಡುವ ಆಹಾರ ಧಾನ್ಯ ಸ್ವೀಕಾರ ಮಾಡಲು ಅಲ್ಲದೆ ಕೇಂದ್ರ ಮತ್ತು ರಾಜ್ಯ ಸರಕಾರಗಳ ಹಲವಾರು ಯೋಜನೆಗಳನ್ನು ಪಡೆದುಕೊಳ್ಳಲು ಪ್ರಮುಖ ದಾಖಲೆಯಾಗಿದೆ. ಅದರಲ್ಲೂ ಮುಖ್ಯವಾಗಿ ಪ್ರಸ್ತುತ ಶಾಲಾ ಕಾಲೇಜುಗಳಿಗೆ ಮಕ್ಕಳನ್ನು ದಾಖಲು ಮಾಡಲು, ವರಮಾನ ಪ್ರಮಾಣ ಪತ್ರ ಪಡೆಯಲು, ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಲು, ವೈದ್ಯಕೀಯ ಸೌಲಭ್ಯ ಪಡೆಯಲು, ಶಸ್ತ್ರಚಿಕಿತ್ಸೆಗೆ, ಪಡಿತರ ಚೀಟಿ ಹೆಚ್ಚು ಅವಶ್ಯಕ. ಆದರೆ ಬಹಳ ದಿನಗಳಿಂದ ಕುಟುಂಬದ ಹೊಸ ಸದಸ್ಯರ ಸೇರ್ಪಡೆ (ಅದರಲ್ಲೂ 5 ವರ್ಷ ಮೇಲ್ಪಟ್ಟ ಮಕ್ಕಳ), ಮರಣ ಹೊಂದಿದ, ಬೇರ್ಪಟ್ಟ ಕುಟುಂಬ ಸದಸ್ಯರ ಹೆಸರು ತೆಗೆಸುವುದು, ವಿಳಾಸ ಬದಲಾವಣೆ ಹಾಗೂ ತಿದ್ದುಪಡಿಗೆ ಹಲವಾರು ತಿಂಗಳಿಂದ ಅವಕಾಶ ನೀಡದೆ ಬಡ ಕುಟುಂಬಗಳು ತೊಂದರೆಗೆ ಸಿಲುಕಿವೆ. ಸರಕಾರ ತಿದ್ದುಪಡಿಗೆ ದಿನಾಂಕ ನಿಗದಿಪಡಿಸಿ ಅಧಿಸೂಚನೆ ಹೊರಡಿಸಿದ ಎರಡು – ಮೂರೂ ದಿನಗಳಲ್ಲಿ ಸರ್ವರ್ ಬ್ಯುಸಿ ನೆಪ ಹೇಳಿ ಜನರು ದಿನಗಟ್ಟಲೆ ತಮ್ಮ ಕೆಲಸ ಕಾರ್ಯ ಬಿಟ್ಟು ಕಾದು ಅಲೆಯುತ್ತಿದ್ದಾರೆ. ಜಗತ್ತಿಗೆ ಸಾಫ್ಟ್‌ವೇರ್ ತಂತ್ರಜ್ಞಾನ ಸೇವೆ ನೀಡುವ ನಮ್ಮ ಸಿಲಿಕಾನ್ ಸಿಟಿ ಬೆಂಗಳೂರು ರಾಜ್ಯದ ಬಡಜನರ ಸೇವೆಗೆ ಎದುರಾಗುವ ಈ ಸರ್ವರ್ ಬ್ಯುಸಿ ಎನ್ನುವ ಭೂತವನ್ನು ತೊಲಗಿಸಲು ಆಗದೆ ಇರುವುದು ವಿಪರ್ಯಾಸವೇ ಸರಿ.

ಸರಕಾರ ಈ ನಿಟ್ಟಿನಲ್ಲಿ ಆದಷ್ಟು ಬೇಗ ಪಡಿತರ ಚೀಟಿ ತಿದ್ದುಪಡಿಗೆ ಅವಕಾಶ ಕಲ್ಪಿಸಿ ಕೊಟ್ಟು ಅಗತ್ಯವಿರುವ ಕುಟುಂಬಗಳು ಮತ್ತು ಶಾಲಾ –ಕಾಲೇಜು ಮಕ್ಕಳು ಇದರ ಸದುಪಯೋಗ ಪಡೆದುಕೊಳ್ಳಲು ಅನುವು ಮಾಡಿಕೊಡಲಿ. ಆಯಾ ಗ್ರಾಮ ಮತ್ತು ವಾರ್ಡ್ ವ್ಯಾಪ್ತಿಯ ಪಡಿತರ ವಿತರಣಾ ಕೇಂದ್ರಗಳಲ್ಲೇ ಹೆಸರು ಸೇರಿಸುವ ವ್ಯವಸ್ಥೆ ಮಾಡಿದರೆ ಜನರಿಗೆ ಮತ್ತಷ್ಟು ಅನುಕೂಲವಾಗಲಿದೆ.

–ನಾಗೇಂದ್ರ ಕಿಲಗೆರೆ, ಸಾಮಾಜಿಕ ಕಾರ್ಯಕರ್ತ, ಮೈಸೂರು.


ನಮ್ಮ ಮೈಸೂರಿನ ಅಸಾಮಾನ್ಯರು



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ್ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು, ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿ ಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ಅದೇ ನನಗೆ ಬರೆದ ತೃಪ್ತಿ.



20. ಎಚ್.ನಂಜುಂಡರಾಜ ಅರಸ್



ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ಮಹಾರಾಜರ ಆಡಳಿತದ ಅವಧಿಯಲ್ಲಿ ಅರಮನೆಗೆ ಸಂಬಂಧಪಟ್ಟಂತೆ ಹಲವಾರು ಕಚೇರಿಗಳಿದ್ದವು. ಕೆಲವು ಸಾರ್ವಜನಿಕರ ಅನುಕೂಲಕ್ಕಾಗಿ ವ್ಯವಸ್ಥೆಯಾಗಿದ್ದರೆ, ಕೆಲವಾದರೋ ರಾಜ ಮನೆತನದ, ಅವರ ಸಿಬ್ಬಂದಿಯ ಅವಶ್ಯಕತೆಗಳನ್ನು ಪೂರೈಸಲು ಸ್ಥಾಪಿತವಾಗಿದ್ದವು. ಅಂತಹ ಒಂದು ವ್ಯವಸ್ಥೆಯೆಂದರೆ ಅಮೃತ ಮಹಲ್ ಇಲಾಖೆ. ಈ ಮಹತ್ವದ ಇಲಾಖೆಯ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದವರ ಪೈಕಿ ಎಚ್.ನಂಜುಂಡರಾಜ ಅರಸ್ ಒಬ್ಬರು.

ಮೈಸೂರಿನ ವಿಶಿಷ್ಟ ಹಸುಗಳ ತಳಿ ಹಳ್ಳಿಕಾರ್ ದನಗಳನ್ನು ಸಾಕಲು ಮತ್ತು ಅವುಗಳ ಸಂಖ್ಯೆ ಹೆಚ್ಚಿಸಲು ಸ್ಥಾಪಿತವಾಗಿದ್ದ ಅಮೃತ ಮಹಲ್ ಇಲಾಖೆ ಸಾಕಷ್ಟು ಪುರಾತನದ್ದು. ಕ್ರಿ.ಶ.1572 –1600ರ ನಡುವೆ ವಿಜಯನಗರ ಸಾಮ್ರಾಜ್ಯದ ಪ್ರತಿನಿಧಿ ಕರುಹಟ್ಟಿ ಇಲಾಖೆಯೊಂದನ್ನು ಶ್ರೀರಂಗಪಟ್ಟಣದಲ್ಲಿ ಪ್ರಾರಂಭಿಸಿದ್ದ. ವಿಜಯನಗರದಿಂದ ತರಿಸಿಕೊಂಡಿದ್ದ ಹಳ್ಳೀಕಾರು ಹಸುಗಳನ್ನೂ ಹೊಂದಿದ್ದ ಈ ಇಲಾಖೆ ನಂತರ ರೂಪುಗೊಂಡ ಅಮೃತ ಮಹಲ್ ದನಕರುಗಳ ವ್ಯವಸ್ಥೆಗೆ ಮೂಲವೆಂದೆನ್ನಬಹುದು.

ಶ್ರೀರಂಗಪಟ್ಟಣದಲ್ಲಿ ಸಾಕಿದ್ದ ಈ ಜಾನುವಾರುಗಳು ನಂತರ ಮೈಸೂರಿನ ಮಹಾರಾಜರ ವಶಕ್ಕೆ ಬಂದವು. ತಮ್ಮ ರಾಜ್ಯದ ವಿವಿಧ ಭಾಗಗಳಲ್ಲಿ ಅವುಗಳನ್ನು ಮೇಯಿಸಲು ಅವರು ಕಾವಲುಗಳನ್ನು ಏರ್ಪಡಿಸಿದರು. ಚಿಕ್ಕದೇವರಾಜ ಒಡೆಯರ ಹದಿನೆಂಟು ಇಲಾಖೆಗಳ ಪೈಕಿ 'ಬೆಣ್ಣೆ ಚಾವಡಿ'ಯೂ ಒಂದಾಗಿತ್ತು. ಪಶುಗಳ ಸಂತಾನೋತ್ಪತ್ತಿ ಹಾಗೂ ಅರಮನೆಗೆ ಬೇಕಾದ ಹಾಲು ಮೊಸರು ಒದಗಿಸುವುದು ಈ ಇಲಾಖೆಯ ಜವಾಬ್ದಾರಿಯಾಗಿತ್ತು. ಚಿಕ್ಕದೇವರಾಜರ ನಂತರ ಈ ದನಕರುಗಳು ಹೈದರಾಲಿಯ ವಶಕ್ಕೆ ಬಂದಿತು. ಅವನು ಚಿತ್ರದುರ್ಗ, ತರಿಕೆರೆ, ಕೆಳದಿ ಸಂಸ್ಥಾನಗಳಿಗೆ ಸೇರಿದ ಉತ್ತಮ ತಳಿಯ ದನ ಕರುಗಳನ್ನೂ ವಶಪಡಿಸಿಕೊಂಡ. ಹಾಗಲವಾಡಿ ಪಾಳೇಗಾರರ ಪಶುಗಳನ್ನೂ ವಶಕ್ಕೆ ತೆಗೆದುಕೊಂಡ ಟೀಪು ಈ ಇಲಾಖೆಗೆ 'ಅಮೃತ್ ಮಹಲ್' ಎಂದು ಹೆಸರಿಟ್ಟ. ಅವನು ಜಾರಿಗೆ ತಂದ ನಿಯಂತ್ರಣಗಳನ್ನು ಬ್ರಿಟಿಷರೂ ಕೂಡ ಮುಂದುವರಿಸಿಕೊಂಡು ಹೋದರು. ಟೀಪು ಅವುಗಳನ್ನು ತನ್ನ ಸೈನ್ಯಕ್ಕೂ ಬಳಸಿಕೊಳ್ಳುತ್ತಿದ್ದ. ಟೀಪುವಿನ ನಂತರ ಬ್ರಿಟಿಷರಿಗೂ, ಮೈಸೂರಿನ ಮಹಾರಾಜರ ವಶಕ್ಕೂ ಈ ಪಶುಗಳು ಬಂದವು.

ಈ ವಿಶಿಷ್ಟ ತಳಿಯ ಹಸುಗಳು ತಮ್ಮ ಸಾಮರ್ಥ್ಯ, ಶಕ್ತಿ, ಹಾಗೂ ವೇಗ ಓಟಕ್ಕೆ ಪ್ರಖ್ಯಾತಿ ಪಡೆದಿದ್ದವು. ಸ್ವಲ್ಪ ಆಹಾರವನ್ನು ತಿಂದರೂ ಗಟ್ಟಿಮುಟ್ಟಾಗಿದ್ದವು. ಭಾರವಾದ ವಸ್ತುಗಳನ್ನು ಕಷ್ಟಕರವಾದ ಮಾರ್ಗಗಳಲ್ಲಿ ಸಾಗಿಸುವ ಸಾಮರ್ಥ್ಯ ಹೊಂದಿದ್ದ ಕಾರಣ ಅಂದಿನ ರಾಜರು ಇವುಗಳಿಗೆ ವಿಶೇಷ ಸ್ಥಾನ ನೀಡಿ ಸಾಕುತ್ತಿದ್ದರು. ವಿಜಯನಗರ ಅರಸರ ಕಾಲದಲ್ಲಿಯೇ ಇವುಗಳನ್ನು ಪ್ರೋತ್ಸಾಹಿಸಲಾಗುತ್ತಿತ್ತು. ಸಾಕಿದ ಹಸುಗಳಾಗಿ ಅವು ಹೆಚ್ಚಿನ ಪ್ರಮಾಣದ ಹಾಲನ್ನೂ ಕರೆಯುತ್ತಿದ್ದವು. ಅವು ಕರೆಯುವ ಹಾಲು ಬಹಳ ಉತ್ತಮ ಗುಣಮಟ್ಟದ್ದಾಗಿತ್ತು. ಇದರಿಂದಾಗಿ ಈ ಹಸುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಮುತುವರ್ಜಿಯಿಂದ ಸಾಕಲಾಗುತ್ತಿತ್ತು.

ನಾಲ್ವಡಿ ಕೃಷ್ಣರಾಜ ಒಡೆಯರ ಅವಧಿಯಲ್ಲಿ ಅಮೃತ ಮಹಲ್‌ನಲ್ಲಿದ್ದ ದನಕರುಗಳ ಸಂಖ್ಯೆ 12,500 ಆಗಿದ್ದು ಅವುಗಳನ್ನು ಆರು ಹಿಂಡುಗಳನ್ನಾಗಿ ವಿಂಗಡಿಸಲಾಯಿತು. ಇದಕ್ಕಾಗಿ ರೂಪಿಸಿದ್ದ ಹುಲ್ಗಾವಲುಗಳನ್ನು 'ಅಮೃತ ಮಹಲ್ ಕಾವಲ್'ಗಳೆಂದು ಕರೆಯಲಾಯಿತು. ಸಂಸ್ಥಾನಾದ್ಯಂತ ಅಂತಹ 210 ಕಾವಲುಗಳಿದ್ದವು. ಈ ಅಮೃತ ಮಹಲ್ ಇಲಾಖೆಯ ಸೂಪರಿಂಟೆಂಡೆಂಟ್ ಆಗಿದ್ದರು ಎಚ್. ನಂಜುಂಡರಾಜ ಅರಸ್ ಅವರು.

ಅರಸ್ ಅವರು 1858ರಲ್ಲಿ ಮೈಸೂರಿನಲ್ಲಿ ಜನಿಸಿದರು. ಮಹಾರಾಜರ ಗಾರ್ಡಿಯನ್ ಆಗಿದ್ದ ಮಲ್ಲೇಸನ್ ಅವರ ಕೆಳಗೆ ಮೈಸೂರಿನ ರಾಯಲ್ ಸ್ಕೂಲಿನಲ್ಲಿ ವಿದ್ಯಾಭ್ಯಾಸ ಮಾಡಿದರು. ಆಗಸ್ಟ್ 1, 1880ರಲ್ಲಿ ಮೈಸೂರಿನಲ್ಲಿ ಸೇವೆಗೆ ಸೇರುವವರೆಗೆ ಅಲ್ಲಿಯೇ ವಿದ್ಯಾಭ್ಯಾಸ ಪೂರೈಸಿದರು. ಅವರು ಮೊದಲು ಕೆಲಸ ಪ್ರಾರಂಭಿಸಿದ್ದು ಬೆಂಗಳೂರಿನ ಮಿಲಿಟರಿ ಇಲಾಖೆಯಲ್ಲಿ. ಇಲ್ಲಿ 'ಅಟ್ಯಾಚಿ'ಯಾಗಿ ಐದು ವರ್ಷ ಕಾರ್ಯ ಮಾಡಿದ ನಂತರ ಅವರನ್ನು 1885ರಲ್ಲಿ ಮೈಸೂರಿಗೆ ವರ್ಗಾ ಮಾಡಲಾಯಿತು. ಮೈಸೂರಿನಲ್ಲಿಯೂ ಇದೇ ಹುದ್ದೆಯಲ್ಲಿ ಅವರು ಮುಂದುವರಿದರು. 1888ರಲ್ಲಿ ಅವರನ್ನು ಕಂದಾಯ ಇಲಾಖೆಯ 'ರೆವಿನ್ಯೂ ಅಸಿಸ್ಟೆಂಟ್ ಕಮೀಷನರ್' ಹುದ್ದೆಯಲ್ಲಿ ನೇಮಿಸಲಾಯಿತು. ಮುಜರಾಯಿಯ ಉಸ್ತುವಾರಿ ಅಧಿಕಾರಿಯಾಗಿ ಹಾಗೂ ಸಾಮಾನ್ಯ ಆಡಳಿತ ನಿರ್ವಹಣೆಯ ಹೊಣೆಗಾರಿಕೆಯನ್ನೂ ನೀಡಿ ಕಂದಾಯ ಸಹಾಯಕ ಕಮೀಷನರನ್ನಾಗಿ ಇದೇ ಇಲಾಖೆಯಲ್ಲಿ ಅವರನ್ನು ಮುಂದುವರಿಸಲಾಯಿತು. ನಂತರ 1894ರಲ್ಲಿ ಮೈಸೂರು ಅವರು ಮೈಸೂರು ನಗರ ಸಭೆಯ ಉಪಾಧ್ಯಕ್ಷರಾಗಬೇಕಾಯಿತು.

1889ರಲ್ಲಿ ಮೂರನೇ ದರ್ಜೆ ನ್ಯಾಯಾಧೀಶರ ಅಧಿಕಾರವನ್ನು ಅವರಿಗೆ ನೀಡಲಾಯಿತು. ಅದೇ ವರ್ಷದ ಕೊನೆಯಲ್ಲಿ ಎರಡನೇ ದರ್ಜೆಗೆ ಏರಿಸಲಾಯಿತು. ಅವರನ್ನು 1900ರಲ್ಲಿ ಮೈಸೂರು ನಗರದಲ್ಲಿ ಕೆಡವಬೇಕಾಗಿದ್ದ ಒತ್ತೊಟ್ಟಿಗಿದ್ದು ರೋಗಗಳಿಗೆ ಕಾರಣವಾಗಿದ್ದ ಹಳೆಯ ಮನೆಗಳನ್ನು ಗುರುತಿಸುವ ವಿಶೇಷ ಅಧಿಕಾರಿಯನ್ನಾಗಿ ನೇಮಿಸಲಾಯಿತು. ಈಗಾಗಲೇ ಹೇಳಿದಂತೆ ಎರಡು ವರ್ಷಗಳ ನಂತರ ಇವರು ಅಮೃತ ಮಹಲ್ ಇಲಾಖೆಯ ಸೂಪರಿಂಟೆಂಡೆಂಟ್ ಆದರು. ಅದೇ ವರ್ಷದ ಕೊನೆಯಲ್ಲಿ ಅವರನ್ನು ಅರಮನೆ ಕಂಟ್ರೋಲರ್ ಹುದ್ದೆಯ ಉಸ್ತುವಾರಿ ಕರ್ತವ್ಯಾಧಿಕಾರಿಯನ್ನಾಗಿ ನೇಮಿಸಲಾಯಿತು. ಆ ಕರ್ತವ್ಯವನ್ನು ಅವರು ನಂತರದ ವರ್ಷದ ಫೆಬ್ರವರಿವರೆಗೆ ನಿರ್ವಹಿಸಿದರು. ನಂತರ ಸರ್ಕಾರ ಅವರನ್ನು ಮತ್ತೆ ಅಮೃತ ಮಹಲ್ ಇಲಾಖೆಗೆ ವರ್ಗಾಯಿಸಿ ಸೂಪರಿಂಟೆಂಡೆಂಟ್ ಆಗಿ ಸರ್ಕಾರ ನೇಮಿಸಿತು. 1903ರಲ್ಲಿ ಅವರ ಅಧಿಕಾರವನ್ನು ಮೊದಲ ದರ್ಜೆಗೆ ಹೆಚ್ಚಿಸಲಾಯಿತು. ನಂಜುಂಡರಾಜ ಅರಸು ಅವರು ಹೆಚ್ಚಿನ ಕಾಲ ಅಮೃತ ಮಹಲ್ ಇಲಾಖೆ ಸೂಪರಿಂಟೆಂಡೆಂಟ್ ಆಗಿ ಸೇವೆ ಸಲ್ಲಿಸಿದರು.

ನಿವೃತ್ತರಾದ ನಂತರ ಅವರು ನಿವೃತ್ತ ನ್ಯಾಯಾಧೀಶ ಹೆಚ್.ಚನ್ನಯ್ಯ, ಎಂ. ಶ್ರೀನಿವಾಸರಾವ್ ಅವರ ಸಹಕಾರದಿಂದ ಮೈಸೂರು ಸಿಟಿ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿಯನ್ನು ಲ್ಯಾನ್ಸ್‌ಡೌನ್ ಕಟ್ಟಡದ ಒಂದು ಕೊಠಡಿಯಲ್ಲಿ 1916ರಲ್ಲಿ ಪ್ರಾರಂಭಿಸಿದರು. ಇದಕ್ಕೂ ಮುಂಚೆ 1906ರಲ್ಲಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಮತ್ತು 1910ರಲ್ಲಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಸ್ಥಾಪಿಸಿ ಅವುಗಳ ಸ್ಥಾಪಕ ಅಧ್ಯಕ್ಷರಾಗಿದ್ದರು. ಅಲ್ಲದೆ ಮೈಸೂರಿನಲ್ಲಿ ಹಲವು ಸಹಕಾರ ಸಂಸ್ಥೆಗಳು ಉದಯೋನ್ಮುಖವಾಗಲು ಕಾರಣಕರ್ತರಾಗಿದ್ದರು. ಮನೆಗಳನ್ನು ಕಟ್ಟಲು ಸಾಲ ಪಡೆಯಲು ಅನುಕೂಲವಾಗುವಂತೆ ಮೈಸೂರು ಸಿಟಿ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿಯನ್ನು ಸ್ಥಾಪಿಸಿದ ಈ ಪ್ರಮುಖರು ಸಂಘದ ಏಳಿಗೆಯ ಉದ್ದೇಶದಿಂದ ಯಾವುದೇ ಭತ್ಯೆಗಳನ್ನು ಸಂಘದಿಂದ ತೆಗೆದುಕೊಳ್ಳದೆ ಸಾರ್ವಜನಿಕರ ಹಿತವನ್ನು ಮನಸ್ಸಿನಲ್ಲಿಟ್ಟುಕೊಂಡು ದುಡಿದರು. ಶತಮಾನೋತ್ಸವ ದಾಟಿರುವ ಈ ಸಹಕಾರಿ ಸಂಘಗಳು ಈಗಲೂ ಕಾರ್ಯನಿರತವಾಗಿದ್ದು ತಮ್ಮ ಸೇವಾ ಮನೋಭಾವದಿಂದ ಪ್ರಾರಂಭಿಸಿದವರ ಉದ್ದೇಶವನ್ನು ಸಾರ್ಥಕಗೊಳಿಸುತ್ತಿವೆ.

ಸರ್ವರ್ ಸಮಸ್ಯೆ; ಆರ್‌ಟಿಓ ಕಚೇರಿಗಳಲ್ಲಿ ಕೆಲ ಸೇವೆ ಸ್ತಬ್ಧ

ಮೈಸೂರು, ಮೇ 18(ಎಸ್‌ಪಿಎನ್)– ಲೋಕಸಭಾ ಚುನಾವಣೆ ಪ್ರಕ್ರಿಯೆ ಆರಂಭದ ದಿನದಿಂದಲೂ ಕಣ್ಣಾಮುಚ್ಚಾಲೆ ಆಡುತ್ತಿದ್ದ ಸಾರಿಗೆ ಇಲಾಖೆ ಸಾರಥಿ ಸರ್ವರ್, ಇದೀಗ ಬುಧವಾರದಿಂದ ಶನಿವಾರದವರೆಗೆ ರಾಜ್ಯಾದ್ಯಂತ ಯಾವುದೇ ಸೇವೆಗಳು ಲಭ್ಯವಾಗುತ್ತಿಲ್ಲ. ಈ ಸಮಸ್ಯೆ ಮೈಸೂರಿನ ಆರ್‌ಟಿಓ ಕಚೇರಿಯಲ್ಲೂ ಮುಂದುವರೆದಿದೆ.

> ಆರ್‌ಟಿಒದಲ್ಲಿ ಸರ್ವರ್ ಸಮಸ್ಯೆಗೆ ಕೊನೆ ಮೊದಲು ಎಂಬುದಿಲ್ಲ. ವಿವಿಧ ಸೇವೆಗಳ ಶುಲ್ಕ ಪಾವತಿಗೆ ದಿನಗಟ್ಟಲೇ ಸರದಿಯಲ್ಲಿ ಕಾಯಬೇಕು. ಇದೀಗ ಕಳೆದೆರಡು ದಿನದಿಂದ ಸಾರ್ವಜನಿಕರಿಗೆ ಸಾರಿಗೆ ಇಲಾಖೆ ಸೇವೆ ಪಡೆಯಲು ಸಾಕಷ್ಟು ಸಮಸ್ಯೆಯಾಗುತ್ತಿದೆ. ಈ ಸಮಸ್ಯೆ ನಿರ್ವಹಣೆ ಕುರಿತು ಅಧಿಕಾರಿಗಳು ಸರಿಯಾದ ಮಾಹಿತಿ ನೀಡುತ್ತಿಲ್ಲ. ಬರೀ ಆರ್‌ಟಿಓ ಕಚೇರಿಗಳ ನೋಟಿಸ್ ಬೋರ್ಡ್‌ಗಳಲ್ಲಿ ಸಾರ್ವಜನಿಕರಿಗೆ ಸಾರಿಗೆ ಇಲಾಖೆ ಸೇವೆಗಳು ಲಭ್ಯವಿಲ್ಲ ಎಂದು ಪೇಪರ್ ಅಂಟಿಸಿದರೆ ಸಾಕೆ? –ಪ್ರಸನ್ನ, ಗ್ರಾಹಕ.

> ಸಾರಿಗೆ ಇಲಾಖೆ ವೆಬ್‌ಸೈಟ್‌ಗಳಲ್ಲಿ ಯಾವುದೇ ಸಮಸ್ಯೆಯಾಗಿಲ್ಲ. ಆದರೆ, ಕೆಲವರು ಸುಖಾಸುಮ್ಮನೆ ಸರ್ವರ್ ಸಮಸ್ಯೆ ಅಂತ ಗಾಳಿಸುದ್ದಿ ಹಬ್ಬಿಸುತ್ತಿದ್ದಾರೆ. ಇಂತಹ ಯಾವುದೇ ಸಮಸ್ಯೆ ಆಗಿಲ್ಲ. ಇದ್ದರೆ ನೇರವಾಗಿ ಸಂಬಂಧಪಟ್ಟ ಅಧಿಕಾರಿಗಳನ್ನು ಭೇಟಿ ಮಾಡಿ ಸಾರ್ವಜನಿಕರು ಪರ್ಯಾಯ ಮಾರ್ಗವಾಗಿ ಸಮಸ್ಯೆ ಬಗೆಹರಿಸಿಕೊಳ್ಳಬಹುದು.
> – ಯೋಗೀಶ್, ಆಯುಕ್ತ, ಸಾರಿಗೆ ಇಲಾಖೆ

ಮೊದಲಿಗೆ ಗುರುವಾರ ಮಧ್ಯಾಹ್ನ 1.30ರಿಂದ ಸೇವೆಗಳು ಲಭ್ಯವಾಗುತ್ತವೆ ಎಂದು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿತ್ತು. ಆನಂತರ ಶನಿವಾರ 10 ಗಂಟೆಯವರೆಗೆ ವಿಸ್ತರಿಸಿದ ಮಾಹಿತಿಯನ್ನು 'ಸಾರಥಿ' ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.


ಆದರೆ, ಆರ್‌ಟಿಓ ಕಚೇರಿಗಳು ಮುದ್ರಣ ಮತ್ತು ದೃಶ್ಯ ಮಾಧ್ಯಮಗಳಲ್ಲಿ ಇದಕ್ಕೆ ಸಂಬಂಧಿಸಿದಂತೆ ಪ್ರಕಟಣೆ ನೀಡದಿರುವುದರಿಂದ ಸಾರ್ವಜನಿಕರು ಸಾರಿಗೆ ಕಚೇರಿಗಳಿಗೆ ಎಡತಾಕಿ ಸೇವೆ ಲಭ್ಯವಾಗದೆ ಬರಿಗೈನಲ್ಲಿ ವಾಪಸ್ಸಾಗುತ್ತಿದ್ದಾರೆ. ಈ ಸ್ಥಿತಿ ನಾಳೆ(ಮೇ 19)ಯವರೆಗೂ ಮುಂದುವರೆಯಲಿದೆ. ಸದಾ ಗಿಜಿಗುಡುತ್ತಿದ್ದ ಮೈಸೂರು ಸಾರಿಗೆ(ಆರ್‌ಟಿಒ) ಕಚೇರಿಗಳು ಎರಡು ದಿನದಿಂದ ಬಿಕೋ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ ಎನ್ನುತ್ತಾರೆ ಗ್ರಾಹಕ ಪ್ರಸನ್ನ.

ಕೇಂದ್ರ ಸರ್ಕಾರದ ಭೂ ಸಾರಿಗೆ ಮತ್ತು ರಾಷ್ಟ್ರೀಯ ಹೆದ್ದಾರಿ ಸಚಿವಾಲಯದ ಅಡಿಯ ಸಾರಥಿ ವೆಬ್‌ಸೈಟ್‌ನಲ್ಲಿ ಸಾರಿಗೆ ಸೇವೆಗಳನ್ನು ತರಲಾಗಿದೆ. ಕೆಲ ಸೇವೆಗಳನ್ನು ಆನ್‌ಲೈನ್ ಮೂಲಕ ಮಾತ್ರ ಪಡೆದುಕೊಳ್ಳಬೇಕು. ಸಾರಿಗೆ ಸೇವೆಗಳನ್ನು ಆನ್‌ಲೈನ್ ಅಥವಾ ಆಫ್‌ಲೈನ್‌ನಲ್ಲಿ ಪಡೆದರೂ ಶುಲ್ಕ ಪಾವತಿ ಮಾತ್ರ ವೆಬ್‌ಸೈಟ್ ಮೂಲಕವೇ ಆಗಬೇಕು. ಸರ್ವರ್ ಡೌನ್ ಆಗಿರುವುದರಿಂದ ಯಾವುದೇ ಸೇವೆ ಲಭ್ಯವಾಗುತ್ತಿಲ್ಲ ಅಲ್ಲದೆ, ಈ ಸಮಸ್ಯೆ ಸೋಮವಾರದವರೆಗೂ ಮುಂದುವರೆಯುವ ಸಾಧ್ಯತೆ ಇದೆ ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಎಲ್‌ಎಲ್‌ಆರ್, ಡಿಎಲ್, ವಾಹನಗಳ ನೋಂದಣಿ, ಮರು ನೋಂದಣಿ, ಪ್ರಮಾಣ ಪತ್ರಗಳು ಸೇರಿದಂತೆ ವಿವಿಧ ಸೇವೆಗಳಿಗಾಗಿ ಪ್ರತಿದಿನ ರಾಜ್ಯಾದ್ಯಂತ ಲಕ್ಷಾಂತರ ಅರ್ಜಿಗಳು ಆರ್‌ಟಿಒ ಕಚೇರಿಗಳಿಗೆ ಸಲ್ಲಿಕೆಯಾಗುತ್ತಿವೆ. ತಾಲೂಕು ಕೇಂದ್ರಗಳ ಕಚೇರಿಗಳಲ್ಲಿ ದಿನಕ್ಕೆ 150ರಿಂದ 200 ಅರ್ಜಿಗಳು, ಜಿಲ್ಲಾ ಕೇಂದ್ರ ಕಚೇರಿಗಳಲ್ಲಿ 400ರಿಂದ 500 ಅರ್ಜಿಗಳು ಸಲ್ಲಿಕೆಯಾಗುತ್ತವೆ. ಬೆಂಗಳೂರು ಆರ್‌ಟಿಒ ಕಚೇರಿಗಳಲ್ಲಿ 900ರಿಂದ 1450ರವರೆಗೆ ಅರ್ಜಿಗಳು ಸಲ್ಲಿಕೆಯಾಗುತ್ತವೆ ಎಂದು ತಿಳಿಸಿದರು.

ಸಾರ್ವಜನಿಕರಿಗೆ ಆಗುತ್ತಿರುವ ಸಮಸ್ಯೆ ತಪ್ಪಿಸಲು ಸರ್ವರ್ ಅನ್ನು ಮೇಲ್ದರ್ಜೆಗೇರಿಸಬೇಕೆಂಬ ಆಗ್ರಹ ಕೇಳಿ ಬಂದಿತ್ತು. ಇದೇ ಕಾರಣಕ್ಕೆ ಇಲಾಖೆಯು ಈಗ ಸರ್ವರ್ ಮೇಲ್ದರ್ಜೆಗೇರಿಸುವ ಪ್ರಕ್ರಿಯೆ ಕೈಗೊಂಡಿರಬಹುದು. ಅಲ್ಲದೆ, ಕೇಂದ್ರ ಸರ್ಕಾರದ ರಸ್ತೆ ಸಾರಿಗೆ ಮತ್ತು ರಾಷ್ಟ್ರೀಯ ಹೆದ್ದಾರಿ ಸಚಿವಾಲಯ ನಿರ್ವಹಿಸುವ ಸಾರಥಿ ವೆಬ್‌ಸೈಟ್ ಮಾತ್ರ ಸಮಸ್ಯೆಯಾಗಿದ್ದು, ಪರಿವಾಹನ್ ವೆಬ್‌ಸೈಟ್ ಯಾವುದೇ ಸಮಸ್ಯೆಯಾಗಿಲ್ಲ ಎನ್ನುತ್ತಾರೆ ಎಆರ್‌ಟಿಓ ದೇವಿಕಾ.

ನಾಳೆ ಮಹಾರಾಣಿ ದೇವಾಜಮ್ಮಣ್ಣಿ ಅಂಚೆ ಕಾರ್ಡ್ ಲೋಕಾರ್ಪಣೆ



ಮೈಸೂರು, ಮೇ 18– ಮೈಸೂರಿನ ಅನ್ವೇಷಣಾ ಸೇವಾ ಟ್ರಸ್ಟ್ ವತಿಯಿಂದ ಮೈಸೂರು ವಿಭಾಗದ ಅಂಚೆ ಕಚೇರಿ ಪ್ರಕಟಿಸಿರುವ ಸಿಡುಬು ರೋಗ ನಿವಾರಣೆಯಲ್ಲಿ ಮಹತ್ತರ ಪಾತ್ರ ವಹಿಸಿದ್ದ ಮಹಾರಾಣಿ ದೇವಾಜಮ್ಮಣ್ಣಿ ಅವರ ಅಂಚೆ ಕಾರ್ಡ್ ಲೋಕಾರ್ಪಣೆ ಕಾರ್ಯಕ್ರಮವನ್ನು ಮೇ 20ರಂದು ಮಧ್ಯಾಹ್ನ 12ಕ್ಕೆ ತ್ಯಾಗರಾಜ ರಸ್ತೆಯಲ್ಲಿರುವ ಪತ್ರಕರ್ತರ ಭವನದಲ್ಲಿ ಏರ್ಪಡಿಸಲಾಗಿದೆ.

ಅಂಚೆ ಇಲಾಖೆ ಮುದ್ರಿಸಿರುವ ಮಹಾರಾಣಿ ದೇವಾಜಮ್ಮಣ್ಣಿ ಅವರ ಅಂಚೆ ಕಾರ್ಡ್ ಅನ್ನು ಮೈಸೂರು ಅಂಚೆ ವಿಭಾಗದ ಸೀನಿಯರ್ ಸೂಪರಿಂಟೆಂಡೆಂಟ್ ಡಾ.ಏಂಜಲ್‌ರಾಜ್ ಬಿಡುಗಡೆ ಮಾಡುವರು. ಚುಟುಕು ಯೋಗಾಚಾರ್ಯ ಡಾ.ಎಂ.ಜಿ.ಆರ್.ಅರಸ್ ಅಧ್ಯಕ್ಷತೆ ವಹಿಸಲಿದ್ದು, ಭಾಷಾ ಭಾರತಿ ಮಾಜಿ ಅಧ್ಯಕ್ಷ ಪ್ರಧಾನ್ ಗುರುದತ್ತ ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಅನ್ವೇಷಣಾ ಸೇವಾ ಟ್ರಸ್ಟ್‌ನ ಸ್ಥಾಪಕ ಅಧ್ಯಕ್ಷ ಆರ್ಯ ಅಮರನಾಥರಾಜೇ ಅರಸ್ ಪಾಲ್ಗೊಳ್ಳುವರು ಎಂದು ಅಂಚೆ ಕಚೇರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಬುಲ್ಡೋಜರ್ ನಮ್ಮದಲ್ಲ, ಬಿಜೆಪಿ ಸರ್ಕಾರದ್ದು

ಮೋದಿ ಹೇಳಿಕೆಗೆ ವಿಪಕ್ಷಗಳ ಖಂಡನೆ



ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಉದ್ಧವ್ ಠಾಕ್ರೆ, ಶರದ್ ಪವಾರ್ ಇನ್ನಿತರರು ಉಪಸ್ಥಿತರಿದ್ದರು.

ಮುಂಬೈ: ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ರಾಮಮಂದಿರವನ್ನು ಬುಲ್ಡೋಜರ್ ಮಾಡಲಾಗುತ್ತದೆ ಎನ್ನುವ ಪ್ರಧಾನಿ ನರೇಂದ್ರ ಮೋದಿ ಅವರ ಹೇಳಿಕೆಯನ್ನು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ 'ಇಂಡಿಯಾ' ಕೂಟದ ನಾಯಕರು ತೀವ್ರವಾಗಿ ಖಂಡಿಸಿದ್ದಾರೆ.

ಎಲ್ಲ ಪ್ರಜೆಗಳ ಧಾರ್ಮಿಕ ಸ್ವಾತಂತ್ರ್ಯವನ್ನು ರಕ್ಷಿಸಲು ತಾವು ಬದ್ಧವಾಗಿದ್ದು, ದೇಶವು ಸಂವಿಧಾನದ ಪ್ರಕಾರ ನಡೆಯುವ ಬಗ್ಗೆ ಖಾತರಿ ನೀಡಲಾಗುವುದು ಎಂದು ತಿಳಿಸಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ, ಶಿವಸೇನಾ (ಯುಬಿಟಿ) ಅಧ್ಯಕ್ಷ ಉದ್ಧವ್ ಠಾಕ್ರೆ ಮತ್ತು ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್ ಅವರು ಮುಂಬೈನಲ್ಲಿ ಶನಿವಾರ ಜಂಟಿ ಪತ್ರಿಕಾಗೋಷ್ಠಿ ನಡೆಸಿದರು.

ನಾವು ಎಂದೂ ಯಾರ ಮೇಲೆಯೂ ಬುಲ್ಡೋಜರ್ ಬಳಸಿಲ್ಲ. ಬುಲ್ಡೋಜರ್ ಅವರ ಸರ್ಕಾರದ್ದು. ಮೋದಿ ಅವರಿಗೆ ಸುಳ್ಳು ಹೇಳುವ ಚಾಳಿ ಇದೆ ಮತ್ತು ಅವರು ಕಾಂಗ್ರೆಸ್ ಎಂದೂ ಮಾಡದೇ ಇರುವಂತಹ, ಮಾಡಲಾಗದ ಕೆಲಸಗಳ ಬಗ್ಗೆ ಮಾತನಾಡುವ ಮೂಲಕ ಜನರನ್ನು ಪ್ರಚೋದಿಸುತ್ತಿದ್ದಾರೆ ಎಂದು ಖರ್ಗೆ ವಾಗ್ದಾಳಿ ನಡೆಸಿದರು.

ಪ್ರಧಾನಿ ಜನರನ್ನು ಪ್ರಚೋದಿಸಲು ಹಾಗೆ ಹೇಳಿದ್ದು, ಅದರ ವಿರುದ್ಧ ಚುನಾವಣಾ ಆಯೋಗವು ಕ್ರಮ ಜರುಗಿಸಬೇಕು. ನಮ್ಮ ಸರ್ಕಾರ ಸಂವಿಧಾನದ ಪ್ರಕಾರ ಕೆಲಸ ಮಾಡುತ್ತದೆ. ನಾವು ಎಲ್ಲವನ್ನೂ ರಕ್ಷಿಸುತ್ತೇವೆ ಎಂದು ಹೇಳಿದರು.

ಅವರು ಎಲ್ಲಿ ಹೋದರೂ ವಿಭಜನೆ ಮಾಡಲು ಪ್ರಯತ್ನಿಸುತ್ತಾರೆ, ಸಮಾಜವನ್ನು ವಿಭಜಿಸುವ ಮಾತು ಆಡುತ್ತಾರೆ ಎಂದು ಆರೋಪಿಸಿದರು.

ಇಂಡಿಯಾ ಕೂಟದ ಸರ್ಕಾರವು ಅಯೋಧ್ಯೆ ರಾಮಮಂದಿರದ ನಿರ್ಮಾಣವನ್ನು ಪೂರ್ಣಗೊಳಿಸುತ್ತದೆ ಎಂದು ಉದ್ಧವ್ ಠಾಕ್ರೆ ಹೇಳಿದರೆ, ದೇವಸ್ಥಾನಗಳನ್ನಷ್ಟೇ ಅಲ್ಲ, ಎಲ್ಲ ಧರ್ಮಗಳ ಪ್ರಾರ್ಥನಾ ಮಂದಿರಗಳನ್ನೂ ರಕ್ಷಿಸುವುದು ಸರ್ಕಾರದ ಜವಾಬ್ದಾರಿ ಎಂದು ಶರದ್ ಪವಾರ್ ಹೇಳಿದರು.

ತಾವು ಹಿಂದೂ ಎನ್ನುವ ಪದದ ಬದಲಿಗೆ ದೇಶಭಕ್ತ ಎನ್ನುವ ಪದ ಬಳಸುವುದಕ್ಕೆ ಬಿಜೆಪಿ ಲೇವಡಿ ಮಾಡುವ ಬಗ್ಗೆ ಮಾತನಾಡಿದ ಉದ್ಧವ್, ಹಿಂದೂಗಳು ದೇಶಭಕ್ತರಲ್ಲವೇ? ದೇಶಭಕ್ತರನ್ನು ವಿರೋಧಿಸುವವರು ರಾಷ್ಟ್ರವಿರೋಧಿಗಳು ಎಂದರು.

ಪಾಕಿಸ್ತಾನ ಇರುವುದು ಬಿಜೆಪಿಯ ತಲೆಯಲ್ಲಿ. ಬಹುಶಃ ಮೋದಿ ಅವರು ನವಾಜ್ ಷರೀಫ್ ಅವರ ಹುಟ್ಟುಹಬ್ಬದ ಕೇಕ್‌ಅನ್ನು ಈಗಲೂ ಇಷ್ಟಪಡುತ್ತಾರೆ. ಅವರು ಸದಾ ಕಾಲ ಪಾಕಿಸ್ತಾನವನ್ನು ಸ್ಮರಿಸುತ್ತಿರುತ್ತಾರೆ. ನನ್ನ ರ‍್ಯಾಲಿಗಳಲ್ಲಿ ನಾನು ಎಂದೂ ಪಾಕಿಸ್ತಾನದ ಬಾವುಟ ಕಂಡಿಲ್ಲ. ನಿಜವಾದ ಸಮಸ್ಯೆಗಳಿಂದ ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಹುಸಿ ನಿರೂಪಣೆಗಳನ್ನು ಕಟ್ಟಲಾಗುತ್ತಿದೆ ಎಂದು ತಿಳಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವಿದ್ಯುತ್ ಕಂಬ ತೆರವುಗೊಳಿಸದೆ ನಿರ್ಲಕ್ಷ್ಯ



ಮೈಸೂರು, ಮೇ18(ಬಿಎಲ್‌ಯು)– ಮೈಸೂರಿನ ಕೆಂಚಲಗೂಡು ಬಳಿಯ ಖಾಸಗಿ ಬಡಾವಣೆಯಲ್ಲಿ ಭಾರಿ ಮಳೆ ಗಾಳಿಗೆ ಹತ್ತಾರು ವಿದ್ಯುತ್ ಕಂಬಗಳು ನೆಲಕ್ಕುರುಳಿದ್ದು, ಚೆಸ್ಕಾಂ ಹಾಗೂ ಬಡಾವಣೆ ಮಾಲೀಕರು ಅವುಗಳನ್ನು ತೆರವು ಮಾಡದೆ ಬೇಜವಾಬ್ದಾರಿ ಮೆರೆದಿದ್ದಾರೆ ಎಂದು ಗ್ರಾಮಸ್ಥರು ದೂರಿದ್ದಾರೆ.

ವಿದ್ಯುತ್ ಕಂಬಗಳು ಉರುಳಿ ಬಿದ್ದಿರುವ ಕಾರಣ ಅಕ್ಕಪಕ್ಕದ ಜಮೀನಿಗೆ ಹೋಗುವ ರೈತರಿಗೆ ಹಾಗೂ ದನಗಾಹಿಗಳಿಗೆ ಭಯ ಉಂಟಾಗಿದೆ. ಇದರಿಂದ ರೈತರು ಜೀವ ಭಯದಲ್ಲಿ ಓಡಾಡುತ್ತಿದ್ದಾರೆ. ಅನಾಹುತ ಅರಿತು ಕೂಡಲೇ ಚೆಸ್ಕಾಂ ಹಾಗೂ ಬಡಾವಣೆ ಮಾಲೀಕರು ಕೂಡಲೇ ವಿದ್ಯುತ್ ಕಂಬ ತೆರವುಗೊಳಿಸಬೇಕು ಎಂದು ಕೆಂಚಲಗೂಡು ಹಾಗೂ ಡಿ.ಸಾಲುಂಡಿ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ರೋಟರಿ ಗಾಯತ್ರಿ ಪ್ರಶಸ್ತಿ ಪ್ರದಾನ

ಮೈಸೂರು, ಮೇ 18–ರೋಟರಿ ಮೈಸೂರು ವತಿಯಿಂದ 2023–24ನೇ ಸಾಲಿನಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 620 (ಸ್ಟೇಟ್ ಸಿಲಬಸ್) ಹಾಗೂ ಸೆಂಟ್ರಲ್ ಸಿಲಬಸ್‌ನಲ್ಲಿ 490ಕ್ಕೂ ಹೆಚ್ಚು ಅಂಕಗಳನ್ನು ಪಡೆದಿರುವ ವಿದ್ಯಾರ್ಥಿಗಳಿಗೆ ರೋಟರಿ ಗಾಯತ್ರಿ ಪ್ರಶಸ್ತಿ ನೀಡಲಾಗುತ್ತದೆ. ಈ ಸಂಬಂಧ ಅರ್ಹ ವಿದ್ಯಾರ್ಥಿಗಳು ತಾತ್ಕಾಲಿಕ ಅಂಕಪಟ್ಟಿಯನ್ನು ಶಾಲೆ ಮುಖ್ಯಸ್ಥರಿಂದ ಸಹಿ ಹಾಗೂ ಮೊಹರು ಹಾಕಿಸಿ ಮೇ 25ರ ಸಂಜೆ 5 ಗಂಟೆಯೊಳಗೆ ಕಳುಹಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9632503181 ಸಂಪರ್ಕಿಸಬಹುದು. ಸಮಾರಂಭವನ್ನು ಮೇ 30ರಂದು ಸಂಜೆ 6.30 ಗಂಟೆಗೆ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸೆಂಟರ್‌ನಲ್ಲಿ ಏರ್ಪಡಿಸಲಾಗಿದೆ.

ಕ್ರಿಕೆಟ್ ಪಂದ್ಯಾವಳಿ ವಿಜೇತರಿಗೆ ಬಹುಮಾನ



ಮೈಸೂರು ವಿಶ್ವವಿದ್ಯಾನಿಲಯ ದಲಿತ ವಿದ್ಯಾರ್ಥಿ ಒಕ್ಕೂಟದಿಂದ ಆಯೋಜಿಸಿದ್ದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಪಡೆದ ಯುವರಾಜ ಕಾಲೇಜು ತಂಡ ಹಾಗೂ ದ್ವಿತೀಯ ಸ್ಥಾನ ಪಡೆದ ತಂಡಗಳಿಗೆ ಕಾಂಗ್ರೆಸ್ ಮುಖಂಡ ಅಹಿಂದ ಜವರಪ್ಪ ಬಹುಮಾನ ವಿತರಿಸಿದರು. ಈ ವೇಳೆ ದಂಡಿಕೆರೆ ನಾಗರಾಜ್, ಸಚಿನ್, ಬಿ.ನವೀನ್, ಗಿರೀಶ್, ಮುತ್ತುರಾಜ್, ಭರತ್ ಇನ್ನಿತರರು ಉಪಸ್ಥಿತರಿದ್ದರು.

ಆತ್ಮವಿಶ್ವಾಸವೇ ಆಭರಣವಾದಾಗ ಮಹಿಳೆ ಸರ್ವ ರೀತಿ ಅಭಿವೃದ್ಧಿ

ಮೈಸೂರು ವಿವಿ ಕುಲಸಚಿವೆ ವಿ.ಆರ್.ಶೈಲಜಾ ಅಭಿಮತ



ಮೈಸೂರು, ಮೇ 18– ಮಹಿಳೆ ಆತ್ಮ ವಿಶ್ವಾಸವನ್ನೇ ತನ್ನ ಆಭರಣವಾಗಿಸಿಕೊಳ್ಳಬೇಕೆಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ವಿ.ಆರ್.ಶೈಲಜಾ ವಿದ್ಯಾರ್ಥಿನಿಯರಿಗೆ ಕರೆ ನೀಡಿದರು.

ಮೈಸೂರಿನ ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯದ 2023–2024ನೇ ಸಾಲಿನ ಕಾಲೇಜು ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ಕಾಲೇಜಿನ ಸರ್ವತೋಮುಖ ಚಟುವಟಿಕೆಗಳು ವಿದ್ಯಾರ್ಥಿನಿಯರಿಗೆ ಪೂರಕವಾಗಿದ್ದು, ಇಲ್ಲಿ ಅಧ್ಯಯನ ಮಾಡುವುದರಿಂದ ಪದವಿಯ ಜೊತೆಗೆ ವ್ಯಕ್ತಿತ್ವ ವಿಕಸನವನ್ನು, ಮಹಿಳಾ ಸಬಲೀಕರಣ ಧ್ಯೇಯದ ಸಫಲತೆಯನ್ನು ಕಾಣಲು ವಿಫುಲ ಅವಕಾಶವಿದೆ ಎಂದರು.

ಡಾ.ವೀರೇಂದ್ರ ಹೆಗ್ಗಡೆ ಅವರ ಸಮರ್ಥ ಮಾರ್ಗದರ್ಶನ ಮತ್ತು ದೂರ ದೃಷ್ಟಿಯಿಂದ ಕಾಲೇಜಿನಲ್ಲಿ ಮಹತ್ತರವಾದ ಕಾರ್ಯಕ್ರಮಗಳನ್ನು ನಡೆಸುತ್ತಿರುವುದು ಅಭಿನಂದನೀಯವಾದುದು ಎಂದರು. ರಕ್ತದಾನ, ನೇತ್ರದಾನ ಮತ್ತು ಹಲವು ಸಾಮುದಾಯಿಕ ಕಾರ್ಯ ಚಟುವಟಿಕೆಗಳನ್ನು ಕಾಲೇಜು ನಿರಂತರವಾಗಿ ಮುನ್ನಡೆಸುತ್ತಿದ್ದು ಸಾಮಾಜಿಕ ಜವಾಬ್ದಾರಿಯನ್ನು ಬದುಕಿನ ಭಾಗವಾಗಿಸಿಕೊಳ್ಳಬೇಕು ಎಂದರು.

ಕಾಲೇಜಿನಲ್ಲಿ ಒಟ್ಟು 234 ವಿದ್ಯಾರ್ಥಿನಿಯರಿಗೆ ಉದ್ಯೋಗ ಅವಕಾಶ ದೊರೆತಿರುವುದು ಬಹಳ ದೊಡ್ಡ ಸಾಧನೆಯಾಗಿದ್ದು, ಇಂದು ವರ್ತಮಾನದ ಸಮಾಜಕ್ಕೆ ಕಾಯಕ ದಾಸೋಹವನ್ನು ಮಾಡಬೇಕಿದೆ. ಬದುಕು ಕಟ್ಟಿಕೊಳ್ಳಲು ಉದ್ಯೋಗ ನೀಡುತ್ತಿರುವ ಉದ್ಯೋಗದಾತರ ಕೊಡುಗೆ ಅಪಾರವಾಗಿದೆ. ಯಶಸ್ಸಿಗೆ ಅಡ್ಡದಾರಿಗಳಿಲ್ಲ. ಪರಿಶ್ರಮ, ಪ್ರಯತ್ನದಿಂದ ಸಾಧನೆ ಮಾಡಿದಾಗ ಉತ್ತಮ ಬದುಕು ರೂಪಿಸಿಕೊಳ್ಳಬಹುದು ಎಂದು ಕರೆ ನೀಡಿದರು.

ಕಾಲೇಜಿನ ಪ್ರಾಂಶುಪಾಲ ಪ್ರೊ.ಸಾಯಿನಾಥ್ ಮಲ್ಲಿಗೆಮಾಡು ಅವರು 2023–2024ರ ವಾರ್ಷಿಕ ಚಟುವಟಿಕೆಗಳ ವರದಿಯನ್ನು ಮಂಡಿಸಿದರು. ಸಮಾರಂಭದಲ್ಲಿ ಕಾಲೇಜಿನ ಉಪಪ್ರಾಂಶುಪಾಲರಾದ ಪ್ರೊ.ಎನ್.ಭಾರತಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಪ್ರೊ ನಯನಕುಮಾರಿ, ಐಕ್ಯೂಎಸಿ ಸಂಚಾಲಕರಾದ ಪ್ರೊ.ಕೆ.ಎಸ್.ಸುಕೃತ ವಿದ್ಯಾರ್ಥಿನಿ ಸಂಘದ ಅಧ್ಯಕ್ಷೆ ಕುಮಾರಿ ರಿಯಾ ಮತ್ತು ವಿದ್ಯಾರ್ಥಿನಿಗಳು ಉಪಸ್ಥಿತರಿದ್ದರು. ಸಾಧಕ ವಿದ್ಯಾರ್ಥಿ ನಿಯರಿಗೆ ಬಹುಮಾನ ಮತ್ತು ಪ್ರಮಾಣ ಪತ್ರ ವಿತರಿಸಲಾಯಿತು.

ಮೈಸೂರಲ್ಲಿ ರೋಟರಿ ಜಿ20 ಯೋಗ ಶೃಂಗಸಭೆ



ಮೈಸೂರಿನ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಭಾಂಗಣದಲ್ಲಿ ಶನಿವಾರ ನಡೆದ ರೋಟರಿ ಜಿ20 ಯೋಗ ಶೃಂಗಸಭೆ 2024 ಅನ್ನು ವಿವೇಕಾನಂದ ಯೋಗ ಅನುಸಂದಾನ ಸಮಂತನ (VYASA) ವಿಶ್ವವಿದ್ಯಾನಿಲಯದ ಚಾನ್ಸಲರ್ ಪದ್ಮಶ್ರೀ ಡಾ.ಹೆಚ್.ಆರ್.ನಾಗೇಂದ್ರ (ಎಡದಿಂದ ನಾಲ್ಕನೆಯವರು) ಅವರು ಉದ್ಘಾಟಿಸಿದರು. (ಎಡದಿಂದ) ರೋಟರಿ ಜಿ20 ಶೃಂಗಸಭೆ ಸ್ಟೀರಿಂಗ್ ಕಮಿಟಿ ಅಧ್ಯಕ್ಷ ಎಂಸಿಎಸ್ ಮನೋಹರ, ಉಪಾಧ್ಯಕ್ಷ ಡಿ. ಶ್ರೀಹರಿ, ಜಿಲ್ಲಾ ಗವರ್ನರ್ ಹೆಚ್.ಆರ್. ಕೇಶವ, ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ರೋಟರಿ ಜಿ20 ಶೃಂಗಸಭೆ 2024ರ ಅಧ್ಯಕ್ಷ ಆರ್.ಕೃಷ್ಣ, ಆಯುಷ್ ಆಯುಕ್ತ ಶ್ರೀನಿವಾಸುಲು, ರೋಟರಿ ಜಿಲ್ಲಾ ಗವರ್ನರ್ ಪಿ.ಕೆ.ರಾಮಕೃಷ್ಣ ಹಾಗೂ ಸಂಯೋಜಕ ಡಾ.ಬಸವರಾಜು ಅವರನ್ನು ಚಿತ್ರದಲ್ಲಿ ಕಾಣಬಹುದು.

> ‘ಹಿತ್ತಲ ಗಿಡ ಮದ್ದಲ್ಲ’ ಎಂಬ ಗಾದೆಯಂತೆ ಆರೋಗ್ಯ ಕಾಪಾಡಿಕೊಳ್ಳುವ ಸೂತ್ರಗಳನ್ನು ಅನುಸರಿಸದಿರುವುದು, ಯೋಗ, ಆಯುರ್ವೇದ ಪದ್ಧತಿಯನ್ನು ಪ್ರಚುರಪಡಿಸಿ ಎಲ್ಲೆಂದರಲ್ಲಿ ಜನ ಮಾತನಾಡುವಂತೆ ಮಾಡದೇ ನಿರ್ಲಕ್ಷ್ಯ ಧೋರಣೆ ತಾಳಿರುವುದು ಇಂದಿನ ಆರೋಗ್ಯದ ಸ್ಥಿತಿಗೆ ಪ್ರಮುಖ ಕಾರಣಗಳಾಗಿವೆ. –ಶ್ರೀನಿವಾಸುಲು.

ಮೈಸೂರು, ಮೇ 18(ಆರ್‌ಕೆ)– ಯೋಗ, ಆಯುರ್ವೇದ ಮತ್ತು ಭಾರತೀಯ ಔಷಧ ಪದ್ಧತಿಯು ಮನೆ ಮನೆ ಮಾತಾಗಿ ಪ್ರಸಿದ್ಧಿಯಾಗಬೇಕಿದೆ ಎಂದು ಆಯುಷ್ ಆಯುಕ್ತ ಶ್ರೀನಿವಾಸುಲು ಇಂದಿಲ್ಲಿ ತಿಳಿಸಿದ್ದಾರೆ.

ಯೂತ್ ಫಾರ್ ಸೇವಾ, ಮೈಸೂರು ಯೋಗ ಒಕ್ಕೂಟ, ಓಕ್ರಾ, ಆರ್‌ಕೆ, ಅಮೇ ಸಂಸ್ಥೆಗಳ ಸಹಕಾರ, ಪ್ರಾಯೋಜಕರೊಂದಿಗೆ ರೋಟರಿ ಜಿಲ್ಲಾ 3181 ವತಿಯಿಂದ ಮೈಸೂರಿನ ಮುಕ್ತ ಗಂಗೋತ್ರಿಯಲ್ಲಿರುವ ಘಟಿಕೋತ್ಸವ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ರೋಟರಿ ಜಿ20 ಯೋಗ ಶೃಂಗಸಭೆ 2024ರಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದ ಅವರು, ಈ ಹಿಂದೆ, ವಾಸಿಸಲು ಮನೆ, ಹಸಿವು ನೀಗಿಸಿಕೊಳ್ಳಲು ಊಟ, ಜೀವನ ನಿರ್ವಹಣೆಗೆ ಕೆಲಸಬೇಕೆಂದು ಜನರು ಬಯಸುತ್ತಿದ್ದರು. ಕಾಲಾನಂತರ ಆ ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ವ್ಯವಸ್ಥೆ ಸುಲಭವಾಗಿ ಆಗುತ್ತಿದೆ. ಆದರೆ ಈಗ ಬೇಕಿರುವುದು ಆರೋಗ್ಯ ಎಂದರು.

ನಮ್ಮ ಜನಸಂಖ್ಯೆಯ ಶೇ.12ರಷ್ಟು (75 ಮಿಲಿಯನ್) ಜನರು ಡಯಾಬಿಟಿಕ್‌ನಿಂದ ಬಳಲುತ್ತಿದ್ದರೆ, ಶೇ.25ರಷ್ಟು ಮಂದಿ ಒಬೆಸಿಟಿಗೆ ತುತ್ತಾಗುತ್ತಿದ್ದಾರೆ. ಶೇ. 70ರಷ್ಟು ಮಂದಿ ನಾನ್ ಕಮ್ಯುನಿಕಲ್ ರೋಗದಿಂದ ಅನಾರೋಗ್ಯಕ್ಕೆ ತುತ್ತಾಗಿದ್ದಾರೆ. ಪಾಶ್ಚಿಮಾತ್ಯ ಜೀವನ ಶೈಲಿ, ಆಹಾರ ಪದ್ಧತಿಯಿಂದಾಗಿ ಅನಾರೋಗ್ಯ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು.

ಯೋಗ ಎಂಬುದು ಕೇವಲ ಯೋಗಪಟುಗಳು, ತರಬೇತಿ ಪಡೆಯುತ್ತಿರುವವರು ಹಾಗೂ ಇಲಾಖೆ ಅಧಿಕಾರಿಗಳು, ಸಿಬ್ಬಂದಿಗಳ ಮಾತಾಗಿದೆಯೇ ಹೊರತು, ಹೊರಗಿನ ಸಮಾಜದ ಜನರ ಮನೆ ಮಾತಾಗಬೇಕು, ಯೋಗದ ಬಗ್ಗೆ ಎಲ್ಲೆಡೆ ಚರ್ಚೆಯಾಗಬೇಕು ಆಗ ಮಾತ್ರ ಕಟ್ಟ ಕಡೆಯ ವ್ಯಕ್ತಿಗೂ ಉತ್ತಮ ಆರೋಗ್ಯ ಸಿಗುವಂತೆ ಮಾಡಬಹುದು ಎಂದ ಅವರು, ಯೋಗವನ್ನು ಸಮಾಜದ ಮುಖ್ಯವಾಹಿನಿಗೆ ತರಬೇಕು ಎಂದು ಅಭಿಪ್ರಾಯಪಟ್ಟರು.

ಶೃಂಗಸಭೆಯ ಸಾನ್ನಿಧ್ಯ ವಹಿಸಿದ್ದ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಮಾತನಾಡಿ, ಋಷಿಮುನಿಗಳು, ಸಾಧು–ಸಂತರು, ದಾಸರು, ದಾರ್ಶನಿಕರು ಯೋಗವನ್ನು ನಮಗೆ ಧಾರೆ ಎರೆದಿದ್ದಾರೆ. ಎಂತಹ ಒತ್ತಡವನ್ನೂ ನಿಗ್ರಹಿಸುವ ಶಕ್ತಿ ಯೋಗಕ್ಕಿದೆಯಾದ್ದರಿಂದಲೇ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಯೋಗವನ್ನು ಭಾರತ ದೇಶಕ್ಕೆ ಮಾತ್ರ ಸೀಮಿತಗೊಳಿಸದೇ ಪ್ರಪಂಚದಾದ್ಯಂತ ಪರಿಚಯಿಸಿದ್ದಾರೆ. ಇಂತಹ ಅತ್ಯದ್ಭುತವಾದ ಯೋಗವನ್ನು ಉತ್ತೇಜಿಸಿ ಜನರ ಆರೋಗ್ಯ ಕಾಪಾಡಬೇಕು ಎಂದರು.

ಬೆಂಗಳೂರಿನ ವ್ಯಾಸ ಯೂನಿವರ್ಸಿಟಿ ಚಾನ್ಸಿಲರ್ ಪದ್ಮಶ್ರೀ ಪುರಸ್ಕೃತ ಡಾ. ಹೆಚ್.ಆರ್.ನಾಗೇಂದ್ರ ಅವರು ರೋಟರಿ ಜಿ20 ಯೋಗ ಶೃಂಗಸಭೆ 2024 ಮೂಲಕ ಉದ್ಘಾಟಿಸಿ ಯೋಗದ ಪ್ರಾಮುಖ್ಯತೆ, ಹಿನ್ನೆಲೆ ಹಾಗೂ ಪ್ರಸ್ತುತ ಸ್ಥಿತಿಗತಿ ಕುರಿತು ಮಾತನಾಡಿದರು. ಶೃಂಗಸಭೆ ಅಧ್ಯಕ್ಷ ಆರ್.ಕೃಷ್ಣ, ಸಂಚಾಲಕ ಡಾ.ಬಸವರಾಜು, ರೋಟರಿ ಜಿಲ್ಲಾ ಗವರ್ನರ್ ಹೆಚ್.ಆರ್.ಕೇಶವ, ಉಪಾಧ್ಯಕ್ಷ ಡಿ.ಶ್ರೀಹರಿ, ಸ್ಟೀರಿಂಗ್ ಕಮಿಟಿ ಅಧ್ಯಕ್ಷ ಎಂಸಿಎಸ್ ಮನೋಹರ್, ರೋಟರಿ ಜಿಲ್ಲಾ ಗವರ್ನರ್ ಪಿ.ಕೆ.ರಾಮಕೃಷ್ಣ, ವಿಕ್ರಂ ದತ್ತ ಹಾಗೂ ಇನ್ನಿತರರು ಶೃಂಗಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು. ನಂತರ ನಡೆದ ಗೋಷ್ಠಿಗಳಲ್ಲಿ ಅಂತರರಾಷ್ಟ್ರೀಯ ಯೋಗ ಆಚಾರ್ಯ ಡಾ.ಎಂ.ಕೆ.ನಾಗರಾಜ ರಾವ್, ಏರೋಸ್ಪೇಸ್ ಇಲಾಖೆ ಪ್ರಧಾನ ಸಂಶೋಧನಾ ವಿಜ್ಞಾನಿ ಡಾ.ಎಸ್.ಎನ್. ಓಂಕಾರ, ಯೋಗ ತರಬೇತುದಾರ ವಿ.ಅಶ್ವತ್ಥ ರಾಮಯ್ಯ, ಅಂಕಣಕಾರ ಪ್ರೊ. ಎಂ.ಕೃಷ್ಣೇಗೌಡ, ಯೋಗಗುರು ಡಾ.ಕೆ. ರಾಘವೇಂದ್ರ ಪೈ ಸೇರಿದಂತೆ ಹಲವರು ಯೋಗದ ಪ್ರಸ್ತುತತೆ ಕುರಿತಂತೆ ಮಾತನಾಡಿದರು.

ನಾರಾಯಣಗೌಡರಿಗೆ ಹುಟ್ಟುಹಬ್ಬದ ಶುಭಾಶಯ...



ಇತ್ತೀಚೆಗೆ ಹುಟ್ಟುಹಬ್ಬ ಆಚರಿಸಿಕೊಂಡ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಅವರನ್ನು ಅಂಬಾರಿ ಕನ್ವೆಷನ್ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಹಾಲಕ್ಷ್ಮಿ ಸ್ವೀಟ್ಸ್ ಮುಖ್ಯ ವ್ಯವಸ್ಥಾಪಕ ನಿರ್ದೇಶಕರಾದ ಶಿವಕುಮಾರ್, ಉದ್ಯಮಿ ಸ್ವೀಟ್ ಮಹೇಶ್, ರವಿಶಾಸ್ತ್ರಿ ಇನ್ನಿತರರು ಆತ್ಮೀಯವಾಗಿ ಅಭಿನಂದಿಸಿ, ಹುಟ್ಟುಹಬ್ಬದ ಶುಭಾಶಯ ಕೋರಿದರು.

ಸರ್ಕಾರ ಶಿಕ್ಷಕರ ಬೇಡಿಕೆ ಈಡೇರಿಸಿದ ವಿಚಾರ ಮನದಟ್ಟು ಮಾಡಿಕೊಡಿ

ಕಾಂಗ್ರೆಸ್ ಕಾರ್ಯಕರ್ತರಿಗೆ ಮಾಜಿ ಶಾಸಕ ಸೋಮಶೇಖರ್ ಸಲಹೆ



ಮೈಸೂರಿನ ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪದಲ್ಲಿ ಶನಿವಾರ ದಕ್ಷಿಣ ಶಿಕ್ಷಕರ ಕ್ಷೇತದ ಚುನಾವಣೆ ಸಂಬಂಧ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿದರು.

ಮೈಸೂರು, ಮೇ18(ಬಿಎಲ್‌ಯು)– ರಾಜ್ಯ ಕಾಂಗ್ರೆಸ್ ಸರ್ಕಾರ ಶಿಕ್ಷಕರ ಹಲವು ಬೇಡಿಕೆ ಈಡೇರಿಸಿದ್ದು, ಈ ವಿಚಾರವನ್ನು ಶಿಕ್ಷಕ ಮತದಾರರಿಗೆ ಮನದಟ್ಟು ಮಾಡಿಕೊಡಬೇಕು ಎಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಕಾಂಗ್ರೆಸ್ ಕಾರ್ಯಕರ್ತರಿಗೆ ಸಲಹೆ ನೀಡಿದ್ದಾರೆ.

ಮೈಸೂರಿನ ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪದಲ್ಲಿ ಇಂದು ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆ ಸಂಬಂಧ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಶಿಕ್ಷಕರನ್ನು ವೈಯಕ್ತಿಕವಾಗಿ ಭೇಟಿ ಮಾಡಿ ಮತ ಕೇಳಬೇಕು. ಲೋಕಸಭಾ ಚುನಾವಣೆಯಂತೆಯೇ ಈ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಹೇಳಿದರು.

ಮರಿತಿಬ್ಬೇಗೌಡರು ಸತತ ನಾಲ್ಕು ಬಾರಿ ಈ ಕ್ಷೇತ್ರವನ್ನು ಪ್ರತಿನಿಧಿಸಿದ್ದಾರೆ. ಸದನದ ಒಳಗೆ ಹಾಗೂ ಹೊರಗೆ ಶಿಕ್ಷಕರ ಪರವಾಗಿ ಹೋರಾಟ ಮಾಡಿದ್ದಾರೆ. ಇದರಿಂದ ಇಷ್ಟು ವರ್ಷಗಳಿಂದ ಮರಿತಿಬ್ಬೇಗೌಡರನ್ನು ಶಿಕ್ಷಕ ಮತದಾರರು ಬೆಂಬಲಿಸಲು ಸಾಧ್ಯವಾಗಿದೆ. ಅದರಂತೆ ಈ ಬಾರಿ ಕೂಡ ಬೆಂಬಲಿಸುತ್ತಾರೆ ಎಂದು ಸೋಮಶೇಖರ್ ವಿಶ್ವಾಸ ವ್ಯಕ್ತಪಡಿಸಿದರು.

ನಗರ ಕಾಂಗ್ರೆಸ್ ಮಾಜಿ ಅಧ್ಯಕ್ಷ ಟಿ.ಎಸ್.ರವಿಶಂಕರ್ ಮಾತನಾಡಿ, ಮರಿತಿಬ್ಬೇಗೌಡರ ಪರವಾಗಿ ಮೊದಲ ಪ್ರಾಶಸ್ತ್ಯ ಕೇಳಬೇಕು. ಆಗ ಮೊದಲ ಹಂತದ ಮತ ಎಣಿಕೆಯಲ್ಲಿ ನಮ್ಮ ಅಭ್ಯರ್ಥಿ ಜಯ ಸಾಧಿಸುತ್ತಾರೆ ಎಂದರು.

ಮರಿತಿಬ್ಬೇಗೌಡರು ಮೊದಲು ಕಾಂಗ್ರೆಸ್ ಪಕ್ಷದಿಂದ ಗೆಲುವು ಸಾಧಿಸಿ, ನಂತರ ಪಕ್ಷೇತರರಾಗಿ ಕೂಡ ಜಯಗಳಿಸಿದ್ದರು. ತರುವಾಯ ಜೆಡಿಎಸ್ ಪಕ್ಷದಿಂದ ಗೆಲುವು ಸಾಧಿಸಿದ್ದರು. ಅವರು ಮಾಡಿರುವ ಶಿಕ್ಷಕರ ಪರವಾದ ಹೋರಾಟದಿಂದ ನಿರಂತರವಾಗಿ ಜಯಶಾಲಿಯಾಗುತ್ತಿದ್ದಾರೆ. ಅದರಂತೆ ಈ ಬಾರಿ ಕೂಡ ಶಿಕ್ಷಕ ಮತದಾರರು ಮರಿತಿಬ್ಬೇಗೌಡರನ್ನು ಬೆಂಬಲಿಸುತ್ತಾರೆ ಎಂದು ಹೇಳಿದರು.

ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಜಿ.ಸೋಮಶೇಖರ್, ಶ್ರೀಧರ್, ಪ್ರಧಾನ ಕಾರ್ಯದರ್ಶಿಗಳಾದ ಎಂ.ಶಿವಣ್ಣ, ಭಾಸ್ಕರ್ ಎಲ್.ಗೌಡ, ಕೆ.ವಿ.ಮಲ್ಲೇಶ್, ವಾಸು, ಮಂಜುಳಾ ಮಾನಸ ಸೇರಿದಂತೆ ಇತರರು ಸಭೆಯಲ್ಲಿ ಭಾಗವಹಿಸಿದ್ದರು.

ದಕ್ಷಿಣ ಶಿಕ್ಷಕರ ಕ್ಷೇತ್ರದ 13 ಅಭ್ಯರ್ಥಿಗಳ ನಾಮಪತ್ರ ಅಂಗೀಕಾರ

ಮೈಸೂರು, ಮೇ18(ಬಿಎಲ್‌ಯು)–ಮೈಸೂರಿನ ದಕ್ಷಿಣ ಶಿಕ್ಷಕರ ಕ್ಷೇತ್ರಕ್ಕೆ 13 ಅಭ್ಯರ್ಥಿಗಳು ಸಲ್ಲಿಸಿದ್ದ ನಾಮಪತ್ರಗಳು ಕ್ರಮಬದ್ಧವಾಗಿವೆ ಎಂದು ಚುನಾವಣಾಧಿಕಾರಿಗಳೂ ಆದ ಪ್ರಾದೇಶಿಕ ಆಯುಕ್ತ ಡಾ.ಜಿ.ಸಿ.ಪ್ರಕಾಶ್ ತಿಳಿಸಿದ್ದಾರೆ.

ದಕ್ಷಿಣ ಶಿಕ್ಷಕರ ಕ್ಷೇತ್ರಕ್ಕೆ ಸ್ಪರ್ಧೆ ಬಯಸಿ ಮೇ 9ರಿಂದ ಮೇ 16 ರವರೆಗೆ 13 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದರು. ಈ ಸಂಬಂಧ ನಿನ್ನೆ ನಾಮಪತ್ರ ಪರಿಶೀಲನೆ ನಡೆಸಿದ್ದು, 13 ಅಭ್ಯರ್ಥಿಗಳ ನಾಮಪತ್ರಗಳು ಕ್ರಮಬದ್ಧವಾಗಿವೆ ಎಂದು ಹೇಳಿದ್ದಾರೆ.

ನೈರುತ್ಯ ಪದವೀಧರ ಕ್ಷೇತ್ರಕ್ಕೆ ಸಲ್ಲಿಕೆಯಾಗಿದ್ದ 11 ಅಭ್ಯರ್ಥಿಗಳ ನಾಮಪತ್ರ ಕ್ರಮಬದ್ಧವಾಗಿವೆ. ಆದರೆ ನೈರುತ್ಯ ಶಿಕ್ಷಕರ ಕ್ಷೇತ್ರಕ್ಕೆ 10 ಅಭ್ಯರ್ಥಿಗಳು ಸಲ್ಲಿಸಿದ್ದ ನಾಮಪತ್ರದಲ್ಲಿ ಪಕ್ಷೇತರ ಅಭ್ಯರ್ಥಿ ಎಂ.ಸತೀಶ್ ಕಾರಂತ್ ನಾಮಪತ್ರ ತಿರಸ್ಕೃತವಾಗಿದ್ದು, 9 ನಾಮಪತ್ರಗಳು ಕ್ರಮಬದ್ಧವಾಗಿವೆ ಎಂದು ವಿವರಿಸಿದ್ದಾರೆ. ದಕ್ಷಿಣ ಶಿಕ್ಷಕರ ಕ್ಷೇತ್ರ ಸೇರಿದಂತೆ ಮೂರು ಕ್ಷೇತ್ರಗಳಲ್ಲಿ ನಾಮಪತ್ರ ಹಿಂಪಡೆಯಲು ಮೇ 20 ಮಧ್ಯಾಹ್ನ 3 ಗಂಟೆ ತನಕ ಅವಕಾಶವಿದೆ ಎಂದು ಡಾ.ಪ್ರಕಾಶ್ ತಿಳಿಸಿದ್ದಾರೆ.

ಚುನಾವಣಾ ವೀಕ್ಷಕರಾಗಿ ಡಾ.ರವಿಶಂಕರ್ ನೇಮಕ

ಮೈಸೂರು, ಮೇ18(ಬಿಎಲ್‌ಯು)– ದಕ್ಷಿಣ ಶಿಕ್ಷಕರ ಕ್ಷೇತ್ರ, ನೈರುತ್ಯ ಪದವೀಧರ, ಶಿಕ್ಷಕರ ಕ್ಷೇತ್ರಗಳಿಗೆ ಚುನಾವಣಾ ಆಯೋಗ ಐಎಎಸ್ ಅಧಿಕಾರಿಗಳನ್ನು ಚುನಾವಣಾ ವೀಕ್ಷಕರಾಗಿ ನೇಮಕ ಮಾಡಿದೆ.

ದಕ್ಷಿಣ ಶಿಕ್ಷಕರ ಕ್ಷೇತ್ರವಾದ ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಹಾಸನ ಜಿಲ್ಲೆಗೆ ಐಎಎಸ್ ಅಧಿಕಾರಿ ಡಾ.ರವಿಶಂಕರ್ ಅವರನ್ನು ಚುನಾವಣಾ ವೀಕ್ಷಕರಾಗಿ ನೇಮಕ ಮಾಡಿದ್ದು, ಮೈಸೂರಿನ ಅಬಕಾರಿ ಉಪಆಯುಕ್ತ ಎಸ್.ನಾಗರಾಜಪ್ಪ (9449597178) ಅವರನ್ನು ಸಹಾಯಕ ಅಧಿಕಾರಿಯಾಗಿ ನಿಯೋಜಿಸಲಾಗಿದೆ.

ನೈರುತ್ಯ ಪದವೀಧರ ಕ್ಷೇತ್ರ ಹಾಗೂ ನೈರುತ್ಯ ಶಿಕ್ಷಕರ ಕ್ಷೇತ್ರಕ್ಕೆ ಕೊಡಗು, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ ಹಾಗೂ ದಾವಣಗೆರೆ ಜಿಲ್ಲೆಗಳಿಗೆ ಐಎಎಸ್ ಅಧಿಕಾರಿಗಳಾದ ಹರ್ಷ ಗುಪ್ತ ಹಾಗೂ ಟಿ.ಕೆ.ಅನಿಲ್‌ಕುಮಾರ್ ಅವರನ್ನು ನೇಮಕ ಮಾಡಿ ಚುನಾವಣಾ ಆಯೋಗ ಆದೇಶ ಹೊರಡಿಸಿದೆ.


ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ಕೆ.ರುದ್ರೇಶ್ (9964174107) ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ (9448244340) ಅವರನ್ನು ಸಹಾಯಕ ಅಧಿಕಾರಿಯಾಗಿ ಚುನಾವಣಾ ಆಯೋಗ ನಿಯೋಜಿಸಿದೆ.

ಮೇ 22ರಂದು ಶ್ರೀ ಲಕ್ಷ್ಮೀನರಸಿಂಹ ಜಯಂತ್ಯುತ್ಸವ, ವಿಶೇಷ ಸ್ವಾತಿ ಪೂಜೆ



ಮೈಸೂರು, ಮೇ 18– ನಗರದ ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದಲ್ಲಿ ಮೇ 22ರಂದು ಶ್ರೀ ಲಕ್ಷ್ಮೀನರಸಿಂಹ ಜಯಂತಿ ಹಾಗೂ ವಿಶೇಷ ಸ್ವಾತಿ ಪೂಜೆ ಪ್ರಯುಕ್ತ ವಿಶೇಷ ಪೂಜಾ ಕೈಂಕರ್ಯಗಳನ್ನು ಆಯೋಜಿಸಲಾಗಿದೆ. ಅಂದು ಬೆಳಗ್ಗೆ 7ಕ್ಕೆ ವಿಶ್ವ ರೂಪದರ್ಶನ, 8ಕ್ಕೆ ಮಹಾಸಂಕಲ್ಪದೊಂದಿಗೆ ನವಕಳಶ ಸ್ಥಾಪನೆ ಅವಾಹನ, ಬೆಳಗ್ಗೆ 9ರಿಂದ 10.30 ರವರೆಗೆ ವಿಶೇಷವಾದ (108 ಲೀಟರ್ ಹಾಲು, 108 ಲೀಟರ್ ಮೊಸರು, 108 ಎಳನೀರು) ಮತ್ತು ಇನ್ನೂ ಇತರೆ ದ್ರವ್ಯಗಳೊಂದಿಗೆ ಮಹಾಭಿಷೇಕ ನಡೆಯಲಿದೆ. ಮಧ್ಯಾಹ್ನ 12ಕ್ಕೆ ಅಲಂಕಾರ, 1ಕ್ಕೆ ವಿಶೇಷ ಪ್ರಸಾದ ನೈವೇದ್ಯ, ಮಹಾಮಂಗಳಾರತಿ, ಶಾತ್ತುಮೊರೈ, ತೀರ್ಥ ಪ್ರಸಾದ ವಿನಿಯೋಗವಿರುತ್ತದೆ. ನಂತರ ಸಂಜೆ 6.30ಕ್ಕೆ ತಿರುವೀದಿ ಉತ್ಸವ (ಒಂಟಿಕೊಪ್ಪಲ್ ಶ್ರೀನಿವಾಸ ದೇವಸ್ಥಾನ, ಆಂಡಾಳ್ ಮಂದಿರ, ಚಂದ್ರಮೌಳೇಶ್ವರ ದೇವಸ್ಥಾನದ ಮೂಲಕ) ಹಮ್ಮಿಕೊಳ್ಳಲಾಗಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ನರಸಿಂಹನ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ದೇವಸ್ಥಾನದ ಮುಖ್ಯಸ್ಥರಾದ ವಿದ್ವಾನ್ ಕೆ.ಆರ್.ಯೋಗಾ ನರಸಿಂಹನ್ ತಿಳಿಸಿದ್ದಾರೆ. ಮಾಹಿತಿಗೆ ಮೊ. 934218 8323, 7598832271

ವಿ.ಶ್ರೀನಿವಾಸಪ್ರಸಾದ್‌ರಿಗೆ ಕಾವೇರಿ ಕ್ರಿಯಾ ಸಮಿತಿ ಶ್ರದ್ಧಾಂಜಲಿ



ಕಾವೇರಿ ಕ್ರಿಯಾ ಸಮಿತಿ ವತಿಯಿಂದ ವಿ.ಶ್ರೀನಿವಾಸಪ್ರಸಾದ್ ಅವರ ಶ್ರದ್ಧಾಂಜಲಿ ಸಭೆ ನಡೆಸಿ, ನುಡಿ ನಮನ ಸಲ್ಲಿಸಲಾಯಿತು.

ಮೈಸೂರು, ಮೇ 18(ಎಂಟಿವೈ)– ಮೈಸೂರಿನ ದೊಡ್ಡಗಡಿಯಾರ ಬಳಿ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ದಿ. ವಿ.ಶ್ರೀನಿವಾಸಪ್ರಸಾದ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸಮಿತಿಯ ಸದಸ್ಯರು ವಿ.ಶ್ರೀನಿವಾಸಪ್ರಸಾದ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಗೌರವ ಸಮರ್ಪಿಸಿದರು.

ಶ್ರದ್ಧಾಂಜಲಿ ಸಭೆಯಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ಸಂಸದ ವಿ.ಶ್ರೀನಿವಾಸ ಪ್ರಸಾದ್ ಆದರ್ಶವಾದಿ ತತ್ವ ಸಿದ್ಧಾಂತವುಳ್ಳ ರಾಜಕಾರಣಿಯಾಗಿದ್ದರು. ಅವರು ನಡೆ ನುಡಿಯಲ್ಲಿ ನೇರತನ ಹೊಂದಿದ್ದರು. ಯಾವುದೇ ರಾಜಕೀಯ ಪಕ್ಷದಲ್ಲಿದ್ದರೂ ಜನರ ಸಮಸ್ಯೆಗೆ ಸ್ಪಂದಿಸುತ್ತಿದ್ದರು. ಜನರೊಂದಿಗೆ ಸದಾ ಇರುತ್ತಿದ್ದರು. 30 ವರ್ಷದ ಹಿಂದೆಯೇ ವಿಧಾನಸೌಧದ ಮೆಟ್ಟಿಲು ಹತ್ತುತ್ತೀರಿ ಎಂದು ನನಗೆ ಆಶೀರ್ವದಿಸಿದ್ದರು ಎಂದು ಸ್ಮರಿಸಿದರು.

ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ, ಬಿಜೆಪಿ ಮುಖಂಡ ಎಸ್.ಜಯಪ್ರಕಾಶ್ ಮಾತನಾಡಿ, ವಿ.ಶ್ರೀನಿವಾಸಪ್ರಸಾದ್ ಕೇಂದ್ರ ರಾಜ್ಯ ಸಚಿವರಾಗಿ, ಸಂಸದರಾಗಿ ಸ್ಮರಣೀಯ ಸೇವೆ ಸಲ್ಲಿಸಿದ್ದಾರೆ. ಅಧಿಕಾರಕ್ಕಾಗಿ ಎಂದಿಗೂ ರಾಜಿ ಮಾಡಿಕೊಳ್ಳದ ರಾಜಕಾರಣಿ. ತಾವು ನಂಬಿದ ತತ್ವ–ಸಿದ್ಧಾಂತಗಳು, ಕೈಗೊಂಡಿದ್ದ ತೀರ್ಮಾನಗಳಿಂದಲೇ ತಮ್ಮ ಮೇರು ವ್ಯಕ್ತಿತ್ವ ಪ್ರದರ್ಶಿಸಿದ್ದಾರೆ. ನಾನು ಹಲವು ವರ್ಷಗಳಿಂದ ಶ್ರೀನಿವಾಸಪ್ರಸಾದ್ ಅವರೊಂದಿಗೆ ಸಂಪರ್ಕದಲ್ಲಿದ್ದೆ ಎಂದರು.

ಸಭೆಯಲ್ಲಿ ಡಾ.ರಾಜ್ ಅಭಿಮಾನಿಗಳ ಬಳಗದ ಸಂಸ್ಥಾಪಕ ರಾಜ್ಯಾಧ್ಯಕ್ಷ ಎನ್.ರಾಮೇಗೌಡ, ಮುಖಂಡ ಮೆಲ್ಲಹಳ್ಳಿ ಮಹದೇವಸ್ವಾಮಿ, ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕನ್ನಡ ಚಳುವಳಿಗಾರ ಮೂಗೂರು ನಂಜುಂಡಸ್ವಾಮಿ, ಮುಖಂಡ ತೇಜಸ್ ಲೋಕೇಶ್ ಗೌಡ ಮಾತನಾಡಿ, ಶ್ರೀನಿವಾಸಪ್ರಸಾದ್ ಅವರೊಂದಿಗೆ ಒಡನಾಟ, ಪಾಲ್ಗೊಂಡ ಹೋರಾಟಗಳು, ಕೈಗೊಂಡ ಜನಪರ ಕಾರ್ಯಕ್ರಮಗಳ ಬಗ್ಗೆ ವಿವರಿಸಿ, ನುಡಿ ನಮನ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಕಾವೇರಿ ಕ್ರಿಯಾ ಸಮಿತಿ ಉಪಾಧ್ಯಕ್ಷ ಎಂ.ಜೆ.ಸುರೇಶ್‌ಗೌಡ, ಸೋಮಶೇಖರ್, ಬೋಗಾದಿ ಸಿದ್ದೇಗೌಡ, ಕೃಷ್ಣೇಗೌಡ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಸಿಂಧುವಳ್ಳಿ ಶಿವಕುಮಾರ್, ರವೀಶ್, ಡಿಪಿಕೆ, ಸುರೇಶ್ ಗೋಲ್ಡ್ ಶಿವಲಿಂಗಯ್ಯ, ಪ್ರಭುಶಂಕರ, ರಾಜಶೇಖರ್, ಹೊನ್ನೇಗೌಡ, ಹನುಮಂತಯ್ಯ, ಕೃಷ್ಣಪ್ಪ, ಹನುಮಂತಯ್ಯ, ಮಂಜುಳಾ, ನೇಹಾ, ಪುಷ್ಪವತಿ, ವನಿತ, ಬಿಳಿಕೆರೆ ಸೌಭಾಗ್ಯ, ಆಟೋ ಮಹದೇವ್, ಅಶೋಕ್, ಭಾಗ್ಯಮ್ಮ, ಅಕ್ಬರ್, ವಿಷ್ಣು, ಪ್ರಭಾಕರ್ ಸುಬ್ಬೇಗೌಡ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಭಾನುವಾರ 19 ಮೇ 2024

ಶ್ರೀನಿಮಿಷಾಂಬ ದೇವಿಯ ವೈಭವದ ವರ್ಧಂತ್ಯುತ್ಸವ

ಗಂಜಾಂ ರಾಜ ಬೀದಿಯಲ್ಲಿ ದೇವಿಯ ಉತ್ಸವ ಮೂರ್ತಿಯ ಮೆರವಣಿಗೆ




ಶ್ರೀರಂಗಪಟ್ಟಣ ತಾಲೂಕು ಗಂಜಾಂನಲ್ಲಿರುವ ನಿಮಿಷಾಂಬ ದೇವಿಯ ವರ್ಧಂತ್ಯುತ್ಸವ ಅಂಗವಾಗಿ ಉತ್ಸವ ಮೂರ್ತಿಯ ಭವ್ಯ ಮೆರವಣಿಗೆ ವಿಜೃಂಭಣೆಯಿಂದ ನಡೆಯಿತು.

ಶ್ರೀರಂಗಪಟ್ಟಣ: ಪಟ್ಟಣದ ಗಂಜಾಂನಲ್ಲಿರುವ ಐತಿಹಾಸಿಕ ಪ್ರಸಿದ್ಧ ಆದಿದೇವತೆ ನಿಮಿಷಾಂಬ ದೇವಿಯ ವರ್ಧಂತ್ಯುತ್ಸವ ವಿಜೃಂಭಣೆಯಿಂದ ನಡೆಯಿತು.

ಸಾವಿರಾರು ಭಕ್ತರು ಪಾಲ್ಗೊಂಡು ದೇವಿಯ ದರ್ಶನ ಪಡೆದರು. ಬೆಂಗಳೂರಿನ ಧಾರ್ಮಿಕದತ್ತಿ ಇಲಾಖೆಯ ಆಯುಕ್ತ ಎಚ್.ಬಸವರಾಜೇಂದ್ರ, ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ, ಅಪರ ಜಿಲ್ಲಾಧಿಕಾರಿ ಡಾ.ಎಚ್.ಎಲ್.ನಾಗರಾಜು ಹಾಗೂ ದೇವಾಲಯ ಸಮಿತಿ ಅಧ್ಯಕ್ಷರು, ಸದಸ್ಯರ ನೇತೃತ್ವದಲ್ಲಿ ವಿಶೇಷ ಪೂಜೆ, ಹೋಮ, ಹವನಗಳು ನಡೆಯಿತು. ದೇವಾಲಯ ಸೇರಿದಂತೆ ದೇವಿಗೆ ವಿಶೇಷವಾಗಿ ಹೂವಿನ ಅಲಂಕಾರ, ದೀಪಾಲಂಕಾರ ಮಾಡಲಾಗಿತ್ತು. ಇತರ ಸೇವೆಗಳು ನಡೆದು ಶನಿವಾರ ಬೆಳಿಗ್ಗೆ 8ಕ್ಕೆ ಮಹಾ ಸಂಕಲ್ಪ, ಕಲಶ ಸ್ಥಾಪನೆ, ಸಪ್ತಶತಿ ಪಾರಾಯಣ, ಕಲಶ ಪೂಜೆಯಿಂದ ಪ್ರಾರಂಭಗೊಂಡು ಹೋಮ ಪೂರ್ಣಾಹುತಿಯೊಂದಿಗೆ 121 ಕಲಶಗಳ ಮಹಾಭಿಷೇಕ, ಅಷ್ಟದಿಗ್ಬಲಿ ಪೂಜೆ ನಡೆಯಿತು.

ಈ ಬಾರಿ ದೇವಾಲಯದ ವ್ಯವಸ್ಥಾಪನಾ ಸಮಿತಿ ಸೇರಿ ಅಧಿಕಾರಿ ವರ್ಗದವರಿಂದ ದೇವಾಲಯಕ್ಕೆ ಬರುವ ಭಕ್ತರಿಗೆ ಅನ್ನದಾನ, ಪ್ರಸಾದ ಕಾರ್ಯಕ್ರಮಗಳು ಎಂದಿನಂತೆ ನಡೆಯಿತು. ಸಂಜೆ ದಕ್ಷಿಣ ಗಂಗೆ ಕಾವೇರಿ ಮಾತೆಗೆ ಪೂಜೆ ಮಹಾ ಆರತಿ ನೆರವೇರಿಸಲಾಯಿತು. ದೇವಾಲಯದ ಕಾರ್ಯನಿರ್ವಹಣಾಧಿಕಾರಿ ಸಿ.ಜಿ.ಕೃಷ್ಣ, ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಗೋಪಾಲಕೃಷ್ಣ, ಸಮಿತಿ ಸದಸ್ಯರು, ಸ್ಥಳೀಯ ಜನಪ್ರತಿನಿಧಿಗಳು ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿ ವಿಶೇಷ ದರ್ಶನ ಪಡೆದರು.

ರಾಜಬೀದಿಯಲ್ಲಿ ಉತ್ಸವ: ನಂತರ ಸಂಜೆ ದಕ್ಷಿಣ ಗಂಗೆ ಕಾವೇರಿಗೆ ಮಹಾ ಮಂಗಳಾರತಿ ನಂತರ, ಕೊರೊನಾ ಸಮಯದಲ್ಲಿ ನಿಂತು ಹೋಗಿದ್ದ ಶ್ರೀನಿಮಿಷಾಂಬ ಉತ್ಸವ ಮೂರ್ತಿ ಮೆರವಣಿಗೆ ಈ ಬಾರಿ ಮತ್ತೆ ಗಂಜಾಂ ರಾಜಬೀದಿಗಳಲ್ಲಿ ನಡೆಯಿತು. ಗಂಜಾಂ ಗ್ರಾಮದ ರಾಜಬೀದಿಯಲ್ಲಿ ಅಲಂಕಾರಗೊಂಡ ಬೆಳ್ಳಿ ಪಲ್ಲಕ್ಕಿಯಲ್ಲಿ ಶ್ರೀನಿಮಿಷಾಂಬ ದೇವಿಯ ಉತ್ಸವ ಮೂರ್ತಿಯನ್ನು ವೈಭವಯುತವಾಗಿ ಮೆರವಣಿಗೆ ನಡೆಸಲಾಯಿತು. ಗ್ರಾಮದ ಕರೀಘಟ್ಟ ರಸ್ತೆ ಮೂಲಕ ಹಾದು ಆರ್ಕಾಟ್ ಬೀದಿ, ಕರಡಿ ಮಾರಮ್ಮನ ರಸ್ತೆ ಮೂಲಕ ಗುಂಬಸ್ ರಸ್ತೆ ಮಾರ್ಗವಾಗಿ ಸಾಗಿ ನವಗ್ರಹ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ ಪ್ರಸಾದ ವಿನಿಯೋಗದ ನಂತರ ಅದೇ ಮಾರ್ಗವಾಗಿ ದೇವಾಲಯಕ್ಕೆ ಆಗಮಿಸಿತು. ಭಕ್ತರು ತಮ್ಮ ತಮ್ಮ ಮನೆ ಮುಂದೆ ಶುಚಿ ಮಾಡಿ ರಂಗೋಲಿ ಬಿಟ್ಟು ದೇವಿ ಮೆರವಣಿಗೆ ಬರುವುದನ್ನೆ ಕಾಯುತ್ತಿದ್ದರು. ಮನೆ ಮುಂದೆ ಬಂದ ದೇವಿಗೆ ಹಣ್ಣು ಕಾಯಿ ಆರತಿ ಮಾಡಿ ಭಕ್ತಿ ಭಾವದಿಂದ ಪ್ರಾರ್ಥನೆ ಸಲ್ಲಿಸಿದರು.

ಚಿನಕುರಳಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವ ಮೂಲಕ ದೇವೇಗೌಡರ ಹುಟ್ಟುಹಬ್ಬ ಆಚರಣೆ

ಚಿನಕುರಳಿ: ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಹುಟ್ಟುಹಬ್ಬದ ಅಂಗವಾಗಿ ಚಿನಕುರಳಿ ಗ್ರಾಮದಲ್ಲಿ ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಅವರ ನೇತೃತ್ವದಲ್ಲಿ ಅಭಿಮಾನಿಗಳು ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರು.

ಗ್ರಾಮದ ಶ್ರೀ ಗಣಪತಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರಿಗೆ ಭಗವಂತ ಇನ್ನೂ ಹೆಚ್ಚಿನ ಆಯಸ್ಸು, ಆರೋಗ್ಯ ಕೊಟ್ಟು ಕಾಪಾಡಲಿ ಎಂದು ಪ್ರಾರ್ಥಿಸಿದರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ಕನ್ನಡದ ಏಕೈಕ ಪ್ರಧಾನ ಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ನನ್ನ ನೆಚ್ಚಿನ ನಾಯಕರಾದ ಎಚ್.ಡಿ.ದೇವೇಗೌಡ ಅಪ್ಪಾಜಿ ಅವರ ಹುಟ್ಟುಹಬ್ಬದ ಅಂಗವಾಗಿ ಚಿನಕುರಳಿಯ ಗಣಪತಿ ದೇವಸ್ಥಾನದಲ್ಲಿ ದೇವರಿಗೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ಸಾಂಕೇತಿಕವಾಗಿ ಹುಟ್ಟುಹಬ್ಬವನ್ನು ಆಚರಣೆ ಮಾಡಿದ್ದೇವೆ ಎಂದರು.

ಮಾಜಿ ಪ್ರಧಾನಮಂತ್ರಿ ಎಚ್.ಡಿ.ದೇವೇಗೌಡರು ಕರ್ನಾಟಕದ ಹೆಮ್ಮೆಯ ಪ್ರತೀಕ, ರೈತನ ಮಗನಾಗಿ ಜನಿಸಿ ರಾಜ್ಯದ ಮುಖ್ಯಮಂತ್ರಿಯಾಗಿ, ದೇಶದ ಪ್ರಧಾನಮಂತ್ರಿಯಾಗಿ ನೂರಾರು ಜನಪರ, ರೈತಪರ ಯೋಜನೆಗಳನ್ನು ಜಾರಿಗೆ ತಂದು ಅನುಕೂಲ ಮಾಡಿಕೊಟ್ಟಿದ್ದಾರೆ. ಕಾವೇರಿ ವಿಚಾರದಲ್ಲಿ ನಿರಂತರ ಹೋರಾಟ ನಡೆಸುತ್ತಾ ಬಂದಿದ್ದಾರೆ. ಇಂತಹ ಧೀಮಂತ ನಾಯಕರ ಸೇವೆ ಇನ್ನೂ ನೂರು ಕಾಲ ನಾಡಿಗೆ ಅವಶ್ಯಕತೆ ಇದ್ದು ಭಗವಂತ ಎಚ್.ಡಿ.ದೇವೇಗೌಡರು ನೂರ್ಕಾಲ ಬಾಳಲಿ ಎಂದು ದೇವರಲ್ಲಿ ಪ್ರಾರ್ಥನೆ ಸಲ್ಲಿಸಿದ್ದೇವೆ ಎಂದರು.



ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಹುಟ್ಟುಹಬ್ಬದ ಅಂಗವಾಗಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಹಾಗೂ ಬೆಂಬಲಿಗರು ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರು.

ಸಂದರ್ಭದಲ್ಲಿ ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ತಾಪಂ ಮಾಜಿ ಸದಸ್ಯ ಸಿ.ಎಸ್. ಗೋಪಾಲಗೌಡ, ಡೇರಿ ಅಧ್ಯಕ್ಷ ಸಿ.ಶಿವಕುಮಾರ್, ವಿಎಸ್ಎಸ್ಎನ್‌ಬಿ ಅಧ್ಯಕ್ಷ ಮಂಜುನಾಥ್, ಮಾಜಿ ಅಧ್ಯಕ್ಷ ಮೊಗ್ಗಣ್ಣಗೌಡ, ವಾಸುದೇವು, ಗ್ರಾಪಂ ಅಧ್ಯಕ್ಷೆ ಗಾಯಿತ್ರಿ, ಮಾಜಿ ಅಧ್ಯಕ್ಷರಾದ ಪಾಪಣ್ಣ, ಮಹಮದ್ ಪಾಷ, ಡೇರಿ ಉಪಾಧ್ಯಕ್ಷ ರಮೇಶ್, ರಾಜಣ್ಣ, ಗ್ರಾಪಂ ಸದಸ್ಯರು, ಡೇರಿ ನಿರ್ದೇಶಕರು ಸೇರಿದಂತೆ ಹಲವು ಮುಖಂಡರು, ಅಭಿಮಾನಿಗಳು ಹಾಜರಿದ್ದರು.

ಕೆ.ಆರ್.ಪೇಟೆಯಲ್ಲಿ ದೇವೇಗೌಡರ ಹುಟ್ಟುಹಬ್ಬ ಆಚರಣೆ



ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ 92ನೇ ವರ್ಷದ ಹುಟ್ಟುಹಬ್ಬದ ಪ್ರಯುಕ್ತ ಕೆ.ಆರ್.ಪೇಟೆ ಶಾಸಕ ಹೆಚ್.ಟಿ.ಮಂಜು ಅವರ ನೇತೃತ್ವದಲ್ಲಿ ಕೆ.ಆರ್.ಪೇಟೆಯ ದುಂಡಶೆಟ್ಟಿ ಲಕ್ಷ್ಮಮ್ಮ ಸ್ಮಾರಕ ತಾಲೂಕು ಸಾರ್ವಜನಿಕ ಆಸ್ಪತ್ರೆಯ ಹೊರರೋಗಿಗಳಿಗೆ ಹಣ್ಣು-ಹಂಪಲು ವಿತರಿಸುವ ಮೂಲಕ ಅರ್ಥಪೂರ್ಣವಾಗಿ ಹುಟ್ಟುಹಬ್ಬ ಆಚರಿಸಲಾಯಿತು.

ಬರ, ನರೇಗಾ ಹಣ ರೈತರ ಸಾಲಕ್ಕೆ ಜಮಾ: ಡಿ.ಸಿ.ತಮ್ಮಣ್ಣ ಆಕ್ರೋಶ



ಭಾರತೀನಗರ, ಮೇ 18– ಕೇಂದ್ರ ಸರ್ಕಾರದಿಂದ ಬಂದಿರುವ ಬರ ಪರಿಹಾರ ಹಾಗೂ ನರೇಗಾ ಕೂಲಿ ಹಣವನ್ನು ರೈತರ ಸಾಲಕ್ಕೆ ಬ್ಯಾಂಕುಗಳು ಜಮೆ ಮಾಡಿಕೊಳ್ಳುತ್ತಿದ್ದು, ಇದು ಸಂಕಷ್ಟದಲ್ಲಿರುವ ರೈತರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ ಎಂದು ಮಾಜಿ ಸಚಿವ ಡಿ.ಸಿ.ತಮ್ಮಣ್ಣ ತಿಳಿಸಿದ್ದಾರೆ.

ಭಾರತೀನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರೈತರ ಸಂಕಷ್ಟಕ್ಕೆ ಕೊನೆಯೇ ಇಲ್ಲ ಎನ್ನುವಂತಾಗಿದೆ. ಬರದಿಂದ ಕಂಗೆಟ್ಟಿರುವ ರೈತರ ನೆರವಿಗೆ ಧಾವಿಸಬೇಕಾಗಿದ್ದ ರಾಜ್ಯದ ಕಾಂಗ್ರೆಸ್ ಸರ್ಕಾರ ಕೈಕಟ್ಟಿ ಕೂತಿದೆ ಎಂದು ಕಿಡಿಕಾರಿದರು. ಕೇಂದ್ರ ಸರ್ಕಾರದಿಂದ ರೈತರ ಬ್ಯಾಂಕ್ ಖಾತೆಗಳಿಗೆ ಜಮೆ ಆಗಿದ್ದ ಬರ ಪರಿಹಾರ ಹಣವನ್ನು ಸಾಲಕ್ಕೆ ಜಮೆ ಮಾಡಿಕೊಳ್ಳುತ್ತಿರುವ ಬ್ಯಾಂಕ್‌ಗಳ ವರ್ತನೆ ನಿಜಕ್ಕೂ ಖಂಡನೀಯ. ಮೊದಲೇ ತೀವ್ರ ಬರ, ಬೆಳೆ ನಾಶದಿಂದ ಕಂಗೆಟ್ಟಿರುವ ರೈತರ ಕಣ್ಣಲ್ಲಿ ರಕ್ತ ತರಿಸುವ ಅಮಾನವೀಯ ಕ್ರಮ ಇದಾಗಿದೆ. ರಾಜ್ಯ ಸರ್ಕಾರ ಕೂಡಲೇ ಸಾಲ ನೀಡಿರುವ ಎಲ್ಲ ಬ್ಯಾಂಕ್‌ಗಳ ಮುಖ್ಯಸ್ಥರ ಸಭೆ ಕರೆದು, ಈ ಬಗ್ಗೆ ಗಂಭೀರವಾಗಿ ಚರ್ಚೆ ನಡೆಸಿ, ಬರ ಪರಿಹಾರ ಮೊತ್ತವನ್ನು ಸಾಲಕ್ಕೆ ಜಮೆ ಮಾಡಬಾರದು ಎಂದು ತಾಕೀತು ಮಾಡಬೇಕು ಎಂದು ಆಗ್ರಹಿಸಿದ್ದಾರೆ.

12ನೇ ಶತಮಾನ ಶರಣ ಸಾಹಿತ್ಯದ ಯುಗ ಪರಿವರ್ತನೆಯ ಕಾಲ



ಸಾಧಕರಿಗೆ ಗೊರುಚ ದತ್ತಿ ನಿಧಿ 2023 ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮಂಡ್ಯ,ಮೇ 18– ಶರಣ ಎಂಬ ಪದಕ್ಕೆ ಮಿಗಿಲಾದ ಪದವಿಲ್ಲ. ಅದೊಂದು ಸರಳತೆ, ಸಜ್ಜನಿಕೆ, ಎಲ್ಲರನ್ನು ಪರಿವರ್ತನೆ ಮಾಡುವಂತದ್ದು, 12ನೇ ಶತಮಾನದಲ್ಲಿದ್ದ ಶರಣ ಸಾಹಿತ್ಯದ ಯುಗ ಒಂದು ಪರಿವರ್ತನೆಯ ಯುಗ ಅಥವಾ ಕಾಲವಾಗಿತ್ತು ಎಂದು ಬೇಬಿ ಮತ್ತು ಚಂದ್ರವನ ಆಶ್ರಮ ಹಾಗೂ ಶ್ರೀ ದುರ್ದಂಡೇಶ್ವರ ಮಹಂತ ಶಿವಯೋಗಿಗಳ ಮಠದ ಪೀಠಾಧಿಪತಿ ಡಾ.ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಅಭಿಪ್ರಾಯಪಟ್ಟರು.

ಶನಿವಾರ ನಗರದ ಕರ್ನಾಟಕ ಸಂಘದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು, ಮಂಡ್ಯ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ಏರ್ಪಡಿಸಿದ್ದ ಗೊರುಚ ದತ್ತಿನಿಧಿ–2023 ಪ್ರಶಸ್ತಿ ಪ್ರದಾನ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ಕಲ್ಲನ್ನು ಲಿಂಗ ಎಂದು ಕಟ್ಟಿಕೊಂಡು ಬಂದ ಕಳ್ಳನನ್ನು ನೀನೇ ಜಂಗಮ ಎಂದು ಪರಿವರ್ತನೆ ಮಾಡಿದ, ಸೂಳೆ ಸಂಕವ್ವಳನ್ನು ಶರಣ ಸಂಸ್ಕೃತಿಗೆ ಕರೆದು ತಂದದ್ದು, ಕಾಶ್ಮೀರದ ರಾಜ ಮಾದೇವ ಗೋಪಾಲ ಎಲ್ಲವನ್ನು ತ್ಯಜಿಸಿ ಕಲ್ಯಾಣಕ್ಕೆ ಬಂದಿದ್ದು ಇದೆಲ್ಲ ಶರಣರ ಕಾಲದಲ್ಲಿ ನಡೆದಿದೆ ಎಂದರೆ 12ನೇ ಶತಮಾನದ ಬಸವ ಯುಗ ಪರಿವರ್ತನೆ ಯುಗ ಎಂದು ಬಣ್ಣಿಸಿದರು.

ಅಭಿನಂದನಾ ನುಡಿಗಳನ್ನಾಡಿದ ಹಿರಿಯ ಸಾಹಿತಿ ಡಾ.ಪ್ರದೀಪಕುಮಾರ್ ಹೆಬ್ರಿ, ಜನ್ಮದಿನ ಆಚರಿಸಿಕೊಳ್ಳುತ್ತಿರುವ ಗೊ.ರು.ಚನ್ನಬಸಪ್ಪ ಅವರು ಒಬ್ಬ ವ್ಯಕ್ತಿ ಎಷ್ಟು ಎತ್ತರಕ್ಕೆ ಏರಬಹುದು ಎಂಬುದನ್ನು ತೋರಿಸಿ ಕೊಟ್ಟಿದ್ದಾರೆ. ಇವರು ನಮ್ಮ ಸಮಾಜದ ಉತ್ಸಾಹದ ಪ್ರತಿನಿಧಿ. 1992–94ರ ಅವಧಿಯಲ್ಲಿ ಅಮೃತ ನಿಧಿ ಯೋಜನೆ ರೂಪಿಸಿ ಕನ್ನಡ ಸಾಹಿತ್ಯ ಪರಿಷತ್ತನ್ನು ಬೆಳೆಸಿದ ರೀತಿ ಅನನ್ಯವಾದುದು. ಅದೇ ರೀತಿ ಇಂದು ಸನ್ಮಾನಗೊಳ್ಳುತ್ತಿರುವ ನಾಲ್ವರು ದಿಗ್ಗಜರು ಶರಣ ಸಾಹಿತ್ಯ ಪರಂಪರೆಗೆ ದೊಡ್ಡ ಕೊಡುಗೆ ನೀಡಿದ ಅಸಾಮಾನ್ಯರಾಗಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಅಭಿನಂದಿತರ ಪರವಾಗಿ ಮಾತನಾಡಿದ ಡಾ.ಸಂಧ್ಯಾರೆಡ್ಡಿ, ಗೊ.ರು.ಚನ್ನಬಸಪ್ಪ ಜನಪದ ಕಲೆಗಳ ಬಗ್ಗೆ ಅಪಾರ ಅಭಿಮಾನ ಹೊಂದಿ ಅವರು ಹೊರತಂದ ಜನಪದ ಕಲೆಗಳು ಪುಸ್ತಕ ಮತ್ತು ಜಾನಪದ ವಿವಿಯನ್ನು ಸ್ಥಾಪನೆ ಮಾಡಿದ್ದು ಇಂದಿಗೂ ಮಾದರಿಯಾಗಿದೆ. ಅವರ ಸರಳ ನಡೆ–ನುಡಿ ಆದರ್ಶ ಸಮಾಜಕ್ಕೆ ಮಾದರಿ. ಜಾನಪದವನ್ನು ಇಂದಿನ ಯುವಪೀಳಿಗೆಗೆ ತಿಳಿಸಿಕೊಡುವ ಅಗತ್ಯವಿದೆ ಎಂದರು.

ಕರ್ನಾಟಕ ಸಂಘದ ಅಧ್ಯಕ್ಷ ಬಿ.ಜಯಪ್ರಕಾಶಗೌಡ ಮಾತನಾಡಿದರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಸಿ.ಸೋಮಶೇಖರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಮಾರಂಭದಲ್ಲಿ ಡಾ.ಬಸವರಾಜ ಕಲ್ಗುಡಿ (ಶರಣ ಪ್ರಶಸ್ತಿ), ಡಾ.ಸಂಧ್ಯಾರೆಡ್ಡಿ(ಜಾನಪದ ಪ್ರಶಸ್ತಿ), ಡಾ.ಸಿ.ನಾಗಭೂಷಣ (ಶರಣ ಸಾಹಿತ್ಯಗ್ರಂಥ ಪ್ರಶಸ್ತಿ), ಬಾಲಕೃಷ್ಣ ಜಂಬಗಿ (ಜನಪದ ಸಾಹಿತ್ಯ ಪ್ರಶಸ್ತಿ) ಅವರುಗಳಿಗೆ ಗೊ.ರು.ಚ ದತ್ತಿನಿಧಿ ಪ್ರಶಸ್ತಿ–2023 ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಮಂಡ್ಯ ಜಿಲ್ಲಾ ಬಸವ ಸಮಿತಿ ಹಾಗೂ ವೀರಶೈವ ವಿದ್ಯಾರ್ಥಿ ನಿಲಯ ಟ್ರಸ್ಟ್ ಅಧ್ಯಕ್ಷ ಎಂ.ಬಿ. ರಾಜಶೇಖರ್, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಗೌರವ ಸಲಹೆಗಾರ ನಾಡೋಜ ಡಾ.ಗೊ.ರು. ಚನ್ನಬಸಪ್ಪ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಎಸ್.ಶಿವಪ್ರಕಾಶ್, ಕೆ.ಎಸ್.ಷಡಕ್ಷರಿ ಮುಂತಾದವರು ಉಪಸ್ಥಿತರಿದ್ದರು.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಹುಟ್ಟುಹಬ್ಬಕ್ಕೆ ಸಿಎಂ ಸಿದ್ದರಾಮಯ್ಯ ಸೇರಿ ಗಣ್ಯರ ಶುಭ ಹಾರೈಕೆ



ಹೆಚ್.ಡಿ ದೇವೇಗೌಡರ ಹುಟ್ಟುಹಬ್ಬಕ್ಕೆ ಸಿಎಂ ಸಿದ್ದರಾಮಯ್ಯರ ಟ್ವೀಟ್

ಬೆಂಗಳೂರು, ಮೇ 18– ಮಾಜಿ ಪ್ರಧಾನಮಂತ್ರಿ ಹೆಚ್.ಡಿ ದೇವೇಗೌಡ ಅವರು ಹುಟ್ಟುಹಬ್ಬದ ಸಂಭ್ರಮದಲ್ಲಿದ್ದು, ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಭಾಶಯ ಕೋರಿದ್ದಾರೆ. ದೇವೇಗೌಡರು ಈಗಾಗಲೇ ಮಾಧ್ಯಮಗಳ ಮೂಲಕ ಕಾರಣಾಂತರಗಳಿಂದ ಜನ್ಮದಿನವನ್ನು ಆಚರಿಸಿಕೊಳ್ಳುತ್ತಿಲ್ಲ. ಯಾವುದೇ ಆಚರಣೆ ಮಾಡದೇ ಇರುವುದರಿಂದ ಎಲ್ಲರೂ ತಾವಿದ್ದಲ್ಲಿಯೇ ಹಾರೈಸಿ ಎಂದು ಮನವಿ ಮಾಡಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಟ್ವೀಟ್ ಮಾಡಿ, ಮಾಜಿ ಪ್ರಧಾನಿಗಳು, ಜನತಾದಳ (ಜಾತ್ಯತೀತ) ಪಕ್ಷದ ವರಿಷ್ಠರಾದ ಹೆಚ್.ಡಿ ದೇವೇಗೌಡರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು. ತಮಗೆ ಇನ್ನಷ್ಟು ಕಾಲ ಆಯಸ್ಸು – ಉತ್ತಮ ಆರೋಗ್ಯವನ್ನು ದೇವರು ನೀಡಲಿ, ತಮ್ಮ ಅನುಭವ, ಮಾರ್ಗದರ್ಶನ ಮುಂದೆಯೂ ನಾಡಿಗೆ ದೊರಕಲಿ ಎಂದು ಹಾರೈಸುತ್ತೇನೆಂದು ಹೇಳಿದ್ದಾರೆ.

ಹೆಚ್.ಡಿ.ಕುಮಾರಸ್ವಾಮಿ ಟ್ವೀಟ್ ಮಾಡಿ, ಭಾರತ ಗಣರಾಜ್ಯದ 11ನೇ ಪ್ರಧಾನಮಂತ್ರಿಗಳು, Janata Dal Secular ರಾಷ್ಟ್ರೀಯ ಅಧ್ಯಕ್ಷರು, ನನ್ನ ಪೂಜ್ಯ ತಂದೆಯವರಾದ ಹೆಚ್.ಡಿ.ದೇವೇಗೌಡ ಅವರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು. ಭಗವಂತ ಅವರಿಗೆ ಇನ್ನಷ್ಟು ಆಯುರಾರೋಗ್ಯ ನೀಡಲಿ ಹಾಗೂ ಅವರ ಮಾರ್ಗದರ್ಶನ, ಜನಸೇವೆ ದೀರ್ಘಕಾಲ ಮುಂದುವರಿಯಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಶುಭಾಶಯ ಕೋರಿದ್ದಾರೆ.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಟ್ವೀಟ್ ಮಾಡಿ, "ಹಿರಿಯ ಮುತ್ಸದ್ದಿ ನಾಯಕರು, ಮಾಜಿ ಪ್ರಧಾನಮಂತ್ರಿಗಳಾದ ಹೆಚ್.ಡಿ.ದೇವೇಗೌಡರವರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು. ದೇವರ ಆಶೀರ್ವಾದ ಸದಾ ತಮ್ಮ ಮೇಲಿರಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಶುಭ ಕೋರಿದ್ದಾರೆ.

ಕರ್ನಾಟಕ ಬಿಜೆಪಿ ಅಧ್ಯಕ್ಷ ಬಿ ವೈ. ವಿಜಯೇಂದ್ರ ಅವರು ಟ್ವೀಟ್ ಮಾಡಿ, ಗೌರವಾನ್ವಿತ ಮಾಜಿ ಪ್ರಧಾನಿಗಳಾದ ಎಚ್.ಡಿ. ದೇವೇಗೌಡ ಅವರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು. ಅವರ ಸುದೀರ್ಘ ರಾಜಕೀಯ ಅನುಭವ ಹಾಗೂ ಹೋರಾಟಗಳು ನಾಡಿನ ಹಾಗೂ ದೇಶದ ಇತಿಹಾಸದಲ್ಲಿ ಮಹತ್ವದ ಹೆಜ್ಜೆಗುರುತುಗಳು. ವಯಸ್ಸು ಲೆಕ್ಕಿಸದ ಅವರ ರಾಜಕೀಯ ಕ್ರಿಯಾಶೀಲತೆ ಭವಿಷ್ಯದ ರಾಜಕಾರಣಿಗಳಿಗೆ ಸ್ಫೂರ್ತಿಯ ಸೆಲೆಯಾಗಿದೆ, ಗ್ರಾಮೀಣ ಜನರ ಬಗೆಗಿನ ಅವರ ನೈಜ ಕಾಳಜಿಯ ಕೊಡುಗೆಗಳು ಮಣ್ಣಿನ ಮಕ್ಕಳ ಪಾಲಿಗೆ ಚೈತನ್ಯ ತುಂಬಿದ ಸಮೃದ್ಧತೆಯ ಸಂಕೇತಗಳು. ಭಗವಂತನು ಅವರಿಗೆ ಉತ್ತಮ ಆಯುರಾರೋಗ್ಯ ಕರುಣಿಸಿ, ನಾಡು ಹಾಗೂ ದೇಶದ ಬೆಳವಣಿಗೆಗೆ ಅವರು ಅತ್ಯಮೂಲ್ಯ ಮಾರ್ಗದರ್ಶನ ನೀಡುವಂತಾಗಲಿ ಎಂದು ಪ್ರಾರ್ಥಿಸುವೆ ಎಂದು ಕೋರಿದ್ದಾರೆ.

ಅದ್ಧೂರಿ ಮೈಸೂರು ಕರಗ ಉತ್ಸವ


ಸಾವಿರಾರು ಭಕ್ತರಿಂದ ಪೂಜೆ-ಪ್ರಾರ್ಥನೆ; ಮಾರ್ಗದುದ್ದಕ್ಕೂ ಭಕ್ತಿಭಾವ




ಮೈಸೂರಿನ ಇಟ್ಟಿಗೆಗೂಡು ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮನವರ 100ನೇ ವರ್ಷದ ಮೈಸೂರು ಕರಗ ಶತಮಾನೋತ್ಸವ ಅತ್ಯಂತ ವಿಜೃಂಭಣೆಯಿಂದ ನೆರವೇರಿತು.

ಮೈಸೂರು, ಮೇ 18(ಎಂಕೆ)– ಮೈಸೂರಿನ ಇಟ್ಟಿಗೆಗೂಡು ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮನವರ 100ನೇ ವರ್ಷದ ಮೈಸೂರು ಕರಗ ಶತಮಾನೋತ್ಸವ ಶ್ರದ್ಧಾಭಕ್ತಿಯೊಂದಿಗೆ ಅತ್ಯಂತ ವಿಜೃಂಭಣೆಯಿಂದ ನೆರವೇರಿತು.

ಕಳೆದ ನಾಲ್ಕು ದಿನಗಳಿಂದ ಹಬ್ಬದ ವಾತಾವರಣದೊಂದಿಗೆ ಸಿಂಗಾರಗೊಂಡಿರುವ ಇಟ್ಟಿಗೆಗೂಡಿನಲ್ಲಿ ಶನಿವಾರ ರಾತ್ರಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮನವರ ಮೈಸೂರು ಕರಗ ಶತಮಾನೋತ್ಸವ ಭಕ್ತಿಯ ಸುಧೆಯನ್ನೇ ಹರಿಸಿತು.



ಮೈಸೂರು ಕರಗ ಉತ್ಸವದಲ್ಲಿ ಮಾಜಿ ಶಾಸಕ ಸಂದೇಶ್ ನಾಗರಾಜು, ಶಾಸಕ ಟಿ.ಎಸ್.ಶ್ರೀವತ್ಸ, ಉದ್ಯಮಿ ಸಂದೇಶ್ ಅವರನ್ನು ಸನ್ಮಾನಿಸಲಾಯಿತು.

ಮೇ 15ರ ಬೆಳಗ್ಗೆ 6 ಗಂಟೆಯ ಪ್ರಾತಃಕಾಲದಲ್ಲಿ ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮ ದೇವಿಗೆ ಪ್ರಥಮ ಅಭಿಷೇಕ, ನಂತರ ಗ್ರಾಮದ ಚತುರ್ದಿಕ್ಕಿನಲ್ಲಿ ಕಂಕಣ ಕಟ್ಟುವ ಮೂಲಕ ಆರಂಭವಾದ ಕರಗ ಶತಮಾನೋತ್ಸವ ವೈಭವಯುತವಾಗಿ ನೆರವೇರಿತು. ಶನಿವಾರ ಬೆಳಗ್ಗೆ 12 ಅಂಬಲಿ ಪೂಜೆ, ನಂತರ ಅರಿಶಿನ ನೀರಿನ ಓಕುಳಿಯಾಟ, ಸಂಜೆ 4 ಗಂಟೆಯಿಂದ ದೇವಿಯರಿಗೆ ತಂಬಿಟ್ಟು ಆರತಿ ನಡೆಯಿತು.

ರಾತ್ರಿ 8 ಗಂಟೆ ಸುಮಾರಿಗೆ ಇಟ್ಟಿಗೆಗೂಡಿನಿಂದ ಆರಂಭವಾದ ದೇವಿಯರ ಕರಗ ಉತ್ಸವ, ಪ್ಯಾಲೆಸ್ ರಸ್ತೆ, 11 ಗಂಟೆಗೆ ನೂರಡಿ ರಸ್ತೆ, 12 ಗಂಟೆಗೆ ನಾರಾಯಣ ಶಾಸ್ತ್ರಿ ರಸ್ತೆ, ಬೆಳಗಿನ ಜಾವ 1 ಗಂಟೆಗೆ ನಲ್ಲಪ್ಪತಾಣಾರಸ್ತೆ ಶಿವರಾಂಪೇಟೆ, ಸಯ್ಯಾಜಿರಾವ್ ರಸ್ತೆ, 2 ಗಂಟೆಗೆ ಶ್ರೀ ಎಲ್ಲಾಂಭ ದೇವಸ್ಥಾನ, ಮಿಷನ್ ಆಸ್ಪತ್ರೆ, ಕಬೀರ್ ರಸ್ತೆ, ಕಾಳಮ್ಮ ಗುಡಿ ರಸ್ತೆ, ಇರ್ವಿನ್ ರಸ್ತೆ, ಕುರುಬಗೇರಿ, ಕುಂಬಾರಗೇರಿ, ಅಶೋಕ ರಸ್ತೆ ಹಾಗೂ ನಜರ್ ಬಾದ್ ಮಾರ್ಗವಾಗಿ ದೇವಸ್ಥಾನಕ್ಕೆ ವಾಪಸ್ ಆಗುವ ಮೂಲಕ ಸಂಪನ್ನಗೊಂಡಿತು.

ಕರಗ ಉತ್ಸವದೊಂದಿಗೆ ಬೆಂಗಳೂರು ಮಾಗಡಿ ರಸ್ತೆ ಅಂಗಾಳ ಪರಮೇಶ್ವರಿ ಮತ್ತು ಕಾಳಿಕಾದೇವಿ ಅಮ್ಮನವರ ದೇವಾಲಯದ ನವೀನ ಪಂಬೈ, ನಿಲಂಬು, ಉಡಿಕ್ಕೈ ಸಂಗೀತ, ನಾದಸ್ವರ, ವಾದ್ಯಗೋಷ್ಠಿ, ಬ್ಯಾಂಡ್‌ಸೆಟ್, ವೀರಗಾಸೆ, ದೇವರ ಕುಣಿತ, ಕಂಸಾಳೆ, ಕೊಂಬು ಕಹಳೆ, ಚನ್ನಪಟ್ಟಣ ತಮಟೆ, ಗಾರುಡಿ ಗೊಂಬೆ ಕುಣಿತ ಸೇರಿದಂತೆ ಹಲವಾರು ಸಾಂಸ್ಕೃತಿಕ ಕಲಾತಂಡಗಳು ಉತ್ಸವದಲ್ಲಿ ಪಾಲ್ಗೊಂಡು ಗಮನ ಸೆಳೆದವು.

ಹಾಗೆಂಯೇ ಉಪವಾಸ ವ್ರತ ಆಚರಿಸಿದ 79ಕ್ಕೂ ಹೆಚ್ಚು ಮದುವೆಯಾಗದ ಯುವಕರು, ಉತ್ಸವದುದ್ದಕ್ಕೂ ಕರಗವನ್ನು ಹೊತ್ತು ಸಾಗುವ ಮೂಲಕ ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮನವರ ಆಶೀರ್ವಾದ ಪಡೆದರು. ವಿವಾಹ ಭಾಗ್ಯಕ್ಕಾಗಿ ಯುವತಿಯರು, ಗೃಹಿಣಿಯರು ದೇವಿಗೆ ಮಾಂಗಲ್ಯ ತೊಡಿಸಿ ಮಡಿಲಕ್ಕಿ ತುಂಬಿಸಿ ಮುತ್ತೈದೆ ಭಾಗ್ಯಕ್ಕಾಗಿ ಪಾರ್ಥಿಸಿದರು. ಸಂತಾನ ಪ್ರಾಪ್ತಿಗಾಗಿ ದೇವಿಗೆ ಸೀರೆ ಕುಪ್ಪಸವಿಟ್ಟು ಪೂಜಿಸಿದರು.

ಸಾವಿರಾರು ಭಕ್ತರು ಭಾಗಿ: ಮೈಸೂರು ಕರಗ ಉತ್ಸವಕ್ಕೆ ಜನಸಮೂಹವೇ ಹರಿದು ಬಂದಿತ್ತು. ಹರಕೆ ಹೊತ್ತ ಮನೆಮಂದಿಯೆಲ್ಲಾ ದೇವಿಯರಿಗೆ ಹರಕೆ ಸಲ್ಲಿಸಿ ಇಷ್ಟಾರ್ಥಸಿದ್ಧಿಗಾಗಿ ಪ್ರಾರ್ಥಿಸಿದರು. ಹಾಗೆಯೇ ಕರಗದ ಜೊತೆಯಲ್ಲಿ ಉತ್ಸವವನ್ನು ತಂದು ಹರಕೆ ತೀರಿಸಿದರು. ಹಾಗೆಂಯೇ ಉತ್ಸವ ಸಾಗಿದ ಕಡೆಯೆಲ್ಲಾ ಭಕ್ತಾದಿಗಳು ಪೂಜೆ ಸಲ್ಲಿಸಿ ದೇವಿಯರ ಕೃಪೆಗೆ ಪಾತ್ರರಾದರು.

ಸನ್ಮಾನ: ಶ್ರೀ ರೇಣುಕಾದೇವಿ ಕರಗ ದೇವಸ್ಥಾನದ ಟ್ರಸ್ಟ್ ಅಧ್ಯಕ್ಷರೂ ಆದ ಮಾಜಿ ಶಾಸಕ ಸಂದೇಶ್ ನಾಗರಾಜು, ಶಾಸಕರಾದ ಕೆ.ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ, ಉದ್ಯಮಿ ಸಂದೇಶ್ ಸೇರಿದಂತೆ ಇನ್ನಿತರೆ ಗಣ್ಯರನ್ನು ಸನ್ಮಾನಿಸಲಾಯಿತು. ಶ್ರೀ ರೇಣುಕಾದೇವಿ ಕರಗ ದೇವಸ್ಥಾನದ ಟ್ರಸ್ಟ್‌ನ ಪದಾಧಿಕಾರಿಗಳಾದ ಪಿ.ನೀಲಕಂಠ, ಸಿ.ಶಿವಪ್ರಕಾಶ್, ವಿ.ಸುಂದರಮೂರ್ತಿ, ಜಿ.ಹರೀಶ್ ಕುಮಾರ್, ಎಲ್.ಶಾಂಭುಮೂರ್ತಿ, ಹೇಮು, ಚಿಕ್ಕಲಿಂಗಯ್ಯ, ಶ್ರೀಕಂಠಸ್ವಾಮಿ, ಎಂ. ಮಂಜು, ಸುಬ್ರಹ್ಮಣ್ಯ ದೀಕ್ಷಿತ್, ಶ್ರೀಹರಿ ದೀಕ್ಷಿತ್, ನಾರಾಯಣ, ಬಾಬು, ಕೆ.ನಾಗರಾಜು, ಮೋಹನ್‌ರಾವ್, ತಿರುಮಲ್ ಬಾಬು ಮತ್ತಿತರರು ಭಾಗವಹಿಸಿದ್ದರು.

ಮೈಸೂರಲ್ಲಿ ಮುಂದುವರೆದ ಮಳೆ



ಮೈಸೂರು, ಮೇ 18(ಎಸ್‌ಬಿಡಿ)– ಮೈಸೂರಿನಲ್ಲಿ ಶನಿವಾರವೂ ಜೋರು ಮಳೆ ಸುರಿಯಿತು. ಬೆಳಗ್ಗೆಯಿಂದಲೇ ಮೋಡ ಕವಿದ ವಾತಾವರಣವಿತ್ತು. ಕಾವೇರಿದ ವಾತಾವರಣವೂ ಇತ್ತು. ಸಂಜೆ ವೇಳೆಗೆ ನಗರದ ಹೃದಯಭಾಗ ಸೇರಿದಂತೆ ಬಹುತೇಕ ಭಾಗದಲ್ಲಿ ಜೋರು ಮಳೆಯಾಯಿತು. ಕೆಲವು ಕಡೆ ಮಾತ್ರ ಸಾಧಾರಣ ಮಳೆಯಾಗಿರುವ ಬಗ್ಗೆ ಮಾಹಿತಿ ಲಭ್ಯವಾಗಿದೆ. ಮಳೆ ಜೋರಾಗಿದ್ದ ಕಡೆ ತಗ್ಗು ಪ್ರದೇಶದಲ್ಲಿ ನೀರು ತುಂಬಿ, ವಾಹನ ಸಂಚಾರಕ್ಕೆ ಅಡ್ಡಿಯಾಗಿತ್ತು. ಬೀದಿಬದಿ ವ್ಯಾಪಾರಿಗಳಿಗೂ ತೊಂದರೆಯಾಯಿತು. ದ್ವಿಚಕ್ರ ವಾಹನ ಸವಾರರು, ಪಾದಚಾರಿಗಳು ಮಳೆಯಲ್ಲೇ ತೊಯ್ದು ಸಾಗುತ್ತಿದ್ದರು. ನಿರಂತರವಾಗಿ ಮಳೆಯಾಗುತ್ತಿರುವುದರಿಂದ ಕೆಲವರು ಮುಂಜಾಗ್ರತೆಯಿಂದ ಛತ್ರಿ ಹಾಗೂ ಜರ್ಕಿನ್‌ಗಳನ್ನು ಧರಿಸಿ ಮಳೆಯಿಂದ ರಕ್ಷಣೆ ಪಡೆದಿದ್ದರು.

ಮೈಸೂರು ನಗರ, ಹೊರವಲಯ ಸೇರಿದಂತೆ ಜಿಲ್ಲೆಯಾದ್ಯಂತ ಉತ್ತಮ ಮಳೆಯಾಗುತ್ತಿದೆ. ಶುಕ್ರವಾರ ನಂಜನಗೂಡು ತಾಲೂಕಿನಲ್ಲಿ 72 ಮಿ.ಮೀ., ಹುಣಸೂರಿನಲ್ಲಿ 58.75 ಮಿ.ಮೀ., ಸರಗೂರಿನಲ್ಲಿ 44 ಮಿ.ಮೀ., ಪಿರಿಯಾಪಟ್ಟಣದಲ್ಲಿ 28.65 ಮಿ.ಮೀ., ಕೆಆರ್.ನಗರದಲ್ಲಿ 25.09 ಮಿ.ಮೀ., ಹೆಚ್.ಡಿ.ಕೋಟೆಯಲ್ಲಿ 16.2 ಮಿ.ಮೀ., ಮೈಸೂರು ತಾಲೂಕಿನಲ್ಲಿ 12.4 ಮಿ.ಮೀ. ಹಾಗೂ ತಿ.ನರಸೀಪುರದಲ್ಲಿ 9.5 ಮಿ.ಮೀ. ಮಳೆಯಾಗಿದ್ದು, ಮೈಸೂರು ತಾಲೂಕಿನ ಮಳೆ ಪ್ರಮಾಣ ಲಭ್ಯವಾಗಿಲ್ಲ.

ಚಾಮರಾಜನಗರ, ಮಂಡ್ಯ, ಕೊಡಗು, ಹಾಸನ, ಬೆಂಗಳೂರು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಮೂರ್‍ನಾಲ್ಕು ದಿನಗಳಿಂದ ಮಳೆಯಾಗುತ್ತಿದ್ದು, ಮುಂದಿನ ಐದು ದಿನಗಳ ಕಾಲ ಗಾಳಿ ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ. ಒಂದೆಡೆ ಬಿರುಗಾಳಿಯಿಂದ ಬೆಳೆ ನಷ್ಟವಾಗಿದ್ದು, ಮತ್ತೊಂದೆಡೆ ಮುಂದಿನ ಕೃಷಿ ಚಟುವಟಿಕೆಗೆ ಅನುಕೂಲವಾಗುವುದರಿಂದ ರೈತರಲ್ಲಿ ಸಂತಸ ಮೂಡಿದೆ. ಕಾವೇರಿ ಜಲಾನಯನ ಪ್ರದೇಶದಲ್ಲಿ ಉತ್ತಮ ಮಳೆಯಾಗುತ್ತಿರುವುದರಿಂದ ಈ ಭಾಗದ ಜಲಾಶಯಗಳಿಗೆ ಹೆಚ್ಚು ಪ್ರಮಾಣದ ನೀರು ಹರಿದು ಬರುತ್ತಿದೆ. ಕೆರೆ–ಕಟ್ಟೆಗಳಿಗೂ ನೀರು ತುಂಬುತ್ತಿದೆ.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಶನಿವಾರ	80.40 ಅಡಿ
ಒಳಹರಿವು	1153 ಕ್ಯೂಸೆಕ್
ಹೊರಹರಿವು	267 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಶನಿವಾರ	2829.94 ಅಡಿ
ಒಳ ಹರಿವು	308 ಕ್ಯೂಸೆಕ್
ಹೊರ ಹರಿವು	200 ಕ್ಯೂಸೆಕ್

ಮೈಸೂರು ಮಿತ್ರ ಭಾನುವಾರ 19 ಮೇ 2024

ಕನ್ನಡಿಗ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಎ.ಎಸ್.ಬೋಪಣ್ಣ ನಿವೃತ್ತಿ

ನವದೆಹಲಿ, ಮೇ 18– ಕರ್ನಾಟಕದ ಅದರಲ್ಲೂ ವೀರಭೂಮಿ ಕೊಡಗಿನವರಾದ, ಸುಪ್ರೀಂಕೋರ್ಟ್ ನ್ಯಾಯಾಧೀಶ ನ್ಯಾಯಮೂರ್ತಿ ಎ.ಎಸ್. ಬೋಪಣ್ಣ ಅವರು ಶುಕ್ರವಾರ ನಿವೃತ್ತರಾದರು.

ಇವರನ್ನು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ಆತ್ಮೀಯವಾಗಿ ಬೀಳ್ಕೊಟ್ಟರು. 1956 ರಲ್ಲಿ ಜನಿಸಿದ ಬೋಪಣ್ಣ ಅವರು 1984 ರಲ್ಲಿ ವಕೀಲರಾಗಿ ನ್ಯಾಯಾಂಗ ಸೇವೆಯನ್ನು ಆರಂಭಿಸಿದ್ದರು. 2006 ರಲ್ಲಿ ಕರ್ನಾಟಕ ಹೈಕೋರ್ಟ್‌ಗೆ ಹೆಚ್ಚುವರಿ ನ್ಯಾಯಾಧೀಶರಾಗಿ ನೇಮಕಗೊಂಡಿದ್ದ ಇವರು, ಬಳಿಕ 2007 ರಲ್ಲಿ ಖಾಯಂ ನ್ಯಾಯಾಧೀಶರಾಗಿ ಸೇವೆ ಆರಂಭಿಸಿದರು. 2018ರಲ್ಲಿ ಗೌಹಾತಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಾಗಿದ್ದರು. ಬಳಿಕ 2019 ರಲ್ಲಿ ಸುಪ್ರೀಂಕೋರ್ಟ್ ನ್ಯಾಯಾಧೀಶರಾಗಿ ಪದೋನ್ನತಿ ಹೊಂದಿದ್ದರು. 2016ರಲ್ಲಿ ನೋಟು ಅಮಾನ್ಯೀಕರಣ ನಿರ್ಧಾರದ ವಿರುದ್ಧ ಸಲ್ಲಿಕೆಯಾಗಿದ್ದ ಅರ್ಜಿಗಳ ವಿಚಾರಣಾ ತೀರ್ಪು ನೀಡುವಲ್ಲಿ ಇವರೂ ಸಹ ಒಬ್ಬರಾಗಿದ್ದರು.

ನ್ಯಾಯಮೂರ್ತಿ ಬೋಪಣ್ಣ ಅವರನ್ನು ಮುಕ್ತ ಕಂಠದಿಂದ ಪ್ರಶಂಸಿಸಿದ ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್ ಅವರ ಸಮಯ ಪ್ರಜ್ಞೆ, ಸೇವಾಪರತೆ ಹಾಗೂ ಬದ್ಧತೆಯನ್ನು ಹಾಡಿ ಹೊಗಳಿದ್ದಾರೆ.



ನ್ಯಾಯಮೂರ್ತಿ ಎ.ಎಸ್.ಬೋಪಣ್ಣ

ಹುಟ್ಟುಹಬ್ಬಕ್ಕೆ ಗೆಲುವಿನ ಉಡುಗೊರೆ ನೀಡಿ...



ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಶನಿವಾರ ಬೆಂಗಳೂರಿನ ಅವರ ನಿವಾಸಕ್ಕೆ ಭೇಟಿ ನೀಡಿದ ದಕ್ಷಿಣ ಶಿಕ್ಷಕರ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ವಿವೇಕಾನಂದ, ಈ ಕ್ಷೇತ್ರದ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದ ಕೆ.ಟಿ. ಶ್ರೀಕಂಠೇಗೌಡ, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಮಾಜಿ ಶಾಸಕ ಡಾ.ಅನ್ನದಾನಿ ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು. ಈ ವೇಳೆ ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿ ಗೆಲುವಿನ ಉಡುಗೊರೆಯನ್ನು ನೀಡುವಂತೆ ಗೌಡರು ಕೋರಿದ್ದಾರೆ.



ಮಾಜಿ ಪ್ರಧಾನಮಂತ್ರಿ ಶ್ರೀ ಹೆಚ್.ಡಿ.ದೇವೇಗೌಡರ ಹುಟ್ಟುಹಬ್ಬವನ್ನು ಕುಂಬಾರ ಕೊಪ್ಪಲಲ್ಲಿ ವಾರ್ಡ್ 5ರ ಅಧ್ಯಕ್ಷರಾದ ವಿ.ಶರತ್ (ಶಿವಪ್ರಸಾದ್) ಅವರ ನೇತೃತ್ವದಲ್ಲಿ ಮಕ್ಕಳಿಗೆ ನೋಟ್ ಬುಕ್, ಕೇಕ್ ವಿತರಿಸುವ ಮೂಲಕ ಆಚರಿಸಲಾಯಿತು. ಈ ವೇಳೆ ಜೆಡಿಎಸ್ ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ, ನಗರಪಾಲಿಕೆ ಮಾಜಿ ಸದಸ್ಯರಾದ ಎಸ್‌ಬಿಎಂ ಮಂಜು, ಪ್ರೇಮಾ ಶಂಕರೇಗೌಡ, ನಾಗರಾಜು, ಸೋಮಣ್ಣ, ಕುಮಾರಣ್ಣ, ವೆಂಕಟೇಶಣ್ಣ, ರಾಜಣ್ಣ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಅಂಬೇಡ್ಕರ್, ಬಸವ ಜಯಂತಿ ಅಂಗವಾಗಿ ಇಂದು ಪ್ರತಿಭಾ ಪುರಸ್ಕಾರ

ಮೈಸೂರು, ಮೇ 18(ಜಿಎ)–ಡಾ. ಬಿ.ಆರ್.ಅಂಬೇಡ್ಕರ್ ಮತ್ತು ಬಸವ ಜಯಂತಿ ಅಂಗವಾಗಿ ವಿದ್ಯಾರಣ್ಯಪುರಂನ ಜನಚೈತನ್ಯ ಫೌಂಡೇಶನ್ ವತಿಯಿಂದ ನಗರದ ಪುರಭವನದಲ್ಲಿ ಮೇ 19ರಂದು ಸಂಜೆ 4 ಗಂಟೆಗೆ ಪ್ರತಿಭಾ ಪುರಸ್ಕಾರ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಫೌಂಡೇಶನ್ ಅಧ್ಯಕ್ಷ ಆರ್.ಲಕ್ಷ್ಮಣ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮುಡಾ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್ ಅಧ್ಯಕ್ಷತೆ ವಹಿಸುವರು. ಅಂಬೇಡ್ಕರ್, ಬಸವ ಮತ್ತು ಬುದ್ಧರನ್ನು ಕುರಿತು ಗೀತೆಗಳು ಪ್ರಸ್ತುತಪಡಿಸಲಾಗುವುದು. ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯು ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನೂ ಹಮ್ಮಿಕೊಳ್ಳಲಾಗಿದೆ.

ದೇಸಿ ಅಕ್ಕಿ ಮೇಳಕ್ಕೆ ಮೊದಲ ದಿನವೇ ಉತ್ತಮ ಪ್ರತಿಕ್ರಿಯೆ

- ನಂಜರಾಜ ಬಹದ್ದೂರು ಛತ್ರದಲ್ಲಿ ಎರಡು ದಿನಗಳ ಅಕ್ಕಿ ಮೇಳ
- 50 ಬಗೆಯ ಅಕ್ಕಿ ಲಭ್ಯ



ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಸಹಜ ಸಮೃದ್ಧ ಸಂಸ್ಥೆ ಆಯೋಜಿಸಿದ್ದ ಎರಡು ದಿನಗಳ 'ದೇಸಿ ಅಕ್ಕಿ ಮೇಳ'ಕ್ಕೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಚಾಲನೆ ನೀಡಿದರು. ಚಿತ್ರದಲ್ಲಿ ಬೀಜ ಸಂರಕ್ಷಕ ಬೋರೇಗೌಡ, ದೇಸಿ ಭತ್ತ ಸಂರಕ್ಷಕ ಶ್ರೀನಿವಾಸ್ ಮೂರ್ತಿ, ಸಹಜ ಸಮೃದ್ಧ ಸಂಸ್ಥೆಯ ನಿರ್ದೇಶಕರಾದ ಜಿ.ಕೃಷ್ಣಪ್ರಸಾದ್, ಸೀಮಾ ಪ್ರಸಾದ್, ಸಿಎಫ್‌ಟಿಆರ್‌ಐ ನಿರ್ದೇಶಕರಾದ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ ಹಾಗೂ ಇನ್ನಿತರರನ್ನು ಕಾಣಬಹುದು.

ಮೈಸೂರು,ಮೇ 18(ಎಂಟಿವೈ)– ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಸಹಜ ಸಮೃದ್ಧ ಸಾವಯವ ಕೃಷಿಕರ ಬಳಗ ಆಯೋಜಿಸಿರುವ ಎರಡು ದಿನಗಳ 'ದೇಸಿ ಅಕ್ಕಿ ಮೇಳ'ಕ್ಕೆ ಮೊದಲ ದಿನವೇ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಒಂದೇ ಸ್ಥಳದಲ್ಲಿ ಲಭ್ಯವಿರುವ 50 ಬಗೆಯ ಅಕ್ಕಿಯನ್ನು ಗ್ರಾಹಕರು ಖರೀದಿಸಲು ಮುಗಿ ಬಿದ್ದಿದ್ದಾರೆ.

ಸಾವಯವ ಕೃಷಿ ಪದ್ಧತಿಯಲ್ಲಿ ಬೆಳೆದಿರುವ ಅಕ್ಕಿ ಹಾಗೂ ಸಿರಿಧಾನ್ಯಗಳನ್ನು ಮೈಸೂರಿಗರಿಗೆ ಪೂರೈಸುವ ನಿಟ್ಟಿನಲ್ಲಿ ಸಹಜ ಸಮೃದ್ಧ ಸಂಸ್ಥೆ ಆಯೋಜಿಸಿದ್ದ 'ದೇಸಿ ಅಕ್ಕಿ ಮೇಳ'ಕ್ಕೆ ಚಾಲನೆ ನೀಡಿ ಮಾತನಾಡಿದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಸಾವಯವ ಕೃಷಿ ಪದ್ಧತಿಯಲ್ಲಿ ಬೆಳೆದಿರುವ ವಿವಿಧ ಬಗೆಯ ಅಕ್ಕಿ ಹಾಗೂ ಸಿರಿಧಾನ್ಯಗಳನ್ನು ಒಂದೇ ವೇದಿಕೆಯಲ್ಲಿ ದೊರಕಿಸಿಕೊಡುವ ನಿಟ್ಟಿನಲ್ಲಿ ಆಯೋಜಿಸಿರುವ ದೇಸಿ ಅಕ್ಕಿ ಮೇಳ ಉಪಯುಕ್ತವಾದ ಮೇಳವಾಗಿದೆ. ಈ ಮೇಳಕ್ಕೆ ಆಗಮಿಸುವವರಿಗೆ ವಿವಿಧ ಬಗೆಯ ಅಕ್ಕಿ ಪರಿಚಯವಾಗುತ್ತದೆ. ಅಲ್ಲದೆ, ಸಾವಯವ ಪದ್ಧತಿಯಲ್ಲಿ ಬೆಳೆದಿರುವ ದಿನಸಿ, ಅಕ್ಕಿ, ಸಿರಿಧಾನ್ಯಗಳನ್ನು ಆಹಾರಕ್ಕಾಗಿ ಬಳಸುವುದರಿಂದ ಆರೋಗ್ಯ ಕಾಪಾಡಿಕೊಳ್ಳಲು ಸಹಕಾರಿಯಾಗಿದೆ ಎಂದು ಅಭಿಪ್ರಾಯಪಟ್ಟರು.

ಇದೇ ವೇಳೆ ಸಹಜ ಸಮೃದ್ಧ ಸಂಸ್ಥೆಯ ನಿರ್ದೇಶಕ ಜಿ.ಕೃಷ್ಣಪ್ರಸಾದ್ ಮಾತನಾಡಿ, ಹೆಚ್ಚು ಪಾಲಿಶ್ ಮಾಡಿದ ಅಕ್ಕಿ ಬಳಸುವುದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಸಕ್ಕರೆ ಖಾಯಿಲೆ, ಮಲಬದ್ಧತೆ, ಬೊಜ್ಜು, ಕ್ಯಾನ್ಸರ್ ಸೇರಿದಂತೆ ಇನ್ನಿತರ ಆರೋಗ್ಯ ಸಮಸ್ಯೆ ಕಾಡುತ್ತದೆ. ಪಾಲಿಶ್ ಮಾಡಿರುವ ಬಿಳಿ ಬಣ್ಣದ ಅಕ್ಕಿಯಲ್ಲಿ ಪಿಷ್ಟ ಮಾತ್ರ ಇರುತ್ತದೆ. ಪಾಲಿಶ್ ಮಾಡಿದಾಗ ಬರುವ ತೌಡಿನಲ್ಲಿ ಪೋಷಕಾಂಶ ಇರುತ್ತದೆ. ಆದರೆ, ಜನ ಪೋಷಕಾಂಶವಿಲ್ಲದ ಅಕ್ಕಿಯನ್ನು ಬಳಸುತ್ತಿದ್ದಾರೆ. ಸಾವಯವ ಕೃಷಿ ಪದ್ಧತಿಯಲ್ಲಿ ಬೆಳೆದ ಭತ್ತದಿಂದ ತಯಾರಿಸಿರುವ ಹಾಗೂ ಹೆಚ್ಚು ಪಾಲಿಶ್ ಮಾಡದೇ ಇರುವ ಅಕ್ಕಿಯನ್ನು ಬಳಸಿ, ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಸಿಎಫ್‌ಟಿಆರ್‌ಐ ಸಂಸ್ಥೆಯ ನಿರ್ದೇಶಕರಾದ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್, ದೇಸಿ ಭತ್ತ ಸಂರಕ್ಷಕ ಶ್ರೀನಿವಾಸ್ ಮೂರ್ತಿ, ರಾಷ್ಟ್ರ ಪ್ರಶಸ್ತಿ ವಿಜೇತ ಬೀಜ ಸಂರಕ್ಷಕ ಬೋರೇಗೌಡ, ಸಹಜ ಸಮೃದ್ಧ ಸಂಸ್ಥೆಯ ಸೀಮಾ ಪ್ರಸಾದ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

20 ಮಳಿಗೆಗಳು

ದೇಸಿ ಅಕ್ಕಿ ಮೇಳದಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ, ಬೆಳಗಾವಿ, ಧಾರವಾಡ, ಶಿವಮೊಗ್ಗ, ತುಮಕೂರು, ದಾವಣಗೆರೆ ಸೇರಿದಂತೆ ವಿವಿಧ ಜಿಲ್ಲೆಗಳಿಂದ ಸಾವಯವ ಕೃಷಿಕರು ಅಕ್ಕಿ, ಸಿರಿಧಾನ್ಯ ಸೇರಿದಂತೆ ವಿವಿಧ ಪದಾರ್ಥಗಳನ್ನು ತಂದು ಮಾರಾಟಕ್ಕಿಟ್ಟಿದ್ದಾರೆ. ಮೇಳದಲ್ಲಿ 20 ಮಳಿಗೆಗಳಿದ್ದು, ಸೋನ ಮಸೂರಿ, ರಾಜಮುಡಿ, ಸಣ್ಣ ಅಕ್ಕಿ, ಕೆಂಪು ಅಕ್ಕಿ ಸೇರಿದಂತೆ ವಿವಿಧ ಬಗೆಯ ಅಕ್ಕಿಯನ್ನು ಮಾರಾಟ ಮಾಡುತ್ತಿದ್ದಾರೆ. ಕೆಜಿಗೆ 60ರಿಂದ 80 ರೂ.ಗೆ ವಿವಿಧ ಬಗೆಯ ಅಕ್ಕಿ ಮಾರಾಟ ಮಾಡಲಾಗುತ್ತಿದೆ.

ದೇಸಿ ಅಕ್ಕಿ ಮೇಳದಲ್ಲಿ ಸಿರಿಧಾನ್ಯಗಳಾದ ನವಣೆ, ಸಾಮೆ, ಹಣ್ಣು–ತರಕಾರಿ, ಗೆಣಸು, ಸುವರ್ಣಗೆಡ್ಡೆ, ಸಿರಿಧಾನ್ಯಗಳಲ್ಲಿ ತಯಾರಿಸಿರುವ ಚಕ್ಕುಲಿ, ನಿಪ್ಪಟ್ಟು, ಕೋಡುಬಳೆ, ಚಿಪ್ಸ್, ರಾಗಿ ಮಾಲ್ಟ್ ಪುಡಿ, ಐಸ್‌ಕ್ರೀಮ್, ಮಾವಿನಹಣ್ಣು, ವಿವಿಧ ಬಗೆಯ ಸೊಪ್ಪು, ಹಣ್ಣು–ತರಕಾರಿಯ ಬಿತ್ತನೆ ಬೀಜ ಸೇರಿದಂತೆ ಇನ್ನಿತರ ವಸ್ತುಗಳನ್ನು ಮಾರಾಟ ಮಾಡಲಾಗುತ್ತಿದೆ. ಹೊರಭಾಗದಲ್ಲಿ ವಿವಿಧ ತಳಿಯ ಹಲಸಿನ ಗಿಡ, ಮಾವಿನಗಿಡ, ಸೀಬೆ ಗಿಡ, ದಾಳಿಂಬೆ, ನಿಂಬೆಗಿಡ, ಚಕೋತ ಗಿಡ ಸೇರಿದಂತೆ ಇನ್ನಿತರ ಗಿಡಗಳನ್ನು ಮಾರಾಟಕ್ಕಿಡಲಾಗಿದೆ. ನಾಳೆ(ಮೇ 19) ಬೆಳಗ್ಗೆ 10ರಿಂದ ರಾತ್ರಿ 8 ಗಂಟೆವರೆಗೆ 'ದೇಸಿ ಅಕ್ಕಿ ಮೇಳ' ವೀಕ್ಷಣೆ ಹಾಗೂ ಖರೀದಿಗೆ ಲಭ್ಯವಿರುತ್ತದೆ.

ಹಿಂದೂ ಪರಂಪರೆ ಪುನರುತ್ಥಾನಗೊಳಿಸಿದ ಕೀರ್ತಿ ಶಂಕರಾಚಾರ್ಯರಿಗೆ ಸಲ್ಲುತ್ತದೆ

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಅಭಿಮತ

ಮೈಸೂರು, ಮೇ 18(ಎಸ್‌ಪಿಎನ್)– 8ನೇ ಶತಮಾನದಲ್ಲಿ ಅವಸಾನದ ಅಂಚಿನಲ್ಲಿದ್ದ ಹಿಂದೂ ಪರಂಪರೆಯನ್ನು ಪುನರುತ್ಥಾನಗೊಳಿಸಿದ ಕೀರ್ತಿ ಶಂಕರಾಚಾರ್ಯರಿಗೆ ಸಲ್ಲುತ್ತದೆ ಎಂದು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಅಭಿಪ್ರಾಯಪಟ್ಟರು.

ಮೈಸೂರು ವಿಜಯನಗರ ಒಂದನೇ ಹಂತದ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಜೆ.ಪಿ.ನಗರದ ಉತ್ತಿಷ್ಠ ಭಾರತ ಪ್ರತಿಷ್ಠಾನ ಹಾಗೂ ಜಿಲ್ಲಾ ಕಸಾಪ ಸಹಯೋಗದೊಂದಿಗೆ ಆದಿ ಶಂಕರಾಚಾರ್ಯರ ಜಯಂತಿ ಅಂಗವಾಗಿ 'ಶ್ರೀ ಶಂಕರ ಸಮಗ್ರ ಕೃತಿಗಳ ವಿವೇಚನೆ' ಕುರಿತಾದ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಅತೀ ಚಿಕ್ಕವಯಸ್ಸಿನಲ್ಲೇ ಕೇರಳದಿಂದ ಕಾಶ್ಮೀರದವರೆಗೆ ಕಾಲ್ನಡಿಗೆ ಮೂಲಕ ದೇಶ ಪರ್ಯಟನೆ ಮಾಡಿ, ಹಿಂದೂ ಧರ್ಮದ ಮಹತ್ವನ್ನು ಜನಸಾಮಾನ್ಯರಿಗೆ ತಿಳಿಸಿಕೊಟ್ಟರು. ಅರ್ಥವಾಗದ ಭಾಷೆಯಲ್ಲಿದ್ದ ವೇದ, ಉಪನಿಷತ್ ಶ್ಲೋಕ, ವೇದ ಮಂತ್ರಗಳನ್ನು ಅದ್ವೈತ ಸಿದ್ಧಾಂತದ ಮೂಲಕ ಅದರ ಮಹತ್ವವನ್ನು ಜನಸಾಮಾನ್ಯರಿಗೂ ತಲುಪಿಸಿದ್ದಾರೆ ಎಂದರು.

ಶಂಕರಾಚಾರ್ಯರು ತಮ್ಮ ಎಂಟನೇ ವಯಸ್ಸಿನಲ್ಲಿ ನರ್ಮದಾ ನದಿ ತೀರದ ಗೋವಿಂದ ಭಗವತ್ಪಾದರನ್ನು ಭೇಟಿಯಾಗಿ ಅವರನ್ನು ತನ್ನ ಗುರುಗಳನ್ನಾಗಿ ಸ್ವೀಕರಿಸಿದರು. ಅವರಿಂದ ಯೋಗ, ವೇದ, ಉಪನಿಷತ್, ವೇದಾಂತಗಳ ಅಭ್ಯಾಸ ಮಾಡಿದ್ದರು. ಅಲ್ಲದೆ, ಕೇವಲ 32 ವರ್ಷಗಳ ಕಾಲ ಜೀವಿಸಿದ್ದ ಶಂಕರರು, ಈ ಅಲ್ಪಾವಧಿಯಲ್ಲಿಯೇ ದೇಶದ ಮೂಲೆ ಮೂಲೆಗೆ ಸಂಚರಿಸಿ, ಅದ್ವೈತ ತತ್ವವನ್ನು ಪ್ರತಿಪಾದಿಸಿದರು. ಅಂತೆಯೇ ವಿದೇಶಿ ಆಕ್ರಮಣಕಾರರಿಂದ ದಾಳಿಗೊಳಗಾಗಿದ್ದ ಹಿಂದೂ ಧರ್ಮವನ್ನು ಪುನರುತ್ಥಾನಗೊಳಿಸಿದ ಘಟನಾವಳಿಯನ್ನು ವಿವರಿಸಿದರು. ಈ ವೇಳೆ ಶಂಕರಾಚಾರ್ಯರು ಸ್ಥಾಪಿಸಿದ ನಾಲ್ಕು ಪೀಠಗಳಾದ ಉತ್ತರ ಜ್ಯೋತಿರ್ ಮಠ(ಬದರಿ ಪೀಠ), ದಕ್ಷಿಣ ಶಾರದಾ ಮಠ(ಶೃಂಗೇರಿ ಮಠ), ಪೂರ್ವ ಗೋವರ್ಧನ ಮಠ(ಪುರಿ ಮಠ), ಪಶ್ಚಿಮ ಕಾಳಿಕಾ ಮಠ (ದ್ವಾರಕ ಪೀಠ) ವನ್ನು ಸ್ಥಾಪಿಸಿ, ಹಿಂದೂ ಧರ್ಮದ ರಕ್ಷಣೆ, ಪ್ರಚಾರ ಕಾರ್ಯಕ್ಕೆ ಮುನ್ನುಡಿ ಬರೆದರು. ಈ ವೇಳೆ ಸಂಸ್ಕೃತ ವಿದುಷಿ ಡಾ.ಕೆ.ಲೀಲಾ ಪ್ರಕಾಶ್ ಶ್ರೀ ಶಂಕರರ ಸಮಗ್ರ ಕೃತಿಗಳ ವಿವೇಚನೆ ಕುರಿತು ಮಾತನಾಡಿದರು. ಈ ವೇಳೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉತ್ತಿಷ್ಠ ಭಾರತ ಪ್ರತಿಷ್ಠಾನದ ಕಾರ್ಯದರ್ಶಿ ಎಂ.ವಿ.ನಾಗೇಂದ್ರ ಬಾಬು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಉಪಾಧ್ಯಕ್ಷ ಅನಂತ್ ಉಪಸ್ಥಿತರಿದ್ದರು.



ಆದಿ ಶಂಕರಾಚಾರ್ಯರ ಜಯಂತಿ ಅಂಗವಾಗಿ ಶಂಕರಾಚಾರ್ಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು.

92ನೇ ಹುಟ್ಟುಹಬ್ಬ; ಮಾಜಿ ಪ್ರಧಾನಿ ದೇವೇಗೌಡರ ಬೃಹತ್ ಕಟೌಟ್‌ಗೆ ಪುಷ್ಪವೃಷ್ಟಿ: ಸಿಹಿ ಹಂಚಿ ಸಂಭ್ರಮ

ಮೈಸೂರು, ಮೇ 18(ಎಂಕೆ)–ಮಾಜಿ ಪ್ರಧಾನಿಗಳಾದ ಹೆಚ್.ಡಿ.ದೇವೇಗೌಡರ ಬೃಹತ್ ಕಟೌಟ್‌ಗೆ ಪುಷ್ಪವೃಷ್ಟಿ, ಕ್ಷೀರಾಭಿಷೇಕ ಹಾಗೂ ಕೇಕ್ ಕತ್ತರಿಸಿ ಸಿಹಿ ಹಂಚುವ ಮೂಲಕ ದೊಡ್ಡಗೌಡರ 92ನೇ ವರ್ಷದ ಹುಟ್ಟುಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು.

ಮೈಸೂರಿನ ಯರಗನಹಳ್ಳಿ ಸಮೀಪದ ರಿಂಗ್ ರಸ್ತೆಯ ಹೆಚ್.ಡಿ.ದೇವೇಗೌಡ ವೃತ್ತದಲ್ಲಿ ಹೆಚ್.ಡಿ. ದೇವೇಗೌಡರ ಅಭಿಮಾನಿ ಬಳಗದ ವತಿಯಿಂದ 50 ಅಡಿ ಎತ್ತರದ ಬೃಹತ್ ಕಟೌಟ್ ನಿಲ್ಲಿಸಿ, ಪುಷ್ಪವೃಷ್ಟಿ ಹಾಗೂ ಹಾಲಿನ ಅಭಿಷೇಕ ಮಾಡಿ ಅಭಿಮಾನ ಮೆರೆದರಲ್ಲದೆ ಕೇಕ್ ಕತ್ತರಿಸಿ ಪರಸ್ಪರ ಸಿಹಿ ತಿನಿಸುವ ಮೂಲಕ ದೊಡ್ಡಗೌಡರ ಹುಟ್ಟುಹಬ್ಬ ಆಚರಿಸಿದರು.

ಈ ವೇಳೆ ಅಖಂಡ ಭಾರತವನ್ನಾಳಿದ ಕನ್ನಡದ ಮಣ್ಣಿನ ಮಗ, ಮಾಜಿ ಪ್ರಧಾನಿಗಳಾದ ಹೆಚ್.ಡಿ. ದೇವೇಗೌಡರು ಶತಾಯುಷಿಗಳಾಗಲಿ ಎಂದು ಘೋಷಣೆ ಕೂಗಿದರು. ಅಲ್ಲದೇ ಇಡೀ ಒಕ್ಕಲಿಗ ಸಮುದಾಯ ದೇವೇಗೌಡರೊಂದಿಗಿದೆ ಎಂದು ಘೋಷಿಸಿದರು. ಈ ವೇಳೆ ಬಿಜೆಪಿ ಮುಖಂಡ ಕವೀಶ್‌ಗೌಡ ಮಾತನಾಡಿ, ಮಾಜಿ ಪ್ರಧಾನಿಗಳಾದ ದೇವೇಗೌಡರು ಇಡೀ ರಾಷ್ಟ್ರಕ್ಕೆ ಒಂದು ಕಳಶವಿದ್ದಂತೆ. ರಾಜ್ಯದಲ್ಲಿ ನೆಲ–ಜಲದ ವಿಷಯ ಬಂದಾಗ ಮುಂದೆ ಬರುವ ಮೊದಲ ನಾಯಕ ಎಂದರೆ ದೇವೇಗೌಡರು ಎಂದು ಸ್ಮರಿಸಿದರು.

ಕಾವೇರಿ ನದಿ ನೀರಿನ ವಿಷಯದಲ್ಲಿ ದೀರ್ಘ ಕಾಲ ಹೋರಾಟ ನಡೆಸಿದ ಕೀರ್ತಿ ದೇವೇಗೌಡರಿಗೆ ಸಲ್ಲುತ್ತದೆ. ಕಾವೇರಿ ವಿಚಾರ ಬಂದಾಗ ಮೊದಲು ಅಭಿಪ್ರಾಯ ಕೇಳುವುದು ದೇವೇಗೌಡರನ್ನೇ. ರಾಜ್ಯದ ಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಅವರು ನೀಡಿರುವ ಕೊಡುಗೆ ಅಪಾರ. 92ರ ಇಳಿ ವಯಸ್ಸಿನಲ್ಲಿಯೂ ಪ್ರಧಾನಿಗಳೊಂದಿಗೆ ಸೇರಿ ಚುನಾವಣಾ ಪ್ರಚಾರದಲ್ಲಿ ಭಾಗವಹಿಸುವ ಮೂಲಕ ನಮಗೆಲ್ಲಾ ಪ್ರೇರಣೆಯಾಗಿದ್ದಾರೆ ಎಂದು ಹೇಳಿದರು.

ಮುಖಂಡ ಯರಗನಹಳ್ಳಿ ಮಾದೇಗೌಡ ಮಾತನಾಡಿ, ರಾಷ್ಟ್ರಮಟ್ಟದಲ್ಲಿ ಜಾತ್ಯಾತೀತ ನಾಯಕರಿದ್ದರೆ ಅದು ಹೆಚ್.ಡಿ.ದೇವೇಗೌಡರು ಮಾತ್ರ. ವಿವಿಧ ಪಕ್ಷಗಳಲ್ಲಿರುವ ಹಿರಿ ತಲೆಗಳೆಲ್ಲವೂ ಅವರ ಗರಡಿಯಲ್ಲಿ ಪಳಗಿದವರೆ. ರಾಜ್ಯದ ನೀರಾವರಿ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆ ಮಹತ್ವದ್ದಾಗಿದೆ. ಅವರು ನಮ್ಮೆಲ್ಲರಿಗೂ ಮಾರ್ಗದರ್ಶನ ನೀಡುತ್ತಾ ಶತಾಯುಷಿಗಳಾಗಿರಬೇಕು. ಯರಗನಹಳ್ಳಿ ರಿಂಗ್ ರಸ್ತೆಗೆ ದೇವೇಗೌಡರ ಹೆಸರನ್ನು ನಾಮಕರಣ ಮಾಡಿಸುವಲ್ಲಿ ಕೆಲಸ ಮಾಡಿದ ಸಾರ್ಥಕತೆ ನನಗಿದೆ. ಮೈಸೂರಿನಲ್ಲಿ ಅವರ ಪುತ್ಥಳಿ ಸ್ಥಾಪನೆಯಾಗಬೇಕು. ಅದಕ್ಕಾಗಿ ಎಲ್ಲರೂ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು. ನಗರಪಾಲಿಕೆ ಮಾಜಿ ಸದಸ್ಯರಾದ ಎಸ್‌ಬಿಎಂ ಮಂಜು, ಪ್ರಶಾಂತ್‌ಗೌಡ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್ ಕುಮಾರ್ ಗೌಡ, ಮೈಸೂರು ಹಾಗೂ ಚಾಮರಾಜನಗರ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಈ.ಚೇತನ್, ನಿರ್ದೇಶಕ ಎ ರವಿ, ಒಕ್ಕಲಿಗ ಸಂಘದ ಪೂರ್ವ ವಲಯದ ಅಧ್ಯಕ್ಷ ಸುರೇಶ್ ಗೌಡ, ಪ್ರಧಾನ ಕಾರ್ಯದರ್ಶಿ ಶಂಕೀಗೌಡ, ಅಭಿಮಾನಿ ಬಳಗದ ಸೋಮಶೇಖರ್, ಉಮಾಶಂಕರ್, ರಾಜ್ ಕುಮಾರ್, ರಾಕೇಶ್ ಗೌಡ, ಸಿದ್ದೇಶ್ವರ್, ಬಿ.ಜಿ ಶ್ರೀನಿವಾಸ್, ಎಂ.ಚೇತನ್, ಒಂಟಿಕೊಪ್ಪಲ್ ಸತೀಶ್, ಬಿ.ಜಿ ಶ್ರೀನಿವಾಸ್, ನೇಹಾ ನೈನಾ, ವಿಜಯನಗರ ಮಂಜು, ವಿವೇಕ್‌ಗೌಡ, ಪ್ರದೀಪ್ ಕೃಷ್ಣೆಗೌಡ, ಪಡುವಾರಹಳ್ಳಿ ಕೆ.ಕೃಷ್ಣ, ಒಂಟಿಕೊಪ್ಪಲ್ ಸತೀಶ್, ವಿಜಯನಗರ ಮಂಜು, ಉಮೇಶ್, ಶಾಲಿನಿ, ಹರೀಶ್ ಗೌಡ, ಬೆಲವತ್ತ ಶ್ರೀಧರ್, ತೇಜಸ್, ಕಾರ್ತಿಕ್ ಗೌಡ ಮತ್ತಿತರರು ಉಪಸ್ಥಿತರಿದ್ದರು.



ಹೆಚ್.ಡಿ.ದೇವೇಗೌಡರ ಅಭಿಮಾನಿ ಬಳಗದ ವತಿಯಿಂದ 50 ಅಡಿ ಎತ್ತರದ ಬೃಹತ್ ಕಟೌಟ್‌ಗೆ ಪುಷ್ಪವೃಷ್ಟಿ, ಹಾಲಿನ ಅಭಿಷೇಕ ಹಾಗೂ ಕೇಕ್ ಕತ್ತರಿಸಿ ಪರಸ್ಪರ ಸಿಹಿ ತಿನಿಸುವ ಮೂಲಕ ಹುಟ್ಟುಹಬ್ಬ ಆಚರಿಸಲಾಯಿತು.

ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ ಎದುರು ದೊಡ್ಡಗೌಡರ ಹುಟ್ಟುಹಬ್ಬ ಆಚರಣೆ...

ಜೆಡಿಎಸ್ ಚಾಮರಾಜ ಕ್ಷೇತ್ರದ ವತಿಯಿಂದ ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ರಾಷ್ಟ್ರಾಧ್ಯಕ್ಷರಾದ ಹೆಚ್.ಡಿ.ದೇವೇಗೌಡರ ಹುಟ್ಟುಹಬ್ಬವನ್ನು ಮೈಸೂರು ಅರಮನೆ ಉತ್ತರದ್ವಾರದಲ್ಲಿರುವ ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಸಿಹಿ ಹಂಚುವ ಮೂಲಕ ಸರಳವಾಗಿ ಆಚರಿಸಲಾಯಿತು. ಜೆಡಿಎಸ್ ರಾಜ್ಯ ವಕ್ತಾರ ರವಿಚಂದ್ರೇಗೌಡ ನೇತೃತ್ವದಲ್ಲಿ ಸಾರ್ವಜನಿಕರಿಗೆ ಸಿಹಿ ವಿತರಣೆ ಮಾಡುವ ಮೂಲಕ ಸರಳವಾಗಿ ದೇವೇಗೌಡರ ಸಾಧನೆ, ಸೇವೆಯನ್ನು ಸ್ಮರಿಸಲಾಯಿತು. ಚಾಮರಾಜ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಪಿ.ಮಂಜುನಾಥ್ ಮತ್ತಿತರರಿದ್ದರು.

ಚುನಾವಣಾ ಆಯೋಗದಿಂದ 8,889 ಕೋಟಿ ಮೌಲ್ಯದ ನಗದು, ಮದ್ಯ ವಶ

ನವದೆಹಲಿ:ಲೋಕಸಭಾ ಚುನಾವಣೆಯಲ್ಲಿ ಮತದಾರರ ಮೇಲೆ ಪ್ರಭಾವ ಬೀರುವ ಉದ್ದೇಶದಿಂದ ಸಾಗಿಸುತ್ತಿದ್ದ ನಗದು, ಮಾದಕದ್ರವ್ಯ, ಬೆಲೆಬಾಳುವ ಲೋಹ ಮತ್ತು ಉಡುಗೊರೆಗಳು ಸೇರಿದಂತೆ ಇದುವರೆಗೆ ಒಟ್ಟು 8,889 ಕೋಟಿ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಚುನಾವಣಾ ಆಯೋಗ ಶನಿವಾರ ತಿಳಿಸಿದೆ ವಶಪಡಿಸಿಕೊಂಡ ವಸ್ತುಗಳ ಮೊತ್ತದಲ್ಲಿ ಮಾದಕ ದ್ರವ್ಯದ ಪಾಲು ಶೇ. 45ರಷ್ಟು (3,959) ಇದೆ ಎಂದು ಆಯೋಗವು ಮಾಹಿತಿ ನೀಡಿದೆ. ಗುಜರಾತ್ ಎಟಿಎಸ್ ಮತ್ತು ಕರಾವಳಿ ಕಾವಲು ಪಡೆ ಈಚೆಗೆ ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಮೂರು ದಿನಗಳ ಅವಧಿಯಲ್ಲಿ 892 ಕೋಟಿ ಮೊತ್ತದ ಮಾದಕ ದ್ರವ್ಯ ವಶಪಡಿಸಿಕೊಳ್ಳಲಾಗಿತ್ತು.

ನಾಳೆ ಪರೀಕ್ಷಾ ತರಬೇತಿ ಶಿಬಿರ

ಮೈಸೂರು, ಮೇ 18– ಜ್ಞಾನಬುತ್ತಿ ಸಂಸ್ಥೆ ವತಿಯಿಂದ ಮೇ 20ರಂದು ಸಂಜೆ 6 ಗಂಟೆಗೆ ಲಕ್ಷ್ಮೀಪುರಂ ಸರ್ಕಾರಿ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜಿನ ಆವರಣದಲ್ಲಿ 45 ದಿನಗಳ ಗ್ರಾಮ ಆಡಳಿತಾಧಿಕಾರಿ(ವಿಎಓ) ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಿಡಿಓ) ಪರೀಕ್ಷೆಗಳ ಉದ್ಘಾಟನಾ ಸಮಾರಂಭವನ್ನು ಆಯೋಜಿಸ ಲಾಗಿದೆ.

ಕಾರ್ಯಕ್ರಮವನ್ನು ಹುಣಸೂರು ಉಪವಿಭಾಗಾಧಿಕಾರಿ ಮಹಮ್ಮದ್ ಹ್ಯಾರಿಸ್ ಸುಮೇರ್ ಉದ್ಘಾಟಿಸಲಿದ್ದು, ವಾಗ್ಮಿ ಪ್ರೊ.ಎಂ.ಕೃಷ್ಣೆಗೌಡ ಅಧ್ಯಕ್ಷತೆ ವಹಿಸು ವರು. ಭಾರತೀಯ ಆಡಳಿತ ಸೇವೆಯ ತರಬೇತಿನಿರತ ಐಎಎಸ್ ಅಧಿಕಾರಿ ಪಿ.ಶ್ರವಣ್‌ಕುಮಾರ್ ಪರೀಕ್ಷಾ ಸಿದ್ಧತೆ ಕುರಿತು ಮಾತನಾಡುವರು. ಸಂಪನ್ಮೂಲ ವ್ಯಕ್ತಿಗಳಾದ ಪ್ರೊ.ಕೆ.ಎಂ. ಪ್ರಸನ್ನಕುಮಾರ್, ಡಾ.ಹೊನ್ನಯ್ಯ ಶ್ರೀಮತಿ ವಿಭಾವಸು, ಡಾ.ನಾಗಚಾರ್, ಡಾ. ಉಮೇಶ್, ಡಿ.ಎ.ಹೇಮಚಂದ್ರ, ಡಾ.ಪಿ.ಎನ್.ಹೇಮಚಂದ್ರ, ಮೋಹನ್, ಡಾ.ಈ. ಶಿವಪ್ರಸಾದ್, ಎಸ್.ಗಣೇಶ, ಡಾ.ಪಳನಿಸ್ವಾಮಿ, ಡಾ.ಹೆಚ್.ಎಂ.ಸುದರ್ಶನ್, ಪ್ರೊ.ವಿ.ಜಯ ಪ್ರಕಾಶ್ ಆರ್.ರೋಹನ್ ರವಿಕುಮಾರ್, ಯು.ಎಂ.ಶರದ್‌ರಾವ್, ನಾಗರಾಜು, ರಾಜೀವ್ ಶರ್ಮ, ಡಾ.ವಸಂತಕುಮಾರ್ ವಿಶೇಷ ಅತಿಥಿಗಳಾಗಿ ಭಾಗವಹಿಸುವರು.



ಮುಡಾ ಮಾಜಿ ಅಧ್ಯಕ್ಷ ಯಶಸ್ವಿ ಸೋಮಶೇಖರ್ ಅವರ ಹುಟ್ಟುಹಬ್ಬದ ಅಂಗವಾಗಿ ಅವರನ್ನು 23ನೇ ವಾರ್ಡ್‌ನ ಸ್ನೇಹಿತರ ಬಳಗದ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಬಿಜೆಪಿ ಮುಖಂಡರಾದ ಆರ್.ಪರಮೇಶ್, ವಿಕ್ರಂ ಅಯ್ಯಂಗಾರ್, ಸುರೇಂದ್ರ, ಪ್ರಮೋದ್, ಕಿರಣ್, ನಾಗೇಶ್ ಯಾದವ್, ಮಂಜು, ವಿಜಯನಗರ ಯೋಗಿ, ವಿನೋದ್, ಸಂಜಯ್, ನವೀನ್ ಕುಮಾರ್, ರವಿಚಂದ್ರ ಮುಂತಾದವರಿದ್ದರು.

ಮೈಸೂರು ಮಿತ್ರ ಭಾನುವಾರ 19 ಮೇ 2024

ಮಡಿಕೇರಿ ಸುತ್ತ-ಮುತ್ತ ಭಾರಿ ಮಳೆ

ಎಫ್‌ಎಂಸಿ ಕಾಲೇಜು ಬಳಿ ರಸ್ತೆ ಕುಸಿತ, ಜನಜೀವನ ಅಸ್ತವ್ಯಸ್ಥ



ಮಡಿಕೇರಿಯಲ್ಲಿ ಮಳೆಯಿಂದ ವಾಹನಗಳು ಸಂಚರಿಸಲು ಪರದಾಡುತ್ತಿರುವುದು.

ಮಡಿಕೇರಿ, ಮೇ 18– ಶನಿವಾರ ಮಧ್ಯಾಹ್ನ ಮಡಿಕೇರಿ ಮತ್ತು ಸುತ್ತಮುತ್ತಲ ಗ್ರಾಮಗಳಲ್ಲಿ ಭಾರಿ ಮಳೆಯಾಗಿದೆ. ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಜಿರುಸಿನ ಮಳೆ ಸುರಿದಿದ್ದು, ದಿಢೀರ್ ಸುರಿದ ಮಳೆಯಿಂದಾಗಿ ನಗರದಲ್ಲಿ ಕೆಲಕಾಲ ಜನಜೀವನ ಅಸ್ತವ್ಯಸ್ತಗೊಂಡಿತು. ಜಿರುಸಿನ ಮಳೆಗೆ ನಗರದ ಎಫ್‌ಎಂಸಿ ಕಾಲೇಜಿಗೆ ತೆರಳುವ ರಸ್ತೆಯಲ್ಲಿರುವ ಕ್ಯಾಫಾ ಬಡಾವಣೆ ಸಮೀಪ ರಸ್ತೆಯ ಒಂದು ಬದಿ ಕುಸಿದ ಘಟನೆಯೂ ನಡೆದಿದೆ. ನಗರಸಭೆ ಮೂಲಕ ಜೆಸಿಬಿ ಯಂತ್ರ ಸಹಾಯದಿಂದ ಮಣ್ಣನ್ನು ತೆರವುಗೊಳಿಸಲಾಯಿತು. ಗಾಳಿಬೀಡು, ಮಕ್ಕಂದೂರು, ವಣಚಲು, ಕಾಲೂರು ಹಾಗೂ ಸುತ್ತಮುತ್ತಲಿನ ಗ್ರಾಮೀಣ ಭಾಗಗಳಲ್ಲೂ ಧಾರಾಕಾರ ಮಳೆಯಾಗಿದೆ.

ನಾಪೋಕ್ಲು ವರದಿ: ನಾಪೋಕ್ಲುವಿನಲ್ಲಿ ಗುಡುಗು ಸಹಿತ ಧಾರಾಕಾರ ಮಳೆ ಸುರಿದಿದ್ದು, ನಾಪೋಕ್ಲು ವಿವಿಧೆಡೆ ಕಳೆದ ಮೂರು ದಿನಗಳಲ್ಲಿ 4 ಇಂಚು ಮಳೆ ಸುರಿದಿದೆ. ಶನಿವಾರ ಮಧ್ಯಾಹ್ನ ನಾಪೋಕ್ಲು ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಹಲವು ಗ್ರಾಮಗಳಲ್ಲಿ ಗುಡುಗು ಸಹಿತ 1 ಇಂಚಿಗೂ ಅಧಿಕ ಧಾರಾಕಾರ ಮಳೆ ಸುರಿದಿದೆ.

ದಿಢೀರ್ ಮಳೆಯಿಂದ ನಾಪೋಕ್ಲು ಪಟ್ಟಣದ ವಿವಿಧ ಭಾಗಗಳಿಗೆ ತೆರಳುವ ಮುಖ್ಯ ರಸ್ತೆಗಳಲ್ಲಿ ಮಳೆ ನೀರು ರಸ್ತೆಯಲ್ಲೇ ಹರಿದು ವಾಹನ ಚಾಲಕರು ಹಾಗೂ ಪಾದಚಾರಿಗಳು ಸಂಚರಿಸಲು ಪರದಾಡುವ ಪರಿಸ್ಥಿತಿ ಉಂಟಾಯಿತು. ನಾಪೋಕ್ಲು ಮಾರುಕಟ್ಟೆ ಬಳಿಯಿಂದ ಚೆಯಂಡಾಣೆ ಗ್ರಾಮಕ್ಕೆ ತೆರಳುವ ರಸ್ತೆಯಲ್ಲಿ ಚರಂಡಿಯಿಲ್ಲದೆ ಕೆಸರು ಮಿಶ್ರಿತ ಮಳೆ ನೀರು ಪ್ರವಾಹದಂತೆ ರಸ್ತೆ ಮಧ್ಯದಲ್ಲೇ ಹರಿಯುತ್ತಿದ್ದುದು ಕಂಡು ಬಂತು. ನಾಪೋಕ್ಲು ವಿಭಾಗದಲ್ಲಿ ಕಳೆದ ಕೆಲವು ದಿನಗಳಿಂದ ರಾತ್ರಿ-ಹಗಲು ಉತ್ತಮ ಮಳೆಯಾಗುತ್ತಿದ್ದು, ವಿಭಾಗದಲ್ಲಿರುವ ಕಾವೇರಿ ನದಿ ಸೇರಿದಂತೆ ವಿವಿಧ ನದಿ ತೊರೆಗಳಲ್ಲಿ ನೀರಿನ ಪ್ರಮಾಣ ಅಲ್ಪ ಏರಿಕೆ ಕಂಡಿದೆ.

ಹಿರಿಯ ಕಾಂಗ್ರೆಸ್ ಮುಖಂಡ ಮಿಟ್ಟು ಚಂಗಪ್ಪ ಭೇಟಿಯಾದ ಗೃಹ ಸಚಿವ ಡಾ.ಜಿ. ಪರಮೇಶ್ವರ್



ಗೃಹ ಸಚಿವ ಡಾ.ಜಿ.ಪರಮೇಶ್ವರ್, ಹಿರಿಯ ಕಾಂಗ್ರೆಸ್ ಮುಖಂಡ ಮಿಟ್ಟು ಚಂಗಪ್ಪ ಅವರನ್ನು ಭೇಟಿ ಮಾಡಿ, ಮಾತುಕತೆ ನಡೆಸುತ್ತಿರುವುದು.

ಮಡಿಕೇರಿ, ಮೇ 18– ರಾಜ್ಯ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಹಿರಿಯ ಕಾಂಗ್ರೆಸ್ ಮುಖಂಡ ಉದ್ಯಮಿ ಮಿಟ್ಟು ಚಂಗಪ್ಪ ಅವರನ್ನು ಕುಶಾಲನಗರದ ನಿವಾಸದಲ್ಲಿ ಭೇಟಿಯಾಗಿ, ಯೋಗಕ್ಷೇಮ ವಿಚಾರಿಸಿದರು. ಸೋಮವಾರಪೇಟೆ ತಾಲೂಕಿನ ಮುಟ್ಲು ಗ್ರಾಮದಲ್ಲಿ ಬರ್ಬರವಾಗಿ ಹತ್ಯೆಗೀಡಾದ ಶಾಲಾ ಬಾಲಕಿ ಮೀನಾ ಮನೆಗೆ ಆಗಮಿಸಿದ್ದ ಗೃಹ ಸಚಿವರು ಆಕೆಯ ಪೋಷಕರಿಗೆ ಸಾಂತ್ವನ ಹೇಳಿದ್ದರು.

ನಂತರ ಮಾದಾಪುರ, ಸುಂಟಿಕೊಪ್ಪ ಮಾರ್ಗವಾಗಿ ಕುಶಾಲನಗರಕ್ಕೆ ಆಗಮಿಸಿದ್ದ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರು ತಮ್ಮ ಆಪ್ತ ವರ್ಗದಲ್ಲಿ ಗುರುತಿಸಿಕೊಂಡಿರುವ ಕಾಂಗ್ರೆಸ್ ಮುಖಂಡ ಮಿಟ್ಟು ಚಂಗಪ್ಪ ಅವರ ನಿವಾಸಕ್ಕೆ ತೆರಳಿದ್ದರು. ಈ ಸಂದರ್ಭ ತಮ್ಮ ಹಳೆಯ ನೆನಪುಗಳನ್ನು ಮೆಲುಕು ಹಾಕಿ, ಆರೋಗ್ಯ ಕಾಪಾಡಿಕೊಳ್ಳುವಂತೆ ಮಿಟ್ಟು ಚಂಗಪ್ಪ ಅವರಿಗೆ ಸಲಹೆ ನೀಡಿ ಶುಭ ಹಾರೈಸಿದರು.

ಈ ಸಂದರ್ಭ ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂತರ್ ಗೌಡ, ವಿಧಾನ ಪರಿಷತ್ ಮಾಜಿ ಸದಸ್ಯೆ ವೀಣಾ ಅಚ್ಚಯ್ಯ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಪಿ. ಚಂದ್ರಕಲಾ, ಕಾಂಗ್ರೆಸ್ ಯುವ ಮುಖಂಡ ನಂದಿನೆರವಂಡ ಮಧು ಮತ್ತಿತರ ಪ್ರಮುಖರು ಹಾಜರಿದ್ದರು.

ದುಬಾರೆಯಲ್ಲಿ ರಿವರ್ ರ್‍ಯಾಫ್ಟಿಂಗ್‌ಗೆ ಮತ್ತೆ ಚಾಲನೆ



ದುಬಾರೆಯಲ್ಲಿ ರಿವರ್ ರ್‍ಯಾಫ್ಟಿಂಗ್‌ಗೆ ಪ್ರವಾಸಿಗರು ಮುಗಿಬಿದ್ದಿರುವುದು.

ಮಡಿಕೇರಿ, ಮೇ 18– ಕಾವೇರಿ ಜಲಾನಯನ ವ್ಯಾಪ್ತಿಯಲ್ಲಿ ಕಳೆದ 1 ವಾರದಿಂದ ಉತ್ತಮ ಮಳೆಯಾಗುತ್ತಿದ್ದು, ನದಿಯಲ್ಲಿ ನೀರಿನ ಮಟ್ಟ ಏರಿಕೆ ಕಾಣುತ್ತಿದೆ. ನೆಲ್ಯಹುದಿಕೇರಿ, ತೆಪ್ಪದಕಂಡಿ, ಕೊಪ್ಪ ಸೇತುವೆಯ ಕೆಳಭಾಗ ಹಾಗೂ ಕೂಡಿಗೆ ಬಳಿ ಹರಿಯುವ ಕಾವೇರಿ ನದಿಯ ನೀರಿನ ಹರಿವಿನಲ್ಲಿ ಹೆಚ್ಚಳವಾಗಿದ್ದು, ನದಿ ಬರಡಾಗಿ ದಡ ಸೇರಿದ್ದ ರ್‍ಯಾಫ್ಟ್‌ಗಳು ದುಬಾರೆಯಲ್ಲಿ ಮತ್ತೆ ನೀರಿಗಿಳಿದಿವೆ.

ಮಳೆಯಾಗಿ ತಂಪಿನ ಹವಾಮಾನ ಕಂಡು ಬಂದಿರುವ ಕಾರಣ ದುಬಾರೆಗೆ ಅತೀ ಹೆಚ್ಚು ಪ್ರವಾಸಿಗರು ಆಗಮಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ದುಬಾರೆಯಲ್ಲಿ ಮತ್ತೆ ರಿವರ್ ರ್‍ಯಾಫ್ಟಿಂಗ್ ಕ್ರೀಡೆಗೆ ಚಾಲನೆ ನೀಡಲಾಗಿದೆ. ಬಿರುಬಿಸಿಲಿನಿಂದ ಕಾವೇರಿ ನದಿ ಬತ್ತಿಹೋದ ಪರಿಣಾಮ ಕಳೆದ ಒಂದೂವರೆ ತಿಂಗಳಿನಿಂದ ದುಬಾರೆ ಪ್ರವಾಸಿ ತಾಣದಲ್ಲಿ ಪ್ರವಾಸಿಗರ ಸಂಖ್ಯೆ ಇಳಿಮುಖವಾಗಿತ್ತು. ಪ್ರವಾಸೋದ್ಯಮ ನಂಬಿ ಬದುಕು ಕಟ್ಟಿಕೊಂಡಿದ್ದ ರಿವರ್ ರ್‍ಯಾಫ್ಟ್ ಉದ್ಯಮಿಗಳಿಗೆ ಪ್ರಸ್ತುತ ಮಳೆಯ ವಾತಾವರಣ ಸಮಾಧಾನ ತರಿಸಿದೆ.

ದುಬಾರೆ ರಿವರ್ ರ್‍ಯಾಫ್ಟಿಂಗ್ ಅನ್ನು ನಂಬಿಕೊಂಡು ಸುಮಾರು 41 ಮಂದಿ ರಿವರ್ ರ್‍ಯಾಫ್ಟಿಂಗ್ ಮಾಲೀಕರು, 80 ಮಂದಿ ಆಪರೇಟರ್ಸ್ ಹಾಗೂ ವಿವಿಧ ಬಗೆಯ ತಿನಿಸುಗಳು, ಹಣ್ಣು ಹಂಪಲು, ತಂಪು ಪಾನೀಯ ಅಂಗಡಿಗಳನ್ನಿಟ್ಟುಕೊಂಡು ಸುಮಾರು 50ರಿಂದ 60 ಮಂದಿ ಜೀವನ ಸಾಗಿಸುತ್ತಿದ್ದಾರೆ. ಪ್ರವಾಸಿಗರನ್ನು ಅವಲಂಬಿಸಿ ದುಬಾರೆಯಲ್ಲಿ ವ್ಯಾಪಾರ ವಹಿವಾಟಿನಲ್ಲೂ ಹಲವು ಮಂದಿ ತೊಡಗಿಸಿಕೊಂಡಿದ್ದು, ಇದೀಗ ಪ್ರವಾಸಿಗರ ಆಗಮನದಿಂದ ವ್ಯಾಪಾರೋದ್ಯಮದಲ್ಲೂ ಚೇತರಿಕೆ ಕಂಡು ಬಂದಿದೆ.

ಬೇಸಿಗೆ ರಜೆ ಹಾಗೂ ವಾರಾಂತ್ಯದ ಹಿನ್ನೆಲೆಯಲ್ಲಿ ಪ್ರವಾಸಿಗರು ದುಬಾರೆಯತ್ತ ಆಗಮಿಸುತ್ತಿದ್ದು, ನದಿಯಲ್ಲಿ ನೀರಿನ ಹರಿವು ಹೆಚ್ಚುತ್ತಿರುವ ಕಾರಣ ಸ್ಟಿಲ್ ವಾಟರ್ ಜಲ ಕ್ರೀಡೆ ಆರಂಭಿಸಲಾಗಿದೆ. ಇರುವ ನೀರಿನಲ್ಲಿ ರ್‍ಯಾಫ್ಟ್ ಬೋಟ್‌ಗಳಲ್ಲಿ ಪ್ರವಾಸಿಗರನ್ನು ನದಿಯಲ್ಲಿ ಸುತ್ತಾಡಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಉತ್ತಮ ಮಳೆಯಾಗಿ ಕಾವೇರಿ ನದಿ ಬೋರ್ಗರೆಯುತ್ತಾ ಹರಿದಲ್ಲಿ ವೈಟ್ ವಾಟರ್ ಸಾಹಸಿ ಕ್ರೀಡೆ ಆರಂಭಿಸಲಾಗುವುದು ಎಂದು ನಂಜರಾಯಪಟ್ಟಣ ಗ್ರಾಮ ಪಂಚಾಯಿತಿ ಅಧ್ಯಕ್ಷರೂ ಆದ ರಿವರ್ ರ್‍ಯಾಫ್ಟಿಂಗ್ ಮೇಲುಸ್ತುವಾರಿ ಸಮಿತಿ ಅಧ್ಯಕ್ಷ ಸಿ.ಎಲ್.ವಿಶ್ವ ಮಾಹಿತಿ ನೀಡಿದ್ದಾರೆ.

ದುಬಾರೆಯಲ್ಲಿ ಸುಮಾರು 70ರಿಂದ 80ರಷ್ಟು ರ್‍ಯಾಫ್ಟ್ ಬೋಟ್‌ಗಳಿದ್ದು, ಇದನ್ನೇ ನಂಬಿರುವ ಬೋಟ್ ಮಾಲೀಕರು, ಕಾರ್ಮಿಕರಿಗೆ ಮಳೆಯಿಲ್ಲದೆ ತೀವ್ರ ಸಮಸ್ಯೆ ಎದುರಾಗಿತ್ತು. ಇದೀಗ ನದಿಯಲ್ಲಿ ಒಂದೂವರೆ ಕಿಲೋ ಮೀಟರ್‌ನಲ್ಲಿ ಸ್ಟಿಲ್ ವಾಟರ್ ಕ್ರೀಡೆ ನಡೆಸಲಾಗುತ್ತಿದೆ. ಉತ್ತಮ ಮಳೆಯಾದಲ್ಲಿ ಜೂನ್ ಜುಲೈ ತಿಂಗಳಲ್ಲಿ ವೈಟ್ ವಾಟರ್ ಸಾಹಸಿ ಕ್ರೀಡೆ ನಡೆಯಲಿದೆ ಎಂದು ವಿಶ್ವ ತಿಳಿಸಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಕುಶಾಲನಗರ: ಕುಶಾಲನಗರ ವಿದ್ಯುತ್ ಉಪ ಕೇಂದ್ರದಿಂದ ಹಾದುಹೋಗುವ ನಂಜರಾಯಪಟ್ಟಣ ವ್ಯಾಪ್ತಿಯ ಫೀಡರ್‌ಗಳ ಮಾರ್ಗದಲ್ಲಿ ತುರ್ತಾಗಿ ಹೊಸ ಎಂಬಿಡಿ ಅಭಿವೃದ್ಧಿ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಮೇ 19 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆವರೆಗೆ ನಂಜರಾಯಪಟ್ಟಣ ಫೀಡರ್ ವ್ಯಾಪ್ತಿಯ ರಂಗಸಮುದ್ರ, ಹೊಸಪಟ್ಟಣ, ವಿರೂಪಾಕ್ಷಪುರ, ವಾಲ್ನೂರು ತ್ಯಾಗತ್ತೂರು ಸುತ್ತಮುತ್ತಲಿನ ವ್ಯಾಪ್ತಿಯಲ್ಲಿ ವಿದ್ಯುತ್ ಸಂಪರ್ಕದಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಚೆಸ್ಕಾಂ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಎಂ.ಎಸ್.ಮಂಜುನಾಥ್ ತಿಳಿಸಿದ್ದಾರೆ.

ಎರಡು ತಿಂಗಳ ಹಿಂದೆ ಕಳೆದು ಹೋಗಿದ್ದ ಮೊಬೈಲ್ ಪತ್ತೆ ಹಚ್ಚಿದ ಸೈಬರ್ ಠಾಣೆ ಪೊಲೀಸರು



ಮಡಿಕೇರಿ, ಮೇ 18– ಆಟೋರಿಕ್ಷಾದಲ್ಲಿ ಕಳೆದು ಹೋಗಿದ್ದ ಮೊಬೈಲ್ ಫೋನ್ ಅನ್ನು ಕೊಡಗು ಸೈಬರ್ ಅಪರಾಧ ಠಾಣೆ ಪೊಲೀಸರು ಪತ್ತೆ ಹಚ್ಚಿದ್ದಾರೆ.

2 ತಿಂಗಳ ಹಿಂದೆ ಮಡಿಕೇರಿ ಮಾರುಕಟ್ಟೆ ವ್ಯಾಪಾರಿ ಎಂ.ಎ.ರಜ್ಹಾಕ್ ಅವರು ರಾಜರಾಜೇಶ್ವರಿ ನಗರದ ರಸ್ತೆಯಲ್ಲಿ ಆಟೋರಿಕ್ಷಾವೊಂದರಲ್ಲಿ ಮೊಬೈಲ್ ಫೋನ್ ಕಳೆದುಕೊಂಡಿದ್ದರು. ಈ ಬಗ್ಗೆ ಸೈಬರ್ ಅಪರಾಧ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಎರಡು ತಿಂಗಳ ತನಿಖೆಯ ನಂತರ ಮೊಬೈಲ್ ಫೋನ್ ಪತ್ತೆಯಾಗಿದ್ದು, ಠಾಣಾಧಿಕಾರಿ ಶ್ರೀಕಾಂತ್ ಅವರು ಇಂದು ಎಂ.ಎ. ರಜ್ಹಾಕ್ ಅವರಿಗೆ ಹಸ್ತಾಂತರಿಸಿದರು. ಪೊಲೀಸರ ಕಾರ್ಯದಕ್ಷತೆಯ ಬಗ್ಗೆ ರಜ್ಹಾಕ್ ಮೆಚ್ಚುಗೆ ವ್ಯಕ್ತಪಡಿಸಿದ್ದು, ಸೈಬರ್ ಅಪರಾಧ ಠಾಣೆಯ ಸೇವೆಯನ್ನು ಸದುಪಯೋಗಪಡಿಸಿಕೊಳ್ಳುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ಮಹಿಳೆಯರ ಮೇಲಿನ ದೌರ್ಜನ್ಯ ತಡೆಗೆ ಕಠಿಣ ಕಾನೂನು ಜಾರಿಗೆ ತನ್ನಿ

ಬಿಜೆಪಿ ಮಹಿಳಾ ಮೋರ್ಚಾದಿಂದ ಡಿಸಿ ಮೂಲಕ ಸರಕಾರಕ್ಕೆ ಮನವಿ ಸಲ್ಲಿಕೆ



ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸುತ್ತಿರುವ ಬಿಜೆಪಿ ಮಹಿಳಾ ಮೋರ್ಚಾ ಪದಾಧಿಕಾರಿಗಳು.

ಮಡಿಕೇರಿ, ಮೇ 18– ಮಹಿಳೆಯರು ಹಾಗೂ ಯುವತಿಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ತಡೆಗೆ ಕಠಿಣ ಕಾನೂನು ಜಾರಿಗೆ ತರಬೇಕು. ದೌರ್ಜನ್ಯ ಪ್ರಕರಣಗಳನ್ನು ಶೀಘ್ರ ಇತ್ಯರ್ಥಪಡಿಸಿ ತಪ್ಪಿತಸ್ಥರಿಗೆ ಶಿಕ್ಷೆಯಾಗುವಂತೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಕೊಡಗು ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ, ಜಿಲ್ಲಾಧಿಕಾರಿಗಳ ಮೂಲಕ ಸರಕಾರಕ್ಕೆ ಮನವಿ ಸಲ್ಲಿಸಿದೆ.

ಜಿಲ್ಲಾಧಿಕಾರಿಗಳನ್ನು ಭೇಟಿಯಾದ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಅನಿತಾ ಪೂವಯ್ಯ ಹಾಗೂ ಪದಾಧಿಕಾರಿಗಳು, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದು, ಮಹಿಳೆಯರು ಆತಂಕದ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ನಂತರ ಹತ್ಯೆ, ಅತ್ಯಾಚಾರ ಮತ್ತು ದೌರ್ಜನ್ಯ ಪ್ರಕರಣಗಳು ಹೆಚ್ಚಾಗಿವೆ ಎಂದು ಆರೋಪಿಸಿದರು.

ಬೆಳಗಾವಿಯಲ್ಲಿ ಮಹಿಳೆಯೊಬ್ಬರನ್ನು ವಿವಸ್ತ್ರಗೊಳಿಸಿ ದೌರ್ಜನ್ಯ ನಡೆಸಲಾಗಿದೆ. ರಾಣೆಬೆನ್ನೂರಿನಲ್ಲಿ ಮಹಿಳೆಯನ್ನು ವಿದ್ಯುತ್ ಕಂಬಕ್ಕೆ ಕಟ್ಟಿ ವಿವಸ್ತ್ರಗೊಳಿಸಿ ಥಳಿಸಲಾಗಿದೆ. ಹಾವೇರಿಯಲ್ಲಿ ಏಳು ಪುರುಷರು ಯುವತಿಯೊಬ್ಬಳ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿದ್ದಾರೆ. ಹುಬ್ಬಳ್ಳಿಯ ಕಾಲೇಜು ಕ್ಯಾಂಪಸ್‌ನಲ್ಲಿ ಕಾಂಗ್ರೆಸ್ ಕಾರ್ಪೋರೇಟರ್ ಪುತ್ರಿ ನೇಹಾಳನ್ನು ಅಮಾನುಷವಾಗಿ ಕೊಲೆ ಮಾಡಲಾಗಿದೆ. ಕೊಡಗಿನ ಸೂರ್ಲಬ್ಬಿ ಗ್ರಾಮದಲ್ಲಿ ವಿದ್ಯಾರ್ಥಿನಿ ಯು.ಎಸ್. ಮೀನಾಳ ರುಂಡವನ್ನು ಕತ್ತರಿಸಲಾಗಿದೆ. ಮೇ 15ರಂದು ಹುಬ್ಬಳ್ಳಿಯಲ್ಲಿ ಯುವಕನೊಬ್ಬ 21 ವರ್ಷದ ಅಂಜಲಿ ಅಂಬಿಗೇರ ಎಂಬ ಯುವತಿಯನ್ನು ಇರಿದು ಕೊಲೆ ಮಾಡಿದ್ದಾನೆ. ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ನಂತರ ಕಾನೂನಿಗೆ ಹೆದರುವವರ ಸಂಖ್ಯೆ ಕಡಿಮೆಯಾಗಿದೆ. ಆರೋಪಿಗಳು ಸಾಕ್ಷ್ಯಾಧಾರಗಳಿಲ್ಲದೆ ಕಾನೂನಿನ ಶಿಕ್ಷೆಯಿಂದ ತಪ್ಪಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚಾಗಿದೆ. ಆದ್ದರಿಂದ ರಾಜ್ಯ ಸರಕಾರ ಅಪರಾಧ ತಡೆಗೆ ಕಠಿಣ ನಿಯಮ ರೂಪಿಸಬೇಕು ಎಂದು ಅನಿತಾ ಪೂವಯ್ಯ ಒತ್ತಾಯಿಸಿದರು.

ಮನವಿ ಸಲ್ಲಿಸುವ ಸಂದರ್ಭ ಮಹಿಳಾ ಮೋರ್ಚಾದ ಪದಾಧಿಕಾರಿಗಳಾದ ಕವಿತಾ ಭೋಜಪ್ಪ ಸೌಮ್ಯ ಸುನೀಲ್, ಕವಿತಾ ವಿರೂಪಾಕ್ಷ, ಸುಮಾ ಸುದೀಪ್, ಪ್ರಮೀಳ ಯೋಗೇಶ್, ಸೀತಮ್ಮ, ತಂಗಮ್ಮ, ವೈಭವಿ, ಕಲಾವತಿ, ಸಂಗೀತ ಇತರರು ಹಾಜರಿದ್ದರು.

ಮಹಿಳೆಯರಿಗೆ ರಕ್ಷಣೆ ನೀಡುವಲ್ಲಿ ರಾಜ್ಯ ಸರ್ಕಾರ ವಿಫಲ

ಬಿಜೆಪಿ ಮಹಿಳಾ ಮೋರ್ಚಾದಿಂದ ರಾಜ್ಯಪಾಲರಿಗೆ ದೂರು



ಚಾಮರಾಜನಗರ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಮಲೆಯೂರು ಕಮಲಮ್ಮ ನೇತೃತ್ವದಲ್ಲಿ ಹುಬ್ಬಳ್ಳಿಯಲ್ಲಿ ನಡೆದಿರುವ ಮಹಿಳೆಯರ ಹತ್ಯೆಯನ್ನು ಖಂಡಿಸಿ ರಾಜ್ಯ ಸರ್ಕಾರದ ವಿರುದ್ಧ ಜಿಲ್ಲಾಧಿಕಾರಿ ಶಿಲ್ಪನಾಗ್ ಅವರಿಗೆ ಮನವಿ ಸಲ್ಲಿಸಲಾಯಿತು.

ಚಾಮರಾಜನಗರ, ಮೇ 18– ಹುಬ್ಬಳ್ಳಿಯಲ್ಲಿ ನಡೆದಿರುವ ಯುವತಿಯರಾದ ಅಂಜಲಿ ಹಾಗೂ ನೇಹಾ ಹತ್ಯೆ ಪ್ರಕರಣಗಳಿಗೆ ರಾಜ್ಯ ಸರ್ಕಾರದ ಕಾನೂನು ಸುವ್ಯವಸ್ಥೆ ವೈಫಲ್ಯವೇ ಪ್ರಮುಖ ಕಾರಣವಾಗಿದ್ದು, ಈ ಸರ್ಕಾರದಿಂದ ಮಹಿಳೆಯರಿಗೆ ರಕ್ಷಣೆ ಇಲ್ಲದಂತಾಗಿದೆ ಎಂದು ಬಿಜೆಪಿ ಮಹಿಳಾ ಮೋರ್ಚಾದಿಂದ ರಾಜ್ಯಪಾಲರಿಗೆ ಜಿಲ್ಲಾಧಿಕಾರಿಗಳ ಮುಖಾಂತರ ಮನವಿ ಸಲ್ಲಿಸಲಾಯಿತು.

ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾಧಿಕಾರಿಗಳ ಕಚೇರಿಗೆ ಮಹಿಳಾ ಮೋರ್ಚಾ ಅಧ್ಯಕ್ಷೆ ಮಲೆಯೂರು ಕಮಲಮ್ಮ ನೇತೃತ್ವದಲ್ಲಿ ಪದಾಧಿಕಾರಿಗಳು ಆಗಮಿಸಿ ಜಿಲ್ಲಾಧಿಕಾರಿ ಶಿಲ್ಪನಾಗ್ ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅಧ್ಯಕ್ಷೆ ಮಲೆಯೂರು ಕಮಲಮ್ಮ ಅವರು, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಹಾಳಾಗಿದೆ. ಮಹಿಳೆಯರಿಗೆ ಕಾಂಗ್ರೆಸ್ ಸರ್ಕಾರ ರಕ್ಷಣೆ ನೀಡುವಲ್ಲಿ ವಿಫಲವಾಗಿದೆ. ಹುಬ್ಬಳ್ಳಿಯಲ್ಲಿ ನಡೆದಿರುವ ನೇಹಾ ಹಾಗೂ ಅಂಜಲಿ ಹತ್ಯೆಯಲ್ಲಿ ರಾಜ್ಯ ಸರ್ಕಾರದ ವೈಫಲ್ಯ ಎದ್ದು ಕಾಣುತ್ತಿದೆ. ಅಂಜಲಿ ಮನೆಯವರು ಆರೋಪಿಯ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡಿದ್ದರೂ ಸಹ ಅಲ್ಲಿನ ಪೊಲೀಸರು ನಿರ್ಲಕ್ಷ್ಯ ವಹಿಸಿರುವುದು ಅಂಜಲಿ ಹತ್ಯೆಗೆ ಪ್ರಮುಖ ಕಾರಣವಾಗಿದೆ ಎಂದರು.

ಹುಬ್ಬಳ್ಳಿಯಲ್ಲಿ ಹತ್ಯೆಯಾದ ನೇಹಾ ಹಿರೇಮಠ್ ನೆನಪು ಮಾಸುವ ಮುನ್ನವೇ ಮತ್ತೊಬ್ಬ ಯುವತಿ ಅಂಜಲಿ ಕೊಲೆಯಾಗಿದೆ. ಆರೋಪಿಯನ್ನು ಬಂಧಿಸಿರುವುದು ಸರಿಯಷ್ಟೇ, ಆದರೆ ನೇಹಾ ಹಿರೇಮಠ್ ಕೊಲೆಯಾದ ನಂತರ ಪೊಲೀಸರು ಎಚ್ಚೆತ್ತುಕೊಳ್ಳಬೇಕಿತ್ತು.

ಪೊಲೀಸರು ಮತ್ತು ರಾಜ್ಯ ಸರ್ಕಾರದ ನಡುವೆ ಸಮನ್ವಯತೆಯ ಕೊರತೆ, ಪೊಲೀಸ್ ಇಲಾಖೆಯಲ್ಲಿನ ಲೋಪದೋಷದ ಕಾರಣದಿಂದ ಅಂಜಲಿ ಕೊಲೆಯಾಗಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಅಧೋಗತಿಗೆ ತಲುಪಿದ್ದು, ಇದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಗೃಹ ಸಚಿವ ಪರಮೇಶ್ವರ್ ಅವರುಗಳು ನೇರ ಹೊಣೆಗಾರರಾಗಿದ್ದಾರೆ ಎಂದು ಆರೋಪಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶೈಲಾ, ಉಪಾಧ್ಯಕ್ಷರಾದ ಮಮತಾ ಬಾಲಸುಬ್ರಮಣ್ಯ, ಜಯಶೀಲಾ ರಾಜಶೇಖರ್, ಕಾರ್ಯಕಾರಿಣಿ ಸದಸ್ಯ ದಾಕ್ಷಾಯಣಿ ಇತರರು ಇದ್ದರು.

ವೈಜ್ಞಾನಿಕ ಬೆಳೆ ಪರಿಹಾರಕ್ಕೆ ಆಗ್ರಹಿಸಿ ಕಬ್ಬು ಬೆಳೆಗಾರರ ಪ್ರತಿಭಟನೆ



ವೈಜ್ಞಾನಿಕ ಬೆಲೆಗೆ ಒತ್ತಾಯಿಸಿ ಕಬ್ಬು ಬೆಳೆಗಾರರ ಸಂಘದ ವತಿಯಿಂದ ಪಟ್ಟಣದ ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿ, ತಹಸೀಲ್ದಾರ್ ಜಯಪ್ರಕಾಶ ಅವರಿಗೆ ಮನವಿ ಸಲ್ಲಿಸಲಾಯಿತು.

ಗುಂಡ್ಲುಪೇಟೆ, ಮೇ 18– ಬರ ಪರಿಹಾರ ಹಾಗೂ ರೈತರ ನಾನಾ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ನೇತೃತ್ವದಲ್ಲಿ ಶನಿವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಪ್ರವಾಸಿ ಮಂದಿರದ ಬಳಿಯಿಂದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಸಾಗಿದ ಪ್ರತಿಭಟನಾಕಾರರು ಸಾರಿಗೆ ಬಸ್ ನಿಲ್ದಾಣದ ಎದುರು ರಸ್ತೆ ತಡೆ ನಡೆಸಿದ ನಂತರ ತಾಲೂಕು ಕಚೇರಿಗೆ ತೆರಳಿ ಪ್ರಭಾರ ತಹಸೀಲ್ದಾರ್ ಜಯಪ್ರಕಾಶ್ ಅವರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಭಾಗ್ಯರಾಜ್ ಮಾತನಾಡಿ, ಪ್ರತಿಯೊಬ್ಬ ರೈತರಿಗೂ ಬರಗಾಲದಿಂದ ಬೆಳೆ ನಷ್ಟವಾಗಿದ್ದರೂ ಜಿಲ್ಲೆಯಲ್ಲಿ ಬರ ಪರಿಹಾರ ವಿತರಣೆ ವಿಷಯದಲ್ಲಿ ಷರತ್ತುಗಳನ್ನು ಹಾಕಿ ರೈತರಿಗೆ ತಾರತಮ್ಯ ಮಾಡಲಾಗುತ್ತಿದೆ. ಸರ್ಕಾರ ಮಾನದಂಡ ಮತ್ತು ಷರತ್ತುಗಳಿಂದ ರೈತರನ್ನು ಒಡೆದು ಆಳುವ ನೀತಿಯನ್ನು ಅನುಸರಿಸುತ್ತಿದೆ. ತಕ್ಷಣ ಇದನ್ನು ಕೈ ಬಿಟ್ಟು ಬರ ಪರಿಹಾರವನ್ನು ನೀಡಬೇಕು. ಜಿಲ್ಲೆಯ ಕೆರೆಗಳಿಗೆ ಆದ್ಯತೆಯ ಮೇರೆಗೆ ನೀರು ತುಂಬಿಸಬೇಕು. ಕಾವೇರಿ, ಕಬಿನಿ ನೀರನ್ನು ತಮಿಳುನಾಡಿಗೆ ಬಿಟ್ಟು ಅಚ್ಚುಕಟ್ಟು ಭಾಗದ ರೈತರಿಗೆ ಬೆಳೆ ಬೆಳೆಯಲು ನೀರು ನೀಡದೆ ಬರ ಪರಿಸ್ಥಿತಿಯನ್ನು ಸೃಷ್ಟಿ ಮಾಡಿ ರಾಜ್ಯ ಸರ್ಕಾರ ರೈತರಿಗೆ ದ್ರೋಹ ಮಾಡಿದೆ. ಆದ್ದರಿಂದ ಎಕರೆಗೆ 5 ಸಾವಿರ ರೂಪಾಯಿ ಬೆಳೆ ನಷ್ಟ ಪರಿಹಾರ ನೀಡಬೇಕು. ಹೊಸ ಕೃಷಿ ಪಂಪ್‌ಸೆಟ್ಟುಗಳಿಗೆ ಅಕ್ರಮ ಸಕ್ರಮ ಯೋಜನೆಯನ್ನು ಮತ್ತೆ ಜಾರಿ ಮಾಡಬೇಕು. ಹಾಲು ಉತ್ಪಾದಕರಿಗೆ 10 ರೂಪಾಯಿ ಹೆಚ್ಚುವರಿ ಪ್ರೋತ್ಸಾಹ ಧನ ನೀಡಬೇಕು. ಸಮರ್ಪಕವಾಗಿ ಕೃಷಿ ಪಂಪ್‌ಸೆಟ್‌ಗಳಿಗೆ 10 ಗಂಟೆ ಹಗಲು ವೇಳೆ ವಿದ್ಯುತ್ ನೀಡಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಕಬ್ಬು ಬೆಳೆಗಾರರ ಸಂಘದ ಚಾಮರಾಜನಗರ ಜಿಲ್ಲಾಧ್ಯಕ್ಷ ನಾಗರಾಜು, ರಾಜ್ಯ ಉಪಾಧ್ಯಕ್ಷ ಕೆರೆಹುಂಡಿ ರಾಜಣ್ಣ, ರಾಜ್ಯ ಪ್ರಧಾನ ಕಾರ್ಯದರ್ಶಿ ಮಲೆಯೂರು ಹರ್ಷ, ಮೈಸೂರು ಜಿಲ್ಲಾಧ್ಯಕ್ಷ ಹಾಡ್ಯ ರವಿ, ಉಡಿಗಾಲ ಮಂಜುನಾಥ್ ಸೇರಿದಂತೆ ಹಲವರು ಇದ್ದರು.

ಕೆರೆಯಲ್ಲಿ ನರೇಗಾ ಕಾಮಗಾರಿ, ಪಿಡಿಓ ಕರ್ತವ್ಯಲೋಪಕ್ಕೆ ನಾಗರಿಕರಿಂದ ಪ್ರತಿಭಟನೆ

ಲಕ್ಷಾಂತರ ಸರ್ಕಾರಿ ಹಣ ನಿಯಮ ಮೀರಿ ಬಳಕೆ, ಪಿಡಿಓ ಅಮಾನತಿಗೆ ಆಗ್ರಹ



ನಿಯಮ ಮೀರಿ ನರೇಗಾ ಕಾಮಗಾರಿ ನಡೆಸಿದ ಪಿಡಿಓ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಕೊಳ್ಳೇಗಾಲದ ತಾಪಂ ಕಚೇರಿ ಮುಂಭಾಗ ನಾಗರಿಕರು ಪ್ರತಿಭಟಿಸಿ, ಮನವಿ ಸಲ್ಲಿಸಿದರು.

ಕೊಳ್ಳೇಗಾಲ, ಮೇ 18– ಕೊಳ್ಳೇಗಾಲ ಪಟ್ಟಣ ವ್ಯಾಪ್ತಿಗೆ ಒಳಪಡುವ ಕೆರೆಯೊಂದರಲ್ಲಿ ನರೇಗಾ ಕಾಮಗಾರಿ ನಡೆಸಿ ಲೋಪ ಎಸಗಲಾಗಿದ್ದು, ಈ ಸಂಬಂಧ ಸಿದ್ದಯ್ಯನಪುರ ಪಿಡಿಓ ಅವರನ್ನು ಅಮಾನತುಗೊಳಿಸಬೇಕು ಎಂದು ಆಗ್ರಹಿಸಿದ ನಾಗರಿಕರು, ತಾಪಂ ಮುಂಭಾಗ ಪ್ರತಿಭಟನೆ ನಡೆಸಿದರು.

ಸಿದ್ದಯ್ಯನಪುರ ಗ್ರಾಮ ಪಂಚಾಯಿತಿಯಾಗಿದ್ದು ತಮ್ಮ ವ್ಯಾಪ್ತಿಗೆ ಬರದಿದ್ದರೂ ಸಹಾ ಕೊಳ್ಳೇಗಾಲ ಪಟ್ಟಣದಲ್ಲಿ ನರೇಗಾ ಕಾಮಗಾರಿ ನಡೆಸುವ ಮೂಲಕ ಕರ್ತವ್ಯಲೋಪವನ್ನು ಇಲ್ಲಿನ ಪಿಡಿಓ ಶಿವಮೂರ್ತಿ ಎಸಗಿದ್ದಾರೆ, ಸರ್ಕಾರಿ ಹಣವನ್ನು ಪೋಲು ಮಾಡುವ ಮೂಲಕ ನಿಯಮ ಉಲ್ಲಂಘಿಸಿದ್ದಾರೆ. ಇಲ್ಲಿನ ಕೆರೆಯಲ್ಲಿ ಮಣ್ಣು ತೆಗೆಸಿ ಬಂಡಿದಾರಿ ಮಾಡುವ ಮೂಲಕ ಅನ್ಯರಿಗೆ ಅನುಕೂಲ ಕಲ್ಪಿಸಿದ್ದಾರೆ.

ಭೀಮನಗರದ ಯುವ ಮುಖಂಡ ಸಿದ್ಧಾರ್ಥ, ಉಮೇಶ್ ಮಾತನಾಡಿ, ಪಾಪನ ಕೆರೆಯ ಮಣ್ಣನ್ನು ಎತ್ತುವ ಮೂಲಕ ಲೋಪ ಎಸಗಲಾಗಿದ್ದು, ಸರ್ಕಾರಿ ಹಣ ಪೋಲು ಮಾಡಲಾಗಿದೆ. ತಕ್ಷಣ ಸಂಬಂಧಪಟ್ಟವರು ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಇದಕ್ಕೂ ಮುನ್ನ ಸರ್ಕಾರಿ ಹಣ ನಿಯಮ ಮೀರಿ ಬಳಕೆ ಮಾಡಿಕೊಂಡಿರುವ ಕ್ರಮದ ವಿರುದ್ಧ ಪ್ರತಿಭಟನಾಕಾರರು ಧಿಕ್ಕಾರದ ಘೋಷಣೆ ಕೂಗಿ ಸಂಬಂಧಪಟ್ಟ ಹಿರಿಯ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಈ ಘಟನೆಗೆ ಕಾರಣಕರ್ತರಾದ ತಾಪಂ ಇಓ, ಎಇಇ ಗೋಪಾಲಕೃಷ್ಣ ವಿರುದ್ಧ ಘೋಷಣೆ ಕೂಗುವ ಮೂಲಕ ಪ್ರತಿಭಟನಾಕಾರರು ಕ್ರಮಕ್ಕೆ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಪಿ.ಕೃಷ್ಣರಾಜ್, ಜಗದೀಶ್, ಮಹದೇವ, ಪುಟ್ಟರಾಜು, ರಂಗಸ್ವಾಮಿ, ಕಿರಣ್, ಮೋಹನ್, ಸುರೇಶ್, ಉಮೇಶ, ಅಲ್ಬರ್ಟ್ ಇನ್ನಿತರಿದ್ದರು

ನರೇಗಾ ಕೂಲಿ ಕಾರ್ಮಿಕರ ಆರೋಗ್ಯ ತಪಾಸಣೆ



ಹುಳುಗೆರೆ ಕೆರೆ ಅಭಿವೃದ್ಧಿ ಕಾಮಗಾರಿ ಸ್ಥಳದಲ್ಲಿ 150ಕ್ಕೂ ಹೆಚ್ಚು ನರೇಗಾ ಕೂಲಿ ಕಾರ್ಮಿಕರಿಗೆ ಆರೋಗ್ಯ ತಪಾಸಣೆ ನಡೆಸಲಾಯಿತು.

ಚಾಮರಾಜನಗರ, ಮೇ 18– ಯಳಂದೂರು ತಾಲೂಕಿನ ಯರಗಂಬಳ್ಳಿ ಗ್ರಾಮ ಪಂಚಾಯಿತಿ ವತಿಯಿಂದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೈಗೊಂಡಿರುವ ಹುಳುಗೆರೆ ಕೆರೆ ಅಭಿವೃದ್ಧಿ ಕಾಮಗಾರಿ ಸ್ಥಳದಲ್ಲಿ ಹಾಜರಿದ್ದ ಸುಮಾರು 150ಕ್ಕೂ ಹೆಚ್ಚಿನ ಕೂಲಿ ಕಾರ್ಮಿಕರಿಗೆ ಆರೋಗ್ಯ ತಪಾಸಣೆ ನಡೆಸಲಾಯಿತು.

ಇದೇ ವೇಳೆ ಯರಗಂಬಳ್ಳಿ ಗ್ರಾಪಂ ಅಭಿವೃದ್ಧಿ ಅಧಿಕಾರಿ ಮಂಜುನಾಥ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಉಸಿರಾಟದ ತೊಂದರೆ, ಹೃದಯ ಸಂಬಂಧಿ, ಡೆಂಗ್ಯೂ ಹಾಗೂ ಇತರೆ ಖಾಯಿಲೆಗಳು ಹೆಚ್ಚಾಗಿ ಕಂಡು ಬರುತ್ತಿದ್ದು ಪ್ರತಿಯೊಬ್ಬರು ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು ಎಂದರು.

ನರೇಗಾ ಯೋಜನೆಯಡಿ ಕೆಲಸ ಮಾಡುವ ಕೂಲಿ ಕಾರ್ಮಿಕರಿಗೆ ಕಾಮಗಾರಿ ಸ್ಥಳದಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ ಉಚಿತ ಆರೋಗ್ಯ ತಪಾಸಣೆ ಶಿಬಿರ ಆಯೋಜಿಸಿ ಕಾರ್ಮಿಕರ ಆರೋಗ್ಯದಲ್ಲಿ ಯಾವುದಾದರೂ ವ್ಯತ್ಯಾಸ ಕಂಡುಬಂದಲ್ಲಿ ಮುಂದಿನ ಚಿಕಿತ್ಸೆಗಾಗಿ ಹತ್ತಿರದ ಆರೋಗ್ಯ ಕೇಂದ್ರಕ್ಕೆ ಶಿಫಾರಸ್ಸು ಮಾಡಲಾಗುತ್ತದೆ ಎಂದು ಮಂಜುನಾಥ್ ಅವರು ತಿಳಿಸಿದರು.

ಗ್ರಾಮ ಪಂಚಾಯಿತಿ ಕಚೇರಿಯ ಬಿಲ್ ಕಲೆಕ್ಟರ್ ಇಂದ್ರ ಪ್ರಾಥಮಿಕ ಆರೋಗ್ಯ ಕೇಂದ್ರದ ಶುಶ್ರೂಷಕರು, ನರೇಗಾ ಯೋಜನೆಯ ಕಾಯಕ ಬಂಧು ಹಾಗೂ ಎಲ್‌ಸಿಆರ್‌ಪಿ ಸಹಾಯಕರು ಇದೇ ವೇಳೆ ಇದ್ದರು.

ಮಹದೇವಮ್ಮ ನಿಧನ



ಚಾಮರಾಜನಗರ: ತಾಲೂಕಿನ ಹರವೆ ಗ್ರಾಮದ ನಿವಾಸಿ ಮಹದೇವಮ್ಮ(93) ಶನಿವಾರ ನಿಧನರಾದರು.

ಮೃತರು ಓರ್ವ ಪುತ್ರಿ, ಅಳಿಯ, ಮೊಮ್ಮಕ್ಕಳು, ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ ಗ್ರಾಮದ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬೇಗೂರಲ್ಲಿ ಸರಣಿ ಅಪಘಾತ ; ವಾಹನಗಳು ಜಖಂ





ಬೇಗೂರು, ಮೇ 18– ಗ್ರಾಮದ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಾರಿಗೆ ಬಸ್ ನಿಲ್ದಾಣದ ಮುಂಭಾಗ ಸರಣಿ ಅಪಘಾತ ಸಂಭವಿಸಿ ವಾಹನಗಳು ಜಖಂಗೊಂಡಿರುವ ಘಟನೆ ನಡೆಯಿತು.

ಮೈಸೂರು ಕಡೆಯಿಂದ ಬರುತ್ತಿದ್ದ ಬೊಲೆರೋ ಪಿಕಪ್ ವಾಹನ ಮತ್ತು ಗುಂಡ್ಲುಪೇಟೆಯಿಂದ ಬೇಗೂರು ಬಸ್ ನಿಲ್ದಾಣಕ್ಕೆ ತಲುಪುತ್ತಿದ್ದ ಸಾರಿಗೆ ಬಸ್ ಹಾಗೂ ಗುಂಡ್ಲುಪೇಟೆಯಿಂದ ಮೈಸೂರು ಕಡೆಗೆ ತೆರಳುತ್ತಿದ್ದ ಇನೋವಾ ಕಾರ್ ನಡುವೆ ಡಿಕ್ಕಿ ಸಂಭವಿಸಿತು.

ಮೈಸೂರು ಕಡೆಯಿಂದ ಬಂದ ಬೊಲೆರೋ ಪಿಕಪ್ ವಾಹನ ಬಸ್ ನಿಲ್ದಾಣ ಕಡೆಗೆ ತೆರಳುತ್ತಿದ್ದ ಸಾರಿಗೆ ಬಸ್‌ಗೆ ಹಿಂಬದಿ ಡಿಕ್ಕಿಯಾಗಿ ರಸ್ತೆ ಎಡಭಾಗದಲ್ಲಿ ಬರುತ್ತಿದ್ದ ಇನ್ನೋವಾ ಕಾರಿಗೆ ಡಿಕ್ಕಿ ಆಯ್ತು. ವಾಹನಗಳು ಜಖಂಗೊಂಡರೆ ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ ಈ ಅಪಘಾತದಿಂದ ರಾಷ್ಟ್ರೀಯ ಹೆದ್ದಾರಿ 766 ರಲ್ಲಿ ಕೆಲಕಾಲ ಸಂಚಾರ ಅಸ್ತವ್ಯಸ್ತವಾಗಿತ್ತು.

ಪ್ರಜ್ವಲ್‌ಗೆ ಬಂಧನ ವಾರೆಂಟ್ ಜಾರಿ

ರೆಡ್ ಕಾರ್ನರ್ ನೋಟೀಸ್ ಜಾರಿಗೆ ಸಿದ್ಧತೆ



ಬೆಂಗಳೂರು, ಮೇ 18– ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರದ್ದೆನ್ನಲಾದ ಅಶ್ಲೀಲ ವಿಡಿಯೋ ಪೆನ್‌ಡ್ರೈವ್ ಮೂಲಕ ವೈರಲ್ ಆದ ಬಳಿಕ ಅವರ ಮೇಲೆ ಹಲವು ಪೊಲೀಸ್ ಠಾಣೆಗಳಲ್ಲಿ ಲೈಂಗಿಕ ಅತ್ಯಾಚಾರ ಕೇಸ್‌ಗಳು ದಾಖಲಾಗಿವೆ. ಇದರ ಬಗ್ಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ತನಿಖೆ ಮಾಡುತ್ತಿದ್ದರೂ, ಲೋಕಸಭಾ ಚುನಾವಣೆ ಮತದಾನದ ದಿನ(ಏ.26) ನಾಪತ್ತೆಯಾದ ಸಂಸದ ಪ್ರಜ್ವಲ್ ರೇವಣ್ಣ 22 ದಿನಗಳು ಕಳೆದರೂ ಪತ್ತೆಯಾಗಿಲ್ಲ. ವಿಚಾರಣೆಗೆ ಹಾಜರಾಗದ ಪ್ರಜ್ವಲ್ ವಿರುದ್ಧ ಈಗ ನ್ಯಾಯಾಲಯ ಅರೆಸ್ಟ್ ವಾರೆಂಟ್ ಜಾರಿಗೊಳಿಸಿದೆ.

ಈ ಪ್ರಕರಣ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗಿದೆ. ಪ್ರಜ್ವಲ್ ರೇವಣ್ಣ ವಿರುದ್ಧ ಲೈಂಗಿಕ ದೌರ್ಜನ್ಯಕ್ಕೊಳಗಾದ ಸಂತ್ರಸ್ತ ಮಹಿಳೆಯರು ಕೂಡ ದೂರು ಕೊಡಲು ನಿರಾಕರಿಸಿದ್ದಾರೆ. ಆದರೆ, ಈವರೆಗೆ ಧೈರ್ಯ ಮಾಡಿ ಕೆಲವು ಸಂತ್ರಸ್ತ ಮಹಿಳೆಯರು ದೂರು ದಾಖಲಿಸಿದ್ದಾರೆ. ಈ ಆಧಾರದಲ್ಲಿ ವಿಚಾರಣೆಗೆ ಹಾಜರಾಗುವಂತೆ ಸಂಸದ ಪ್ರಜ್ವಲ್ ರೇವಣ್ಣಗೆ ನೋಟಿಸ್ ನೀಡಿದರೂ ಹಾಜರಾಗಿಲ್ಲ.

ತಲೆಮರೆಸಿಕೊಂಡು 22 ದಿನ: ಇನ್ನು ಸಂಸದ ಪ್ರಜ್ವಲ್ ರೇವಣ್ಣ ನಾಪತ್ತೆಯಾಗಿ ಈವರೆಗೆ 22 ದಿನಗಳು ಕಳೆದಿವೆ. ಎಸ್‌ಐಟಿ ವತಿಯಿಂದ ಲೈಂಗಿಕ ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯ ಕೇಸ್ ಕುರಿತು ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿಗೊಳಿಸಿದರೂ ಈವರೆಗೆ ಹಾಜರಾಗಿಲ್ಲ. ನಾನು ವಿದೇಶದಲ್ಲಿದ್ದೇನೆ, ವಿಚಾರಣೆಗೆ ಹಾಜರಾಗಲು ಒಂದು ವಾರ ಕಾಲಾವಕಾಶ ಕೊಡಿ ಎಂದು ಸಂಸದ ಪ್ರಜ್ವಲ್ ರೇವಣ್ಣ ಮನವಿ ಮಾಡಿದ್ದರು. ಇದಾದ ನಂತರ, ನಾಲ್ಕೈದು ಬಾರಿ ಭಾರತಕ್ಕೆ ಮರಳಲು ಟಿಕೆಟ್ ಬುಕ್ ಮಾಡಿದ್ದರೂ, ಪುನಃ ಅದನ್ನು ರದ್ದುಗೊಳಿಸಿದ್ದಾರೆ. ಜೊತೆಗೆ, ಪ್ರಜ್ವಲ್ ರೇವಣ್ಣನನ್ನು ವಶಕ್ಕೆ ಪಡೆಯಲು ಎಸ್‌ಐಟಿ ಬ್ಲೂ ಕಾರ್ನರ್ ನೋಟೀಸ್ ಹೊರಡಿಸಿತ್ತು. ಆದರೆ, ಪ್ರಜ್ವಲ್ ಇದಕ್ಕೂ ಕ್ಯಾರೇ ಎಂದಿಲ್ಲ.

ಹೀಗಾಗಿ, ಲೈಂಗಿಕ ಪ್ರಕರಣಗಳ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ಅರೆಸ್ಟ್ ವಾರೆಂಟ್ ಜಾರಿಗೊಳಿಸಲು ಕೋರ್ಟ್‌ಗೆ ಮನವಿ ಮಾಡಿತ್ತು. ಈ ಹಿನ್ನೆಲೆಯಲ್ಲಿ ವಿದೇಶಕ್ಕೆ ಹೋಗಿ ತಲೆಮರೆಸಿಕೊಂಡಿರುವ ಪ್ರಜ್ವಲ್‌ನನ್ನು ಬಂಧಿಸಿ ದೇಶಕ್ಕೆ ಕರೆತರಲು ಅನುಕೂಲ ಆಗುವಂತೆ 42ನೇ ಎಸಿಎಂಎಂ ಕೋರ್ಟ್‌ನಿಂದ ಅರೆಸ್ಟ್ ವಾರೆಂಟ್ ಜಾರಿಗೊಳಿಸಿ ನ್ಯಾಯಾಧೀಶ ಜೆ.ಪ್ರೀತ್ ಆದೇಶ ಹೊರಡಿಸಿದ್ದಾರೆ. ಇನ್ನು ಅರೆಸ್ಟ್ ವಾರೆಂಟ್ ಮೇರೆಗೆ ಎಸ್‌ಐಟಿ ತಂಡದಿಂದ ಪ್ರಜ್ವಲ್ ಬಂಧಿಸಲು ಜಾಗತಿಕ ಮಟ್ಟದಲ್ಲಿ ಕಾರ್ಯಾಚರಣೆ ಮಾಡಲು ಸಿದ್ಧತೆ ಮಾಡಿಕೊಳ್ಳಲಿದೆ.

ರೆಡ್ ಕಾರ್ನರ್ ನೋಟೀಸ್ ಜಾರಿಗೆ ಸಿದ್ಧತೆ: ಇನ್ನು ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಬಂಧಿಸಲು ಅರೆಸ್ಟ್ ವಾರೆಂಟ್ ಜಾರಿಯಾದ ಬೆನ್ನಲ್ಲಿಯೇ ಎಸ್‌ಐಟಿಗೆ ಹೆಚ್ಚು ಬಲ ಬಂದಿದೆ. ಈಗ ಅರೆಸ್ಟ್ ವಾರೆಂಟ್ ಆಧಾರದಲ್ಲಿ ಕೇಂದ್ರದ ಗೃಹ ಸಚಿವಾಲಯದ ನೆರವಿನೊಂದಿಗೆ ರೆಡ್ ಕಾರ್ನರ್ ನೋಟೀಸ್ ಜಾರಿಗೊಳಿಸಲು ಮುಂದಾಗಿದೆ.

ವಕೀಲ ದೇವರಾಜೇಗೌಡ ಮತ್ತೆರಡು ದಿನ ಎಸ್‌ಐಟಿ ಕಸ್ಟಡಿಗೆ



ಹಾಸನ, ಮೇ 18– ಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೊ ವೈರಲ್ ಪ್ರಕರಣದಲ್ಲಿ ಎಂಟನೇ ಆರೋಪಿಯಾಗಿರುವ ವಕೀಲ ದೇವರಾಜೇಗೌಡ ಅವರನ್ನು ಮತ್ತೆ ಎರಡು ದಿನ ಪೊಲೀಸ್ ಕಸ್ಟಡಿಗೆ ನೀಡಿ 5ನೇ ಅಧಿಕ ಸಿವಿಲ್ ನ್ಯಾಯಾಲಯ ಮತ್ತು ಜೆಎಂಎಫ್‌ಸಿ ನ್ಯಾಯಾಲಯವು ಆದೇಶಿಸಿದೆ.

ಏಪ್ರಿಲ್ 23 ರಂದು ಹಾಸನ ನಗರದ ಸೈಬರ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಎಫ್‌ಐಆರ್‌ನಲ್ಲಿ 8ನೇ ಆರೋಪಿಯಾಗಿ ದೇವರಾಜೇಗೌಡ ಅವರ ಹೆಸರು ಸೇರ್ಪಡೆ ಮಾಡಲಾಗಿದೆ. ಹೀಗಾಗಿ ಮಹಿಳೆ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ದೇವರಾಜೇಗೌಡ ಅವರನ್ನು ವಿಚಾರಣೆಗಾಗಿ ಶುಕ್ರವಾರ ಒಂದು ದಿನದ ಮಟ್ಟಿಗೆ ಎಸ್‌ಐಟಿ ವಶಕ್ಕೆ ಪಡೆಯಲಾಗಿತ್ತು.

ದೇವರಾಜೇಗೌಡ ಅವರ ಕಸ್ಟಡಿ ಅವಧಿ ಮುಕ್ತಾಯವಾಗಿದ್ದರಿಂದ ಪುನಃ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದ ಎಸ್‌ಐಟಿ ಅಧಿಕಾರಿಗಳು ಮತ್ತೆ ಎರಡು ದಿನ ಕಸ್ಟಡಿಗೆ ಕೇಳಿದ್ದರು. ಹೀಗಾಗಿ ಮೇ 20ರ ಸಂಜೆ ಐದು ಗಂಟೆಗೆ ಕೋರ್ಟ್ ಮುಂದೆ ಹಾಜರು ಪಡಿಸುವಂತೆ ನ್ಯಾಯಾಲಯ ಸೂಚಿಸಿ, ಎರಡು ದಿನ ಕಸ್ಟಡಿಯನ್ನು ಮುಂದುವರಿಸಿ ಆದೇಶಿಸಿದೆ.

ಒಂದನೇ ಪುಟದಿಂದ

ಅವರಿಗೆ ಚಿಕಿತ್ಸೆ ಕೊಡಿಸಬೇಕು

ಅವರು ಒಬ್ಬ ಮಾನಸಿಕ ಅಸ್ವಸ್ಥ. ಅವರಿಗೆ ಚಿಕಿತ್ಸೆ ಕೊಡಿಸುವ ಅಗತ್ಯ ಇದೆ. ಇಂತಹ ಆಧಾರ ರಹಿತ ಆರೋಪಗಳನ್ನು ಜೈಲಿನಲ್ಲಿರುವವರು ಹೇಗೆ ಮಾಡುತ್ತಾರೆ ಎಂದು ತಿರುಗೇಟು ನೀಡಿದ್ದಾರೆ.

ಗೌಡರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುತ್ತೀರಾ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಮಾನಸಿಕವಾಗಿ ಅಸ್ವಸ್ಥರಾಗಿರುವ ವ್ಯಕ್ತಿಯ ಬಗ್ಗೆ ನಾನು ಯಾವುದೇ ಹೇಳಿಕೆ ನೀಡಲು ಅಥವಾ ಮಾತನಾಡಲು ಬಯಸುವುದಿಲ್ಲ. ಅವರಿಗೆ ಉತ್ತಮ ಚಿಕಿತ್ಸೆ ಕೊಡಿಸುವಂತೆ ಮನವಿ ಮಾಡುತ್ತೇನೆ ಎಂದರು. ಲೈಂಗಿಕ ದೌರ್ಜನ್ಯ ಪ್ರಕರಣದ ಸಂತ್ರಸ್ತ ಮಹಿಳೆಯರಿಗೆ ನ್ಯಾಯ ದೊರಕಿಸಿಕೊಡಲು ನಮ್ಮ ಸರ್ಕಾರ ಬದ್ಧವಾಗಿದೆ ಎಂದು ಪ್ರತಿಪಾದಿಸಿದ ಶಿವಕುಮಾರ್, ವಿಶೇಷ ತನಿಖಾ ತಂಡ(ಎಸ್‌ಐಟಿ) ನಡೆಸುತ್ತಿರುವ ತನಿಖೆಯ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದರು.

ಅದಕ್ಕೆ ನಮ್ಮ ಆಕ್ಷೇಪವಿಲ್ಲ

ಅವನು ತಪ್ಪು ಮಾಡಿದ್ದರೆ ಶಿಕ್ಷೆಗೆ ಒಳಪಡಲಿ ಎಂದರು. ಪ್ರಜ್ವಲ್ ಮತ್ತು ರೇವಣ್ಣ ಪ್ರಕರಣದ ನಂತರ ಇದೇ ಮೊದಲ ಬಾರಿಗೆ ಬಹಿರಂಗವಾಗಿ ಕಾಣಿಸಿಕೊಂಡು, ಪ್ರತಿಕ್ರಿಯಿಸಿದ ದೇವೇಗೌಡರು, ಸುದ್ದಿಗಾರರ ಪ್ರಶ್ನೆಗಳಿಗೂ ಚುಟುಕಾಗಿ ಉತ್ತರಿಸಿದರು. ರೇವಣ್ಣ ಪ್ರಕರಣವನ್ನು ಸೃಷ್ಟಿಸಿ ನಮ್ಮ ವಿರುದ್ಧ ರಾಜಕೀಯ ಸೇಡು ತೀರಿಸಿಕೊಳ್ಳಲು ಹೊರಟಿದ್ದಾರೆ. ಅವರು ಯಾರೆಂಬುದು ನಮಗೆ ಗೊತ್ತಿದೆ. ಆ ಬಗ್ಗೆ ಈಗ ಮಾತನಾಡುವುದಿಲ್ಲ. ಮುಂದೆ ಸಮಯ ಬಂದಾಗ ತಿಳಿಸುತ್ತೇನೆ ಎಂದರು. ರೇವಣ್ಣ ಪ್ರಕರಣ ನ್ಯಾಯಾಲಯದಲ್ಲಿ ಇರುವುದರಿಂದ ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ಪ್ರಜ್ವಲ್ ಪ್ರಕರಣವನ್ನು ನಾವು ವಹಿಸಿಕೊಂಡು ಮಾತನಾಡುವುದಿಲ್ಲ. ಆದರೆ ರೇವಣ್ಣ ಪ್ರಕರಣ ಒಂದು ಕಟ್ಟುಕತೆ.

ಪ್ರಜ್ವಲ್ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಕುಟುಂಬದ ಪರವಾಗಿ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು ಪ್ರತಿಕ್ರಿಯೆ ನೀಡಿದ್ದಾರೆ. ಇನ್ನು ರೇವಣ್ಣ ವಿಷಯ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ. ನಾನು ಆ ಬಗ್ಗೆ ಹೆಚ್ಚು ಮಾತನಾಡುವುದು ಸೂಕ್ತ ಅಲ್ಲ ಎಂದರು. ಪ್ರಜ್ವಲ್ ಹೊರಗೆ ಹೋಗಿದ್ದಾನೆ. ಆತನ ವಿರುದ್ಧ ಕ್ರಮ ಕೈಗೊಳ್ಳುವುದು ಸರ್ಕಾರದ ಜವಾಬ್ದಾರಿ. ಘಟನೆ ಬಗ್ಗೆ ಈ ನೆಲದ ಕಾನೂನಿನ ಚೌಕಟ್ಟಿನಡಿ ಏನು ಕ್ರಮ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳಲಿ. ಅದಕ್ಕೆ ನಮ್ಮ ಆಕ್ಷೇಪ ಇಲ್ಲ. ಪ್ರಜ್ವಲ್ ಪ್ರಕರಣದಲ್ಲಿ ಅನೇಕ ಮಂದಿ ಇದ್ದಾರೆ. ನಾನು ಅವರ ಹೆಸರುಗಳನ್ನು ಹೇಳುವಂತಹವನಲ್ಲ. ಅನ್ಯಾಯಕ್ಕೆ ಒಳಗಾಗಿರುವ ಸಂತ್ರಸ್ತೆಯರಿಗೆ ಪರಿಹಾರ ನೀಡಬೇಕು. ಈ ಎಲ್ಲಾ ವಿಚಾರಗಳ ಬಗ್ಗೆ ಕುಮಾರಸ್ವಾಮಿ ಬಿಡಿಸಿ.., ಬಿಡಿಸಿ ಹೇಳಿದ್ದಾರೆ.

ಹೋರಾಟದ ಛಲವಿದೆ: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ವಕೀಲ ದೇವರಾಜೇಗೌಡ ಮಾಡಿರುವ ಆರೋಪಕ್ಕೆ ನಾನು ಪ್ರತಿಕ್ರಿಯೆ ಕೊಡುವುದಿಲ್ಲ. ಎಲ್ಲಾ ವಿಚಾರಗಳ ಬಗ್ಗೆ ಕುಮಾರಸ್ವಾಮಿ ಉತ್ತರ ನೀಡಿದ್ದಾರೆ. ನಮ್ಮ ವಿರುದ್ಧ ಎಂತಹ ಆರೋಪ ಬಂದರೂ ನಮಗೆ ಹೋರಾಟ ಮಾಡುವ ಛಲ ಇದೆ. ಜೂನ್ 4ರಂದು ಲೋಕಸಭಾ ಚುನಾವಣೆ ಫಲಿತಾಂಶ ಹೊರಬೀಳುತ್ತದೆ. ಆ ನಂತರ ಸಾಕಷ್ಟು ವಿಷಯಗಳ ನಿಮ್ಮ ಮುಂದಿಡುತ್ತೇನೆ ಎಂದರು.

12,192 ಕೇಸ್ ದಾಖಲು

ಅಳವಡಿಕೆ ಮಾಡಿದ್ದಾರೆ. ರಾಜ್ಯ ರಸ್ತೆ ಸುರಕ್ಷತಾ ADGP ಅಲೋಕ್ ಕುಮಾರ್ ಆದೇಶದ ಮೇರೆಗೆ ಸ್ವಯಂಚಾಲಿತ ನಂಬರ್ ಪ್ಲೇಟ್ ಗುರುತಿಸುವ ಕ್ಯಾಮೆರಾವನ್ನು ಅಳವಡಿಕೆ ಮಾಡಲಾಗಿದೆ. ವಾಹನದ ನಂಬರ್‌ನಿಂದ RTO ಸಂಪರ್ಕ ಪಡೆದು ಮೊಬೈಲಿಗೆ ದಂಡ ಪಾವತಿಸುವಂತೆ ನೋಟಿಸ್ ಬರುತ್ತದೆ. ಎಕ್ಸ್‌ಪ್ರೆಸ್‌ವೇನಲ್ಲಿ ಗರಿಷ್ಠ ವೇಗದ ಮಿತಿಯನ್ನು ಗಂಟೆಗೆ 100 ಕಿ.ಮೀ. ನಿಗದಿ ಪಡಿಸಲಾಗಿದೆ. ಅಷ್ಟೇ ಅಲ್ಲದೇ ರೆಡಾರ್ ಗನ್ ಮೂಲಕ ಕಾರ್ಯಾಚರಣೆ ನಡೆಸಲಾಗುತ್ತಿದೆ. ವೇಗ ಮಿತಿ ದಾಟಿದರೆ 1000 ರೂ. ದಂಡ ಹಾಗೂ ಡಿಎಲ್ ರದ್ದುಪಡಿಸುವ ಕಠಿಣ ಕ್ರಮಕ್ಕೆ ಪೊಲೀಸರು ಮುಂದಾಗಿದ್ದಾರೆ. ನಿಯಮ ಉಲ್ಲಂಘನೆಯ ಫೋಟೋ ಹಾಗೂ ನೋಟಿಸ್ ನೀಡಿ, ದಂಡ ವಸೂಲಿ ಮಾಡಲಾಗುತ್ತಿದೆ.

ಬಿವಿಬಿಯಲ್ಲಿ ವಿದ್ವಾನ್ ಶಂಕರ್ ಶಾನಭಾಗ್‌ರ 'ಕಾವ್ಯ ಸಂಗೀತ' ಲಹರಿ

ನೆರೆದ ಸಂಗೀತಾಸಕ್ತರಿಗೆ ವಿಶೇಷ ಅನುಭವ ಸಿಂಚನ





ಮೈಸೂರಿನ ವಿಜಯನಗರದಲ್ಲಿರುವ ಭಾರತೀಯ ವಿದ್ಯಾಭವನದ ಸಭಾಂಗಣದಲ್ಲಿ ಶನಿವಾರ ನಡೆದ 128ನೇ ಸಾಂಸ್ಕೃತಿಕ ಕಾರ್ಯಕ್ರಮವನ್ನು 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರು ಹಾಗೂ ಭಾರತೀಯ ವಿದ್ಯಾಭವನ (ಬಿವಿಬಿ)ದ ಅಧ್ಯಕ್ಷರೂ ಆದ ಡಾ.ಕೆ.ಬಿ.ಗಣಪತಿ ಅವರು ಉದ್ಘಾಟಿಸಿದರು. ಬಿವಿಬಿ ಆಡಳಿತ ಮಂಡಳಿಯ ಸದಸ್ಯೆ ಡಾ.ಜೆ.ವಿ.ಗಾಯತ್ರಿ, ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ವಿದ್ವಾನ್ ಶಂಕರ್ ಶಾನಭಾಗ್, ಗೌರವ ಖಜಾಂಚಿ ಪ್ರೊ.ಎ.ಟಿ.ಭಾಷ್ಯಂ, ಆಡಳಿತ ಮಂಡಳಿ ಸದಸ್ಯ ವಿಂಗ್‌ಕಮಾಂಡರ್(ನಿ) ಎಸ್.ಸಿ.ಬಾಲಸುಬ್ರಮಣ್ಯಂ ಹಾಗೂ ಆಡಳಿತಾಧಿಕಾರಿ ಎಸ್.ಆರ್.ರವಿಕುಮಾರ್ ಉಪಸ್ಥಿತರಿದ್ದರು. ಮತ್ತೊಂದು ಚಿತ್ರದಲ್ಲಿ ವಿದ್ವಾನ್ ಶಂಕರ್ ಶಾನಭಾಗ್ ಅವರ ಕಾವ್ಯಸಂಗೀತ'ದ ಗಾನಲಹರಿ.

ಮೈಸೂರು, ಮೇ 18(ಎಸ್‌ಬಿಡಿ)– ಭಾರತೀಯ ವಿದ್ಯಾಭವನ(ಬಿವಿಬಿ) ಹಾಗೂ ಇನ್ಫೋಸಿಸ್ ಪ್ರತಿಷ್ಠಾನದ ಸಹಯೋಗದಲ್ಲಿ ಮೈಸೂರಿನ ಬಿವಿಬಿ ಸಭಾಂಗಣದಲ್ಲಿ ಶನಿವಾರ ನಡೆದ 128ನೇ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ, ವಿದ್ವಾನ್ ಶಂಕರ್ ಶಾನಭಾಗ್ ಅವರ 'ಕಾವ್ಯ ಸಂಗೀತ' ಪ್ರಸ್ತುತಿ ನೆರೆದಿದ್ದವರ ಹೃನ್ಮನ ತಣಿಸಿತು.

ರಘುನಾಥ ಅವರ ತಬಲ ವಾದನ, ಷಣ್ಮುಗ ಸಜ್ಜ ಅವರ ಕೀಬೋರ್ಡ್ ಹಾಗೂ ಗುರುದತ್ ಹುಣಸೂರು ಅವರ ರಿದಂ ಪ್ಯಾಡ್‌ನ ವಾದ್ಯ ಸಹಕಾರದೊಂದಿಗೆ ಕಾವ್ಯ, ವಚನ, ಜಾನಪದ, ಭಾವಗೀತೆ, ದೇಶಭಕ್ತಿ ಗೀತೆ, ತತ್ವಪದ, ದಾಸರಪದ ಹೀಗೆ ವಿವಿಧ ಪ್ರಾಕಾರದ ಸಾಹಿತ್ಯವನ್ನು ತಮ್ಮ ಸುಮಧುರ ಕಂಠದಲ್ಲಿ ಸುಶ್ರಾವ್ಯವಾಗಿ ಹಾಡುವುದರೊಂದಿಗೆ ಸಾಹಿತ್ಯದ ತಿರುಳನ್ನೂ ಸಂಕ್ಷಿಪ್ತವಾಗಿ ತಿಳಿಸಿದರು.

ಕುಮಾರವ್ಯಾಸ ಆಡಿದನೆಂದರೆ ಕಲಿಯುಗ ದ್ವಾಪರವಾಗುವುದು. ಗಮಕ ಕಲೆ ನಶಿಸಿಹೋಗುತ್ತಿರುವ ಈ ಕಾಲಘಟ್ಟದಲ್ಲಿ ಕುಮಾರವ್ಯಾಸರ ಕೃತಿಯಿಂದಲೇ ಕಾರ್ಯಕ್ರಮ ಆರಂಭಿಸೋಣ ಎಂದು 'ಗಜಮುಖನೆ ಏಕದಂತನೆ....' ಪ್ರಾರ್ಥನೆ ಹಾಡಿದರು. ಬಳಿಕ ಮೈಸೂರು ಅನಂತ ಸ್ವಾಮಿ ಅವರು ರಾಗಸಂಯೋಜಿಸಿ ಹಾಡಿರುವ ರಾಷ್ಟ್ರಕವಿ ಕುವೆಂಪು ಅವರ 'ಓಂ ಸಚ್ಚಿದಾನಂದ ತ್ರಿತ್ವ ಮುಖವಾದ ಪರಬ್ರಹ್ಮದಲ್ಲಿ...' ಕಾವ್ಯವನ್ನು ಸುಶ್ರಾವ್ಯವಾಗಿ ಪ್ರಸ್ತುತಪಡಿಸಿದರು.

ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರು ದೊಡ್ಡ ಕ್ರಾಂತಿ ಹುಟ್ಟುಹಾಕಿದರು. ಸಮಾಜದ ಅಂಕುಡೊಂಕು ತಿದ್ದುವ ಪ್ರಾಮಾಣಿಕ ಪ್ರಯತ್ನ ಮಾಡಿದ ಅವರನ್ನು ಪ್ರಸ್ತುತ ಜಯಂತಿ ಆಚರಣೆಗಷ್ಟೇ ಸೀಮಿತಗೊಳಿಸಿದ್ದೇವೆ. ಅವರ ವಚನಗಳನ್ನು ಅರ್ಥಮಾಡಿಕೊಂಡು ಜೀವನದಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನ ಮಾಡಿಲ್ಲ ಎಂದು ಬೇಸರ ವ್ಯಕ್ತಪಡಿಸಿ, 'ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ...' ವಚನ ವನ್ನು ಲಯಬದ್ಧವಾಗಿ ಹಾಡಿದರು.

ದಾರ್ಶನಿಕರು, ಸಂತರು ಹೆಣ್ಣು, ಮಣ್ಣು ಹೊನ್ನನ್ನು ಮಾಯೆ ಎಂದಿದ್ದಾರೆ. ಆದರೆ ವಚನಕಾರರಾದ ಅಲ್ಲಮಪ್ರಭುಗಳು ಈ ಮೂರೂ ಮಾಯೆಯಲ್ಲ ಎಂಬ ಅದ್ಭುತ ಚಿಂತನೆಯನ್ನು ಪ್ರಚುರಪಡಿಸಿದ್ದಾರೆ. ಹೆಣ್ಣು, ಮಣ್ಣು, ಹೊನ್ನು ಮಾಯೆಯಲ್ಲ, ಮನದ ಮುಂದಣ ಆಸೆಯೇ ಮಾಯೆ ಎಂದಿದ್ದಾರೆ ಎಂದು ತಿಳಿಸಿದ ಶಂಕರ್ ಶಾನಭಾಗ್, ಅಲ್ಲಮಪ್ರಭುಗಳ 'ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ, ಅವು ಜಗಕ್ಕಿಕ್ಕಿದ ವಿಧಿ' ವಚನವನ್ನು ಹಾಡಿ, ಕೇಳುಗರ ಮನಮುಟ್ಟಿಸಿದರು.

ವಚನಕಾರರ ನಂತರ ಸಾರಸ್ವತ ಲೋಕವನ್ನು ಮುನ್ನಡೆಸಿದ್ದು ಹರಿದಾಸರು. ಇವರು ಆಧ್ಯಾತ್ಮ ಹಾಗೂ ಮಧ್ವ ಸಿದ್ಧಾಂತ ಸಾರಿದ್ದಾರೆಂಬ ತಪ್ಪು ಕಲ್ಪನೆ ಇದೆ. ಆದರೆ ಅವರು ಹೇಗೆ ಬದುಕಬೇಕು, ನಡೆ, ನುಡಿ, ವಿಚಾರ ಹೇಗಿರಬೇಕು. ಹೇಗೆ ತಪ್ಪುಗಳನ್ನು ತಿದ್ದಿಕೊಳ್ಳಬೇಕು ಎಂಬುದನ್ನು ಸರಳವಾಗಿ ತಿಳಿಸಿಕೊಟ್ಟಿದ್ದಾರೆ. ಹರಿದಾಸರ ಸಾಹಿತ್ಯ ಕನ್ನಡ ನಾಡಿನ ಪುಣ್ಯ. ಬೆಂಗಳೂರು– ಹಾಸನ ರಸ್ತೆಯಲ್ಲೇ ಮೂವತ್ತಕ್ಕೂ ಹೆಚ್ಚು ವೃದ್ಧಾಶ್ರಮಗಳಿವೆ. ಪೋಷಕರಲ್ಲಿ ಶಕ್ತಿ ಕಡಿಮೆ ಆಗುತ್ತಿದ್ದಂತೆ ಅವರನ್ನು ವೃದ್ಧಾಶ್ರಮಕ್ಕೆ ಸೇರಿಸುತ್ತಾರೆ. ಪುರಂದರ ದಾಸರ ಸಾಹಿತ್ಯ ತಿಳಿದರೆ ಎಷ್ಟೋ ಮಂದಿ ಪರಿವರ್ತನೆಯಾಗಬಹುದು ಎಂದು 'ಸ್ನಾನವ ಮಾಡಿರೊ ಜ್ಞಾನ ತೀರ್ಥದಲ್ಲಿ, ನಾನು ನೀನೆಂಬ ಅಹಂಕಾರವ ಬಿಟ್ಟು, ತಂದೆ ತಾಯಿಗಳ ಸೇವೆ ಒಂದು ಸ್ನಾನ, ಬಂಧುದುಮರ ಬಿಡಿಸಲೊಂದು ಸ್ನಾನ, ಇಂದಿರೇಶನ ಧ್ಯಾನವೆ ಗಂಗಾ ಸ್ನಾನ' ರಚನೆಯನ್ನು ಮನೋಜ್ಞವಾಗಿ ಹಾಡಿದರು.

ಕೃಷ್ಣನ ಸ್ಮರಣೆ: ವೇದಿಕೆಯಲ್ಲಿ ಕಲಾವಿದರ ವಿದ್ವತ್ತು ಪ್ರದರ್ಶನಕ್ಕಿಂತ ಸಾಹಿತ್ಯದ ಹೂರಣವನ್ನು ಕೇಳುಗರ ಮನಮುಟ್ಟಿಸುವುದು ಬಹಳ ಮುಖ್ಯ. ಈ ನಿಟ್ಟಿನಲ್ಲಿ ಕೃಷ್ಣ ಎನ್ನುವ ಮೂಲಕ ಎಲ್ಲರೂ ಜೊತೆಗೂಡಬೇಕು ಎಂದು ಮನವಿ ಮಾಡಿದ ಅವರು, 'ನರಜನ್ಮ ಬಂದಾಗ, ನಾಲಿಗೆ ಇರುವಾಗ ಕೃಷ್ಣ ಎನಬಾರದೇ...' ಎಂದು ಭಕ್ತಿಪೂರಕವಾಗಿ ಹಾಡಿದರು. ನಡುವೆ ನೆರೆದಿದ್ದವರೆಲ್ಲಾ ಕೃಷ್ಣ.. ಕೃಷ್ಣ ಎಂದು ಸ್ಮರಣೆ ಮಾಡಿದ್ದು ವಿಶೇಷವಾಗಿತ್ತು. ಹೀಗೆ ಹತ್ತಾರು ವೈವಿಧ್ಯಮಯ ಅರ್ಥಗರ್ಭಿತ ಗೀತೆಗಳನ್ನೊಳಗೊಂಡ 'ಕಾವ್ಯ ಸಂಗೀತ' ಕೇಳುಗರಿಗೆ ಹೊಸ ಅನುಭವ ನೀಡಿತು.

ಸಾಹಿತ್ಯ ತಲುಪಿಸುವ ಮಾಧ್ಯಮ ಸಂಗೀತ...

ಕಲಾವಿದರು ಸಾಹಿತ್ಯವನ್ನು ಅರ್ಥ ಮಾಡಿಸುವ ಪ್ರಯತ್ನ ನಡೆಸಿರುವುದು ಬಹಳ ಅಪರೂಪ. ಕೇಳುಗರೂ ಸಹ ಹೇಗೆ ಹಾಡುತ್ತಾರೆ ಎಂದಷ್ಟೇ ನೋಡುತ್ತಾರೆಯೇ ವಿನಃ ಏನು ಹಾಡುತ್ತಿದ್ದಾರೆ ಎಂದು ಅರ್ಥಮಾಡಿಕೊಳ್ಳುವುದಿಲ್ಲ. ಹಾಗಾಗಿ ಸಂಗೀತದಲ್ಲಿ ಸಾಹಿತ್ಯ ಮರೆಯಾಗುತ್ತಿದೆ. ಸಂಗೀತ, ಸಾಹಿತ್ಯವನ್ನು ತಲುಪಿಸುವ ಮಾಧ್ಯಮ. ಜನಸಾಮಾನ್ಯರಿಗೆ ಶಿಕ್ಷಣ ನೀಡುವ ಉದ್ದೇಶ ಮುಖ್ಯವಾಗಬೇಕು. ಆಗ ದೇಶದ ಚಿತ್ರಣವೇ ಬದಲಾಗುತ್ತದೆ. -ವಿದ್ವಾನ್ ಶಂಕರ್ ಶಾನಭಾಗ್

ಯಾರ ಒತ್ತಡಕ್ಕೂ ಮಣಿಯದೆ ಹಿತ ಕಾಯಬೇಕು

ಸರ್ವೆ ಇಲಾಖೆ ಪ್ರಾದೇಶಿಕ ಜಂಟಿ ನಿರ್ದೇಶಕ ಪ್ರಸಾದ್ ವಿ.ಕುಲಕರ್ಣಿ ಸಲಹೆ



ಮೈಸೂರಿನ ಸರ್ವೆ ಕಚೇರಿಯಲ್ಲಿ ನಡೆದ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಅಧೀಕ್ಷಕರ ಹುದ್ದೆಯಿಂದ ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಹುದ್ದೆಗೆ ಬಡ್ತಿ ಪಡೆದು ಸುಳ್ಯಗೆ ವರ್ಗಾವಣೆಗೊಂಡಿರುವ ಪಿ.ಸಿ.ಜಿನೇಶ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು


ಮೈಸೂರು, ಮೇ 18(ಎಂಟಿವೈ)– ಸೇವಾ ಅವಧಿಯಲ್ಲಿ ಯಾರ ಒತ್ತಡಕ್ಕೂ ಮಣಿಯದೇ ಜನ ಸಾಮಾನ್ಯರ ಹಿತ ಕಾಯುವ ಕೆಲಸ ಮಾಡಬೇಕು ಎಂದು ಸರ್ವೆ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕ ಪ್ರಸಾದ್ ವಿ.ಕುಲಕರ್ಣಿ ಸಲಹೆ ನೀಡಿದ್ದಾರೆ.

ಮೈಸೂರು ನಗರ ಸರ್ವೆ ಕಚೇರಿಯಲ್ಲಿ ನಡೆದ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು, ಸರ್ವೆ ಇಲಾಖೆಗೆ ರೈತರು ಹಾಗೂ ಗ್ರಾಮೀಣ ಪ್ರದೇಶದ ಜನರು ವಿವಿಧ ಸಮಸ್ಯೆಗಳ ಇತ್ಯರ್ಥಕ್ಕಾಗಿ ಅರ್ಜಿ ಸಲ್ಲಿಸುತ್ತಾರೆ. ಇಂತಹ ಸಂದರ್ಭದಲ್ಲಿ ನ್ಯಾಯ ಒದಗಿಸಬೇಕಾದ ಕರ್ತವ್ಯ ಸರ್ವೆ ಸಿಬ್ಬಂದಿಗಳಿಗೆ ಇರುತ್ತದೆ. ಸರ್ವೆ ಮಾಡುವ ಸಂದರ್ಭದಲ್ಲಿ ಯಾರ ಒತ್ತಡಕ್ಕೂ ಒಳಗಾಗದೇ ಸೇವಾ ಬದ್ಧತೆ ಪ್ರದರ್ಶಿಸಬೇಕು. ಇತ್ತೀಚಿನ ದಿನಗಳಲ್ಲಿ ಸರ್ವೆ ಇಲಾಖೆಗಳಲ್ಲಿ ಸಾಕಷ್ಟು ಸುಧಾರಣೆ ಕಂಡುಬಂದಿದೆ. ಭೂ ಮಾಪಕರು ಬದಲಾವಣೆಗೆ ಅನುಗುಣವಾಗಿ ತಾಂತ್ರಿಕ ಕೌಶಲ್ಯವನ್ನು ಹೆಚ್ಚಿಸಿಕೊಳ್ಳುವ ಮೂಲಕ ಕರ್ತವ್ಯ ನಿರ್ವಹಿಸಬೇಕು ಎಂದು ತಿಳಿಸಿದರು.

ಇದೇ ವೇಳೆ ಅಧೀಕ್ಷಕರ ಹುದ್ದೆಯಿಂದ ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಹುದ್ದೆಗೆ ಬಡ್ತಿ ಪಡೆದು ಸುಳ್ಯಗೆ ವರ್ಗಾವಣೆಗೊಂಡಿರುವ ಪಿ.ಸಿ.ಜಿನೇಶ್ ಕುಮಾರ್ ಸನ್ಮಾನ ಸ್ವೀಕರಿಸಿ ಮಾತನಾಡಿ, ಕಳೆದ 30 ವರ್ಷದಿಂದ ಸರ್ವೆ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಹೊಸ ಹೊಸ ತಂತ್ರಜ್ಞಾನಕ್ಕೆ ಅನುಗುಣವಾಗಿ ನಮ್ಮ ಕೌಶಲ್ಯವನ್ನು ವೃದ್ಧಿಸಿಕೊಳ್ಳಬೇಕಾಗಿದೆ. ಕಲಿಕೆ ನಿರಂತರವಾಗಿದ್ದು, ಮೈಸೂರಲ್ಲಿ ಸೇವೆ ಸಲ್ಲಿಸಿದ ಅನುಭವ ಸ್ಮರಣೀಯ ಎಂದರು.

ಕಾರ್ಯಕ್ರಮದಲ್ಲಿ ಸರ್ವೆ ಇಲಾಖೆಯ ಸಹಾಯಕ ನಿರ್ದೇಶಕರಾದ ಚಿಕ್ಕಣ್ಣ, ಮಂಜುನಾಥ್, ಮೇಘ, ಪರ್ಯಾವೇಕ್ಷಕ ರಮೇಶ್‌ಕುಮಾರ್, ಹಿರಿಯ ಭೂಮಾಪಕರಾದ ಎಂ.ಕೆ.ಪ್ರಕಾಶ್, ಪ್ರೀತಂ, ಭೂ ದಾಖಲೆಗಳ ಉಪನಿರ್ದೇಶಕರಾದ ಸೀಮಂತಿನಿ (ಯುಪಿಓಆರ್), ಅಧೀಕ್ಷ ಕೆ.ಬಿ.ಸಿದ್ದಯ್ಯ, ಎಡಿಎಲ್ ಸುಮಲತಾ, ಪರ್ಯಾಯ ವೀಕ್ಷರಾದ ಪ್ರವೀಣ್, ಚಂದ್ರು, ಸಿಬ್ಬಂದಿಗಳಾದ ಕಂಚಿನಕೆರೆ ದೇವರಾಜು, ಜಯ ಬೋರೇಗೌಡ, ನಿಂಗಪ್ಪನಾಯಕ, ಜಯಪಾಲ್, ನಾಗೇಂದ್ರ ಕುಮಾರ್, ಉಮಾ, ಪದ್ಮಾ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ನ್ಯಾಚುರಲ್ ಐಸ್ ಕ್ರೀಂ ಮಾಲೀಕ 'ಐಸ್ ಕ್ರೀಂ ಮ್ಯಾನ್' ಖ್ಯಾತಿಯ ರಘುನಂದನ್ ಶ್ರೀನಿವಾಸ್ ಕಾಮತ್ ನಿಧನ



ಮುಂಬೈ, ಮೇ 18– ಜನಪ್ರಿಯ ನ್ಯಾಚುರಲ್ ಐಸ್‌ಕ್ರೀಂ ಸಂಸ್ಥೆಯ 'ಐಸ್‌ಕ್ರೀಂ ಮ್ಯಾನ್' ಎಂದು ಖ್ಯಾತಿ ಗಳಿಸಿರುವ ಮಂಗಳೂರು ಮೂಲದ ರಘುನಂದನ್ ಶ್ರೀನಿವಾಸ್ ಕಾಮತ್ (75) ಕಳೆದ ತಡರಾತ್ರಿ ನಿಧನ ಹೊಂದಿದ್ದಾರೆ. ಮೃತರು ಪತ್ನಿ, ಪುತ್ರರನ್ನು ಅಗಲಿದ್ದಾರೆ.

ರಘುನಂದನ್ ಅವರು ಪ್ರಸ್ತುತ 135ಕ್ಕೂ ಹೆಚ್ಚು ನ್ಯಾಚುರಲ್ಸ್ ಮಳಿಗೆಗಳನ್ನು ಹೊಂದಿದ್ದು, ವಾರ್ಷಿಕವಾಗಿ 400 ಕೋಟಿ ರೂಪಾಯಿಗೂ ಅಧಿಕ ವಹಿವಾಟು ನಡೆಸುತ್ತಿದೆ.

ಮೈಸೂರಲ್ಲಿ ಅಂತರರಾಷ್ಟ್ರೀಯ ವಸ್ತುಸಂಗ್ರಹಾಲಯ ದಿನ ಆಚರಣೆ

ಪ್ರಾಚೀನ ನಾಣ್ಯ, ನೋಟುಗಳ ಪ್ರದರ್ಶನ



ಮೈಸೂರಿನ ಪರಂಪರೆ ಇಲಾಖೆ ಆಯುಕ್ತರ ಕಚೇರಿ ಸಂಗ್ರಹಾಲಯದಲ್ಲಿ ಶನಿವಾರ ಪ್ರಾಚೀನ ನಾಣ್ಯ ಮತ್ತು ನೋಟುಗಳನ್ನು ಪ್ರದರ್ಶಿಸಲಾಗಿತ್ತು. ಆಯುಕ್ತ ಎ. ದೇವರಾಜು, ಪಿ.ಕೆ. ಕೇಶವಮೂರ್ತಿ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಮೇ 18(ಆರ್‌ಕೆ)– ಮೈಸೂರಿನ ದಸರಾ ವಸ್ತುಪ್ರದರ್ಶನ ಆವರಣದ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಆಯುಕ್ತರ ಕಚೇರಿ ಹಾಗೂ ರೈಲ್ವೆ ಮ್ಯೂಸಿಯಂನಲ್ಲಿ ಅಂತರರಾಷ್ಟ್ರೀಯ ವಸ್ತು ಸಂಗ್ರಹಾಲಯ ದಿನ ಆಚರಿಸಲಾಯಿತು.

ಪರಂಪರೆ ಇಲಾಖೆ ಆಯುಕ್ತರ ಕಚೇರಿ ಆವರಣದಲ್ಲಿ ಹುಣಸೂರಿನ ಪ್ರಸಿದ್ಧ ನಾಣ್ಯ ಮತ್ತು ನೋಟುಗಳ ಸಂಗ್ರಹಕಾರರಾದ ಪಿ.ಕೆ. ಕೇಶವಮೂರ್ತಿ ಅವರ ಪ್ರಾಚೀನ ನಾಣ್ಯ ಮತ್ತು ನೋಟುಗಳನ್ನು ಪ್ರದರ್ಶಿಸಲಾಗಿತ್ತು.

ಕ್ರಿ.ಪೂ. 5ನೇ ಶತಮಾನದಲ್ಲಿ ಬಳಸುತ್ತಿದ್ದ ಪಂಚಮಾರ್ಕ್ ನಾಣ್ಯಗಳು, ಗ್ರೀಕ್, ರೋಮನ್, ಕುಶಾನರು, ಗುಪ್ತ ಶಾತವಾಹನ, ಕದಂಬ, ಚೋಳ, ಪಾಂಡ್ಯ ಮುಂತಾದ ಪ್ರಾಚೀನ ಭಾರತದ ನಾಣ್ಯಗಳು, ಮೊಘಲ್ ಸಾಮ್ರಾಜ್ಯ, ಮೈಸೂರು ಅರಸರು, ಸ್ಥಳೀಯ ಪ್ರಾಂತ್ಯಗಳ ಭಾರತೀಯ ಸಂಸ್ಥಾನಗಳ ನಾಣ್ಯಗಳು, ಸ್ವಾತಂತ್ರ್ಯಪೂರ್ವ ಬ್ರಿಟಿಷರು, ಪೋರ್ಚುಗೀಸರು, ಸ್ವತಂತ್ರ ಭಾರತದ ನಾಣ್ಯ ಮತ್ತು ನೋಟುಗಳನ್ನು ಈ ಸಂದರ್ಭ ಪ್ರದರ್ಶಿಸಲಾಗಿತ್ತು.

ಮೈಸೂರಿನ ಕುವೆಂಪುನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಅಂತರರಾಷ್ಟ್ರೀಯ ವಸ್ತು ಸಂಗ್ರಹಾಲಯ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅಪರೂಪದ ನಾಣ್ಯ ಮತ್ತು ನೋಟುಗಳನ್ನು ವೀಕ್ಷಿಸಿದರು.

ಅದೇ ರೀತಿ ಮೈಸೂರು ರೈಲು ನಿಲ್ದಾಣದ ರೈಲು ಮ್ಯೂಸಿಯಂನಲ್ಲಿ ಅಂತರರಾಷ್ಟ್ರೀಯ ವಸ್ತುಸಂಗ್ರಹಾಲಯ ದಿನದ ಅಂಗವಾಗಿ 5 ವರ್ಷದ ಮಕ್ಕಳಿಗೆ ಉಚಿತ ಪ್ರವೇಶಾವಕಾಶ ಕಲ್ಪಿಸಲಾಗಿತ್ತು.

20 ದಿನಗಳಲ್ಲಿ ಬರ ಪರಿಹಾರ ಬಿಡುಗಡೆ ಮಾಡದಿದ್ದರೆ ರಾಜ್ಯಾದ್ಯಂತ ಹೋರಾಟ

ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಎಚ್ಚರಿಕೆ



ಮೈಸೂರಿನ ಜಲದರ್ಶಿನಿ ಸರ್ಕಾರಿ ಅತಿಥಿ ಗೃಹದಲ್ಲಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟದಿಂದ ಶನಿವಾರ ಬರ ಪರಿಹಾರ ಕುರಿತು ಸಭೆ ನಡೆಸಲಾಯಿತು.

ಮೈಸೂರು, ಮೇ 18(ಜಿಎ)–ರಾಜ್ಯ ಸರ್ಕಾರ ರೈತರಿಗೆ 20 ದಿನಗಳೊಳಗೆ ಬರ ಪರಿಹಾರ ನ್ಯಾಯಯುತವಾಗಿ ಬಿಡುಗಡೆ ಮಾಡದಿದ್ದರೆ ರಾಜ್ಯಾದ್ಯಂತ ಹೋರಾಟ ಮಾಡಲಾಗುತ್ತದೆ ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷರಾದ ಕುರುಬೂರು ಶಾಂತ ಕುಮಾರ್ ಎಚ್ಚರಿಕೆ ನೀಡಿದ್ದಾರೆ.

ಮೈಸೂರಿನ ಜಲದರ್ಶಿನಿ ಸರ್ಕಾರಿ ಅತಿಥಿ ಗೃಹದಲ್ಲಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟದಿಂದ ಶನಿವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರಕ್ಕೆ ನ್ಯಾಯಯುತವಾಗಿ ಬರ ಪರಿಹಾರ ನೀಡಲು ಸಾಧ್ಯವಾಗದಿದ್ದರೆ ಎಲ್ಲಾ ಬೆಳೆಗಳಿಗೂ ಬೆಳೆ ವಿಮೆ ಜಾರಿ ಮಾಡಿ. ಈ ಮೂಲಕ ವಿಮಾ ಪರಿಹಾರ ಕೊಡಿಸಲಿ. ನಾಟಕೀಯವಾಗಿ ರೈತರ ಬಗ್ಗೆ ಮೊಸಳೆ ಕಣ್ಣೀರು ಸುರಿಸುವುದು ಬೇಡ ಎಂದು ಕಿಡಿಕಾರಿದರು.

ರಾಜ್ಯದ ಎಲ್ಲಾ ಕೆರೆಗಳ ಹೂಳು ತೆಗೆಸಿ ರೈತರ ಜಮೀನುಗಳಿಗೆ ಸರಬರಾಜು ಮಾಡಿ. ಭೂಮಿ ಫಲವತ್ತತೆಗೆ ಒತ್ತು ನೀಡಲು ಕಾರ್ಯ ಯೋಜನೆ ಸಮರೋಪಾದಿಯಲ್ಲಿ ಕೈಗೊಳ್ಳಲಿ. ಕಾವೇರಿ ಅಚ್ಚುಕಟ್ಟು ಭಾಗದಲ್ಲಿ ಮಳೆ ಕಡಿಮೆಯಾಗಿರುವ ಕಾರಣ ನಾಲೆಗಳಿಗೆ ನೀರು ಹರಿಸಲು ಸಾಧ್ಯವಿಲ್ಲ. ಆದ್ದರಿಂದ ಯಾರೂ ಬೆಳೆ ಬೆಳೆಯಬಾರದು ಎಂದು ಅಧಿಸೂಚನೆ ಹೊರಡಿಸಿದ ಸರ್ಕಾರ, ಈ ಭಾಗದ ಎಲ್ಲಾ ತಾಲೂಕು ಬರಗಾಲ ಎಂದು ಘೋಷಣೆ ಮಾಡಿದೆ. ಇದೇ ಸರ್ಕಾರ ಬರಗಾಲದ ಬೆಳೆ ನಷ್ಟ ಅಂದಾಜು ಸಮೀಕ್ಷೆ ಮಾಡಿ ವರದಿ ಕಳಿಸಿ ಎಂದು ಸೂಚಿಸಿದೆ. ಈ ಕಾರಣ ಕಾವೇರಿ ಅಚ್ಚುಕಟ್ಟು ಭಾಗದ ಬಹುತೇಕ ರೈತರಿಗೆ ಬರ ಪರಿಹಾರ ನಷ್ಟ ಸಿಕ್ಕಿಲ್ಲ. ಇದು ಸರ್ಕಾರದ ಇಬ್ಬಗೆ ನೀತಿಯಾಗಿದೆ ಎಂದರು.

ಜಿಲ್ಲೆಯಾದ್ಯಂತ ಮಳೆ ಹಾಗೂ ಬಿರುಗಾಳಿ ಹಾನಿಯಿಂದ ರೈತರ ದನ, ಕರು, ಕೊಟ್ಟಿಗೆ, ಕೋಳಿ ಫಾರಂ, ಬಾಳೆ ಬೆಳೆ ಸೇರಿದಂತೆ ತರಕಾರಿ ಬೆಳೆ ನಾಶವಾಗಿದೆ. ಆದ್ದರಿಂದ ವಿಪತ್ತು ನಿರ್ವಹಣಾ ಪ್ರಾಧಿಕಾರದಿಂದ ಕೂಡಲೆ ನಷ್ಟ ಪರಿಹಾರ ಬಿಡುಗಡೆಗೊಳಿಸುವಂತೆ ಹಾಗೂ ಖಾಸಗಿ ಫೈನಾನ್ಸ್‌ಗಳು ಸಾಲ ವಸೂಲಾತಿಗಾಗಿ ಖಾಸಗಿ ಗೂಂಡಾಗಳ ಬಲ ಪ್ರಯೋಗ ನಿಲ್ಲಿಸಬೇಕು ಎಂದು ಸಭೆಯಲ್ಲಿ ಒತ್ತಾಯಿಸಿದರು.

ಸಭೆಯಲ್ಲಿ ಒಕ್ಕೂಟದ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್, ಕಿರಗಸೂರು ಶಂಕರ್ ಉಡಿಗಾಲ, ರೇವಣ್ಣ, ಬರಡನಪುರ ನಾಗರಾಜ್, ಮಾರ್ಬಳ್ಳಿ ನೀಲಕಂಠಪ್ಪ, ಬಿ.ಪಿ.ಪರಶಿವಮೂರ್ತಿ, ಕುರುಬೂರ್ ಸಿದ್ದೇಶ್, ಲಕ್ಷ್ಮಿಪುರ ವೆಂಕಟೇಶ್, ದೇವನೂರು ವಿಜೇಂದ್ರ ರಾಜೇಶ, ಸುನೀಲ್, ಅಂಬಳೆ ಮಂಜುನಾಥ, ರೂಪ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

ರೈತ ಉತ್ಪಾದಕರ ಸಂಸ್ಥೆಗಳಿಗೆ ಅನುದಾನ ಬಿಡುಗಡೆಗೆ ಆಗ್ರಹ

ಬಿಜೆಪಿ ರೈತ ಮೋರ್ಚಾದಿಂದ ಪ್ರತಿಭಟನೆ



ಮೈಸೂರು, ಮೇ 18(ಜಿಎ)–ರಾಜ್ಯ ಸರ್ಕಾರದಿಂದ ರಚನೆಯಾಗಿರುವ ರೈತ ಉತ್ಪಾದಕರ ಸಂಸ್ಥೆಗಳಿಗೆ ಬಾಕಿ ಹಣ ಬಿಡುಗಡೆ ಮಾಡುವಂತೆ ಆಗ್ರಹಿಸಿ ಭಾರತೀಯ ಜನತಾ ಪಾರ್ಟಿ ರೈತ ಮೋರ್ಚಾ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಬಿಜೆಪಿ ರೈತ ಮೋರ್ಚಾದ ಜಿಲ್ಲಾಧ್ಯಕ್ಷ ಮಿರ್ಲೆ ಶ್ರೀನಿವಾಸ್ ಗೌಡ ಮಾತನಾಡಿ, ನಬಾರ್ಡ್, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಮತ್ತು ರೈತ ಉತ್ಪಾದಕ ಯೋಜನೆಯ ಅಡಿಯಲ್ಲಿ 710 ರೈತ ಉತ್ಪಾದಕರ ಸಂಸ್ಥೆಗಳು ಪ್ರಾರಂಭವಾಗಿದ್ದು, ಅಂದಾಜು 200 ಕೋಟಿ ರೂ. ಅನುದಾನದಲ್ಲಿ 182 ಕೋಟಿ ರೂ. ಬಿಡುಗಡೆಯಾಗಿದೆ. ಆದರೆ, ರಾಜ್ಯ ಸರ್ಕಾರ ಅಮೃತ ಮಹೋತ್ಸವದ ಅಂಗವಾಗಿ ಅಮೃತ ರೈತ ಉತ್ಪಾದಕರ ಸಂಸ್ಥೆಗಳನ್ನು ಹಿಂದಿನ ಬಿಜೆಪಿ ಸರ್ಕಾರ ಘೋಷಿಸಿದ್ದು, 2021–22ರಿಂದ 2024–25ರವರೆಗೆ 490 ರೈತ ಉತ್ಪಾದಕರ ಸಂಸ್ಥೆ ರಚನೆಯಾಗಿವೆ ಎಂದರು.

ಇವುಗಳಿಗೆ 150 ಕೋಟಿ ರೂ. ಅನುದಾನವಿದ್ದು, ಶೇ.12ರಷ್ಟು ಮಾತ್ರ ಬಿಡುಗಡೆಯಾಗಿದೆ. ಶೇ.82ರಷ್ಟು ಬಾಕಿ ಇದೆ. ಕಾಂಗ್ರೆಸ್ ಸರ್ಕಾರ ಇದುವರೆಗೂ ಯಾವುದೇ ಅನುದಾನ ಬಿಡುಗಡೆ ಮಾಡದಿರುವುದರಿಂದ ರೈತ ಉತ್ಪಾದಕರ ಸಂಸ್ಥೆಗಳ ಅಭಿವೃದ್ಧಿ ಕುಂಠಿತವಾಗಿದೆ. ಇದರಿಂದ 10 ಲಕ್ಷ ರೈತರಿಗೆ ಮತ್ತು 12 ಸಾವಿರ ರೈತ ಉತ್ಪಾದಕರ ಸಂಸ್ಥೆಗಳ ನಿರ್ದೇಶಕರಿಗೆ ಸಮಸ್ಯೆಯುಂಟಾಗಿದೆ. ಬಾಕಿ ಇರುವ ಅನುದಾನವನ್ನು ಶೀಘ್ರದಲ್ಲಿ ಬಿಡುಗಡೆ ಮಾಡದಿದ್ದರೆ ರೈತ ವಿರೋಧಿ ಕಾಂಗ್ರೆಸ್ ಸರ್ಕಾರದ ವಿರುದ್ಧ ರಾಜ್ಯಾದ್ಯಂತ ಹೋರಾಟ ಮಾಡಲಾಗುತ್ತದೆ ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ರೈತ ಮೋರ್ಚಾದ ಪ್ರಧಾನ ಕಾರ್ಯದರ್ಶಿ ಈರಪ್ಪ, ಮಹೇಶ್ ಬಾಬು, ಕೆ.ಬಿ.ಗಂಗಾಧರ ಸ್ವಾಮಿ, ಕೆ.ಹರ್ಷ, ಪರಶುರಾಮ್, ವಕ್ತಾರ ವಸಂತಕುಮಾರ್ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ನಮ್ಮ ಅರಮನೆಗಿಲ್ಲ ಅಗ್ನಿ ಸುರಕ್ಷತೆ...!

■ಬಾಪುಲಿಂಗರಾಜ್ ಅರಸ್

ಶಾರ್ಟ್ ಸರ್ಕ್ಯೂಟ್‌ನಿಂದ ಒಂದು ಸಣ್ಣ ಬೆಂಕಿ ಕಿಡಿ ಹೊತ್ತಿದರೂ ತೇಗದ ಮರದ ಪಟ್ಟಿಗಳಿಂದ ಬೆಂಕಿ ಇಡೀ ಅರಮನೆ ಆವರಿಸುವ ಆತಂಕವಿದೆ. ಇಂತಹ ಸಮಯದಲ್ಲಿ ಕ್ಷಿಪ್ರ ಕಾರ್ಯಾಚರಣೆ ಮೂಲಕ ಬೆಂಕಿ ನಂದಿಸುವ ಅಗ್ನಿಶಾಮಕ ಘಟಕದ ವ್ಯವಸ್ಥೆ ಅವಶ್ಯವಿದೆ.



ದೇಶ-ವಿದೇಶದ ಲಕ್ಷಾಂತರ ಪ್ರವಾಸಿಗರ ಸೂಜಿಗಲ್ಲಿನಂತೆ ಸೆಳೆಯುವ ವಿಶ್ವ ವಿಖ್ಯಾತ ನಮ್ಮ ಮೈಸೂರು ಅರಮನೆಗೆ ಅಗ್ನಿ ಸುರಕ್ಷತೆ ಇಲ್ಲ. ಈ ವಿಷಯ ಕೇಳಿ ನಿಮಗೆ ಆತಂಕ ವಾಯ್ತಾ... ಅಚ್ಚರಿಯಾಯ್ತಾ...! ಹಿಂದೆ ಮರದ ಅರಮನೆ ಬೆಂಕಿಗಾಹುತಿಯಾಗಿತ್ತು. ನಂತರ ಈಗಿನ ಅರಮನೆ ನಿರ್ಮಾಣ ಮಾಡಲಾಗಿದ್ದು, ಇದನ್ನು ಅಗ್ನಿ ಅನಾಹುತದಿಂದ ಸುರಕ್ಷಿತವಾಗಿಡಲು ಈ ತನಕ ಯಾರೂ ಗಮನಹರಿಸಿಲ್ಲ. ಲಕ್ಷಾಂತರ ವಿದ್ಯುತ್ ಬಲ್ಬ್‌ಗಳಿಂದ ಜಗಮಗಿಸುವ ಮೈಸೂರು ಅರಮನೆಯಲ್ಲಿ ಅಗ್ನಿ ಅವಘಡಗಳಾದರೆ ಕೂಡಲೇ ಬೆಂಕಿ ನಂದಿಸಲು ಇಲ್ಲಿ ಒಂದು ವ್ಯವಸ್ಥಿತ ಅಗ್ನಿಶಾಮಕ ಘಟಕವಿಲ್ಲ. ಅಗ್ನಿ ಸುರಕ್ಷಾ ಸೇವೆ ನೀಡಲು ಅಗ್ನಿಶಾಮಕ ಇಲಾಖೆ ಮುಂದೆ ಬಂದರೂ ಅರಮನೆ ಮಂಡಳಿ ನಿರಾಸಕ್ತಿ ವಹಿಸಿದೆ.

ವಿದ್ಯುತ್ ದೀಪಗಳಿಂದ ಕಂಗೊಳಿಸುವ ವಿಶ್ವ ವಿಖ್ಯಾತ ಮೈಸೂರು ಅರಮನೆಯ ಸೊಬಗು ವರ್ಣಿಸಲು ಪದಪುಂಜಗಳೇ ಇಲ್ಲ. ಮೇಲಾಗಿ ಅರಮನೆ ಮೈಸೂರಿಗೆ ಮುಕುಟಮಣಿ ಇದ್ದಂತೆ.

ಯದುವಂಶದ ಕೊನೆಯ ಅರಸು ಜಯಚಾಮರಾಜೇಂದ್ರ ಒಡೆಯರ್ ಕಾಲದಲ್ಲಿ, 1942ರ ಸುಮಾರಿನಲ್ಲಿ ಮೈಸೂರು ಅರಮನೆಗೆ ವಿದ್ಯುತ್ ದೀಪಾಲಂಕಾರದ ವ್ಯವಸ್ಥೆ ಮಾಡಲಾಯಿತು. ತೇಗದ ಮರದ ಪಟ್ಟಿಗಳ ಮೇಲೆ ಸುಮಾರು ಒಂದು ಲಕ್ಷ ಬಲ್ಬ್‌ಗಳನ್ನು ಅಳವಡಿಸಲಾಗಿದೆ. ಆರಂಭದಲ್ಲಿ 30 ವ್ಯಾಟ್ ಇದ್ದ ಬಲ್ಬ್ ತೆರವು ಮಾಡಿ ಈಗ 15 ವ್ಯಾಟ್ ಬಲ್ಬ್‌ಗಳನ್ನು ಅಳವಡಿಸಲಾಗಿದೆ. ಪ್ರತಿ ಬಲ್ಬ್‌ಗೆ ಹೊಂದಿಕೊಂಡಂತೆ ವೈಯರ್‌ಗಳು ಹಾದು ಹೋಗಿವೆ. ಶಾರ್ಟ್ ಸರ್ಕ್ಯೂಟ್‌ನಿಂದ ಒಂದು ಸಣ್ಣ ಬೆಂಕಿ ಕಿಡಿ ಹೊತ್ತಿದರೂ ತೇಗದ ಮರದ ಪಟ್ಟಿಗಳಿಂದ ಬೆಂಕಿ ಇಡೀ ಅರಮನೆ ಆವರಿಸುವ ಆತಂಕವಿದೆ. ಇಂತಹ ಸಮಯದಲ್ಲಿ ಕ್ಷಿಪ್ರ ಕಾರ್ಯಾಚರಣೆ ಮೂಲಕ ಬೆಂಕಿ ನಂದಿಸುವ ಅಗ್ನಿಶಾಮಕ ಘಟಕದ ವ್ಯವಸ್ಥೆ ಅವಶ್ಯವಿದೆ. ಮರದ ಅರಮನೆ ಬೆಂಕಿಗಾಹುತಿಯಾದ ನಂತರ ಅಂತಹ ಮತ್ತೊಂದು ಅನಾಹುತ ಆಗಬಾರದು ಎಂಬ ಮುನ್ನೆಚ್ಚರಿಕೆಯಿಂದಲೇ ಶೇಕಡ 80 ರಷ್ಟು ಭಾಗ ಇಟ್ಟಿಗೆ, ಸಿಮೆಂಟ್ ಬಳಸಿ ಈಗಿನ ಅರಮನೆ ನಿರ್ಮಾಣ ಮಾಡಲಾಗಿದೆ. ಆದರೂ, ಉಳಿದ ಶೇಕಡ 20ರಷ್ಟು ಭಾಗಕ್ಕೆ ಮರ ಬಳಕೆಯಾಗಿದೆ.

ಅರಮನೆ ಒಳಗೆ ಮೆಟ್ಟಿಲು, ಬಾಗಿಲು, ಆಧಾರ ಸ್ತಂಭ ಹೀಗೆ ಅವಶ್ಯವಿರುವ ಕಡೆ ಗುಣಮಟ್ಟದ ಸಾಗುವಾನಿ ಮರಗಳನ್ನು ಬಳಸಲಾಗಿದೆ. ಅಂಬಾವಿಲಾಸ ಅರಮನೆಯ ಪ್ರವೇಶ ದ್ವಾರದ ವೀಕ್ಷಕರ ಗ್ಯಾಲರಿ ಮೇಲೆ ಅಪರೂಪದ ಕಲಾತ್ಮಕ ವರ್ಣಚಿತ್ರವಿದೆ. ಇದನ್ನೆಲ್ಲಾ ರಕ್ಷಿಸಿಕೊಳ್ಳಬೇಕಿದೆಯಲ್ಲವೇ? ಈಗಿನ ಸರ್ಕಾರಕ್ಕೆ ಇಂತಹ ಅರಮನೆ ಕಟ್ಟುವುದಿರಲಿ, ಅದರ ಸಮರ್ಪಕ ನಿರ್ವಹಣೆ ಕೂಡ ಸಾಧ್ಯವಾಗಿಲ್ಲ. ಆದರೂ, ಇಂತಹ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಮೈಸೂರು ಅರಮನೆಗೆ ಅಗ್ನಿ ಸುರಕ್ಷತೆ ಕಲ್ಪಿಸುವ ನಿಟ್ಟಿನಲ್ಲಿ ಈ ತನಕ ಒಂದು ಸಣ್ಣ ಪ್ರಯತ್ನವೂ ಆಗಿಲ್ಲ ಎಂದರೆ ಅಚ್ಚರಿಯಲ್ಲವೇ?

ಇತ್ತ ಮೈಸೂರು ಅರಮನೆ ಸಂರಕ್ಷಣೆ, ನಿರ್ವಹಣೆಗಾಗಿರುವ ಅರಮನೆ ಮಂಡಳಿಯೂ (Palace Board) ಈ ಭವ್ಯ ಸೌಧಕ್ಕೆ ಅಗ್ನಿ ಸುರಕ್ಷತೆ ಕಲ್ಪಿಸುವ ಪ್ರಯತ್ನವನ್ನೇ ಇದುವರೆಗೆ ಮಾಡಿಲ್ಲ.

ಅರಮನೆ ಹಾಗೂ ಇದರ ಆವರಣದಲ್ಲಿ ಒಂದು ಸಣ್ಣ ಅಗ್ನಿ ಅವಘಡ ಸಂಭವಿಸಿದರೂ ನಗರದ ಸರಸ್ವತಿಪುರಂ, ಬನ್ನಿಮಂಟಪ ಇಲ್ಲವೇ ಹೆಬ್ಬಾಳು ಅಗ್ನಿಶಾಮಕ ಘಟಕಗಳಿಂದ ವಾಹನ, ಸಿಬ್ಬಂದಿ ಕರೆಸಿಕೊಳ್ಳಬೇಕಿದೆ. ಆದರೆ, ಬೆಂಕಿಯ ಕೆನ್ನಾಲಿಗೆ ಕ್ಷಣಾರ್ಧದಲ್ಲಿ ಚಾಚಲಿದೆ ಎಂಬ ಪರಿಜ್ಞಾನ ಜವಾಬ್ದಾರಿ ಹೊತ್ತಿರುವವರಿಗೆ ಇರಬೇಕಲ್ಲವೇ?

ಅರಮನೆ ಹೊರ ಭಾಗ ವಿದ್ಯುತ್ ಬಲ್ಬ್‌ಗಳಿಂದ ಮಾತ್ರವಲ್ಲದೆ, ಒಳಭಾಗದಲ್ಲೂ ಅವಘಡಗಳು ಸಂಭವಿಸುವ ಸಾಧ್ಯತೆ ಹೆಚ್ಚಾಗಿರುತ್ತದೆ. ಹಾಗಾಗಿ ಸದಾ ಕಟ್ಟೆಚ್ಚರ ವಹಿಸಬೇಕಾಗಿರುತ್ತದೆ.

ಅರಮನೆ ಒಳಗೆ ಕೆಲವು ಜಾಗಗಳಲ್ಲಿ ಸಿಒ2 ಗ್ಯಾಸ್ ಸಿಲಿಂಡರ್‌ಗಳನ್ನು ಅಳವಡಿಸಲಾಗಿದೆ. ಆದರೆ ದೊಡ್ಡ ಪ್ರಮಾಣದ ಬೆಂಕಿ ಅವಘಡಗಳು ಉಂಟಾದರೆ ಏನು ಮಾಡುವುದು?


ಅಧಿಕಾರಿಗಳಿಂದ ಮಾಹಿತಿ ಪಡೆಯುತ್ತೇನೆ



ಮೈಸೂರು ಅರಮನೆಗೆ ಅಗ್ನಿಶಾಮಕ ಸೇವೆ ಒದಗಿಸುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಪ್ರಕ್ರಿಯೆಗಳು ನಡೆದಿದೆಯೇ, ಇಲ್ಲವೇ ಎಂಬ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆಯುತ್ತೇನೆ. ಅಗ್ನಿ ಅವಘಡ ಸಂಭವಿಸಿದರೆ ಸನಿಹದಲ್ಲೇ ಇರುವ ಅಗ್ನಿಶಾಮಕ ವಾಹನ ಕರೆಸಬಹುದು. ಆದರೂ ಲಕ್ಷಾಂತರ ವಿದ್ಯುತ್ ಬಲ್ಬ್ ಅಳವಡಿಸಿರುವ ಕಾರಣ ಅಲ್ಲೇ ಒಂದು ಅಗ್ನಿಶಾಮಕ ವಾಹನ ಇದ್ದರೆ ಒಳ್ಳೆಯದು. ಈ ಸಂಬಂಧ ಅಧಿಕಾರಿಗಳಿಂದ ಮಾಹಿತಿ ಪಡೆದು, ಮುಂದಿನ ಕ್ರಮ ಕೈಗೊಳ್ಳುತ್ತೇನೆ.

-ಡಾ.ಕೆ.ವಿ.ರಾಜೇಂದ್ರ
ಜಿಲ್ಲಾಧಿಕಾರಿ ಹಾಗೂ ಅರಮನೆ ಮಂಡಳಿ ಕಾರ್ಯನಿರ್ವಾಹಕ ಅಧಿಕಾರಿ, ಮೈಸೂರು.

ಮರದ ಅರಮನೆ ಬೆಂಕಿಗಾಹುತಿಯಾದ ಕ್ಷಣ



ಈಗಿನ ಅರಮನೆಗೂ ಮೊದಲು ಇದೇ ಸ್ಥಳದಲ್ಲಿದ್ದ ಮರದ ಅರಮನೆ ಮನಮೋಹಕವಾಗಿತ್ತು. ಆದರೆ 1897, ಫೆಬ್ರವರಿ 28ರಂದು ಅದು ಬೆಂಕಿಗಾಹುತಿಯಾಯಿತು.

ಮೈಸೂರು ಮಹಾರಾಜರು ಶ್ರೀರಂಗಪಟ್ಟಣವನ್ನು ರಾಜಧಾನಿ ಮಾಡಿಕೊಂಡು ಅಲ್ಲಿ ನೆಲೆಸಿದ್ದರು. ಕೆಲವೊಂದು ಕಾರಣಕ್ಕೆ 1799ರಲ್ಲಿ ಬ್ರಿಟಿಷ್ ಅಧಿಕಾರಿಯೊಬ್ಬ ಶ್ರೀರಂಗಪಟ್ಟಣದ ಅರಮನೆ ನೆಲಸಮಗೊಳಿಸಿದ. ಆಗ ಅಲ್ಲಿದ್ದ ಮರ-ಮುಟ್ಟುಗಳನ್ನು ಬಳಸಿಕೊಂಡು ಮೈಸೂರಿನಲ್ಲಿ ಅರಮನೆ ನಿರ್ಮಾಣ ಮಾಡಲು ಉದ್ದೇಶಿಸಲಾಯಿತು. 1799ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್, ಈಗಿರುವ ಅರಮನೆ ಜಾಗದಲ್ಲಿ ಮರದ ಭವ್ಯ ಅರಮನೆ ನಿರ್ಮಾಣ ಮಾಡಿದ್ದರು. ಆಗಿನ ಕಾಲಕ್ಕೆ ಅದಕ್ಕೆ ಆದ ಖರ್ಚು 7,41,816 ರೂಪಾಯಿ.

ನಾಲ್ವಡಿ ಕೃಷ್ಣರಾಜ ಒಡೆಯರ್ ಅಕ್ಕ ಜಯಲಕ್ಷ್ಮಮ್ಮಣ್ಣಿ ಹಾಗೂ ಎಂ.ಕಾಂತರಾಜೇ ಅರಸ್ ವಿವಾಹ ಮಹೋತ್ಸವ ಏರ್ಪಟ್ಟಿತ್ತು. ಬೆಳಗ್ಗೆ ಧಾರಾ ಮುಹೂರ್ತವಿತ್ತು. ಜಯಲಕ್ಷ್ಮಮ್ಮಣ್ಣಿಯವರು ಎಣ್ಣೆ ನೀರು ಸ್ನಾನ ಮಾಡಿದ ನಂತರ ಕೆಂಡದ ಸಾಂಬ್ರಾಣಿ ಹೊಗೆಯಲ್ಲಿ ಕೂದಲು ಆರಿಸಿಕೊಂಡು, ಆ ಬಟ್ಟಲಿನ ಬೆಂಕಿ ನಂದಿದೆ ಎಂದು ಭಾವಿಸಿ ಕೆಲಸದಾಕೆ ಕೆಂಡವನ್ನು ಅಲ್ಲೇ ಮೂಲೆಗೆ ಸುರಿದಳು.

ಆದರೆ, ದುರದೃಷ್ಟವಶಾತ್ ಬೆಂಕಿ ಸಂಪೂರ್ಣ ಆರಿರಲಿಲ್ಲ. ಮೊದಲೇ ಮರದಿಂದ ಮಾಡಿದ ನೆಲಹಾಸುವಿಗೆ ಬೆಂಕಿ ಹೊತ್ತಿಕೊಂಡಿತು. ಸತತ ಮೂರು ದಿನಗಳ ಕಾಲ ಬೆಂಕಿ ಹೊತ್ತಿ ಉರಿಯಿತು. ಬೆಂಗಳೂರಿನಿಂದ ಅಗ್ನಿ ಶಾಮಕದಳದ ವಾಹನ ಬರುವಷ್ಟರಲ್ಲಿ ಬೆಂಕಿ ಕೆನ್ನಾಲಿಗೆ ಅರಮನೆ ಆವರಿಸಿತ್ತು. ತರುವಾಯ ನಾಲ್ವಡಿ ಕೃಷ್ಣರಾಜ ಒಡೆಯರ್ 1897, ಅಕ್ಟೋಬರ್ ತಿಂಗಳಿನಲ್ಲಿ ಈಗಿರುವ ಅರಮನೆಯ ಕಾಮಗಾರಿ ಆರಂಭಿಸಿದರು. 1907, ಜೂನ್ 5ಕ್ಕೆ ಹೊಸ ಅರಮನೆಯ ಗೃಹಪ್ರವೇಶವಾಯಿತು. ಆದರೆ ದರ್ಬಾರ್ ಹಾಲ್ ಸಹಿತ ಅರಮನೆಯ ಪೂರ್ಣ ಕಾಮಗಾರಿ 1912ಕ್ಕೆ ಪೂರ್ಣಗೊಂಡಿತು. ಆ ದಿನಕ್ಕೆ ಈಗಿನ ಅರಮನೆಗೆ ಆದ ಖರ್ಚು ರೂ. 41,47,913.

ಅಗ್ನಿಶಾಮಕ ಸೇವೆ ನೀಡಲು ನಾವು ಸಿದ್ಧರಿದ್ದೇವೆ, ಆದರೆ...!

ಮೈಸೂರು ಅರಮನೆಗೆ ಅಗ್ನಿಶಾಮಕ ಸೇವೆ ನೀಡಲು ನಾವೇನೋ ಸಿದ್ಧರಿದ್ದೇವೆ.



ಆದರೆ ಅರಮನೆ ಮಂಡಳಿಯಿಂದ ಇದುವರೆಗೂ ಪ್ರಸ್ತಾವನೆ ಬಂದಿಲ್ಲ. ಅರಮನೆ ಆವರಣದಲ್ಲಿ ಅಗ್ನಿಶಾಮಕ ಸೇವೆ ನೀಡುವ ಕುರಿತಂತೆ ಏನೇನು ಅಗತ್ಯತೆ ಇದೆ ಎಂಬ ಬಗ್ಗೆ 2018 ರಲ್ಲಿ ಸಮಗ್ರ ಯೋಜನಾ ವರದಿ ಸಿದ್ಧಪಡಿಸಲಾಗಿತ್ತು. ಅಗ್ನಿ ಶಾಮಕ ವಾಹನ ನಿಲುಗಡೆಗೆ ಹೊಸ ಸೂರು ನಿರ್ಮಾಣಕ್ಕೆ ಅವಕಾಶವಿಲ್ಲ ಎಂದು ಅರಮನೆ ಮಂಡಳಿ ಆಕ್ಷೇಪ ವ್ಯಕ್ತಪಡಿಸಿತ್ತು. ಆದರೆ ಅಗ್ನಿ ಶಾಮಕ ವಾಹನ ನಿಲುಗಡೆಗೆ ಜಾಗವನ್ನು ಗುರುತಿಸಲಾಗಿತ್ತು.

ಈಗಲೂ ಮೈಸೂರು ಅರಮನೆ ಮಂಡಳಿ ಅಗ್ನಿಶಾಮಕ ಸೇವೆಯ ಅಗತ್ಯವಿದೆ ಎಂದು ಪ್ರಸ್ತಾವನೆ ಸಲ್ಲಿಸಿದರೆ ನಾವು ಒದಗಿಸಲು ಸಿದ್ಧರಿದ್ದೇವೆ. ಆದರೆ, ಅವರೇ ಇದರ ಬಗ್ಗೆ ಕಳಕಳಿ ತೋರದ ಮೇಲೆ ನಾವು ಏನು ಮಾಡುವುದು.

ಪ್ರಸ್ತಾವನೆ ಬಂದ ಕೂಡಲೇ ಪ್ರತ್ಯೇಕ ಅಗ್ನಿಶಾಮಕ ವಾಹನ ನಿಲುಗಡೆಯೊಂದಿಗೆ ಮೂರು ಪಾಳಿಯಲ್ಲಿ 24 ಸಿಬ್ಬಂದಿಗಳನ್ನು ನಿಯೋಜನೆ ಮಾಡಲಾಗುವುದು. ಅವರು ದಿನದ 24 ಗಂಟೆ ಕಟ್ಟೆಚ್ಚರ ವಹಿಸುವುದರ ಜೊತೆಗೆ ಅರಮನೆ ಸುತ್ತ ಪರಿವೀಕ್ಷಣೆ ನಡೆಸಿ, ಅಗ್ನಿ ಅವಘಡ ಆಗದಂತೆ ಎಚ್ಚರಿಕೆ ವಹಿಸುತ್ತಾರೆ. ಬೆಂಗಳೂರಿನಲ್ಲಿ ವಿಧಾನಸೌಧ, ವಿಕಾಸಸೌಧ ಹಾಗೂ ಹೈಕೋರ್ಟ್‌ಗೆ ಪ್ರತ್ಯೇಕವಾದ ಅಗ್ನಿಶಾಮಕ ದಳ ನಿಯೋಜನೆ ಮಾಡಲಾಗಿದೆ. ವಿಶ್ವವಿಖ್ಯಾತ ಮೈಸೂರು ಅರಮನೆಗೂ ಇದರ ಅಗತ್ಯವಿದೆ. ಏನೇ ಒಂದು ಸಣ್ಣ ಅಗ್ನಿ ಅವಘಡ ಸಂಭವಿಸಿದರೂ ಸರಸ್ವತಿಪುರಂ, ಬನ್ನಿಮಂಟಪ, ಹೆಬ್ಬಾಳಿನಿಂದ ಕಾರ್ಯಾಚರಣೆ ಕೈಗೊಳ್ಳಬಹುದು. ಆದರೆ ನಾವು ಇಲ್ಲಿಂದ ಅಲ್ಲಿಗೆ ಹೋಗುವಷ್ಟರಲ್ಲಿ ಅರಮನೆಗೆ ಹಾನಿಯಾಗಬಹುದು. ಅಲ್ಲೇ ಅಗ್ನಿಶಾಮಕ ದಳ ಇದ್ದರೆ ತಕ್ಷಣ ಬೆಂಕಿ ನಂದಿಸುತ್ತಾರೆ. ಅಗತ್ಯವಿದ್ದರೆ ಹೆಚ್ಚಿನ ವಾಹನ, ಸಿಬ್ಬಂದಿ ಕರೆಸಿಕೊಳ್ಳಬಹುದು. ಹಾಗಾಗಿ ಭಾರಿ ಅವಘಡ ತಪ್ಪಿಸಬಹುದು.

ಅರಮನೆಗೆ ಒಂದು ಲಕ್ಷ ವಿದ್ಯುತ್ ಬಲ್ಬ್ ಅಳವಡಿಸಿದ್ದು, ಇವುಗಳಿಗೆ 12 ಟ್ರಾನ್ಸ್‌ಫಾರ್ಮರ್‌ಗಳಿವೆ. ಏನಾದರೂ ಅಗ್ನಿ ಅನಾಹುತ ಸಂಭವಿಸಿದರೆ ಯಾರು ಹೊಣೆ. ಇದರ ಗಂಭೀರತೆ ಅರಿತು ಅರಮನೆ ಮಂಡಳಿ ಪ್ರಸ್ತಾವನೆ ಸಲ್ಲಿಸಿದರೆ ಕೂಡಲೇ ನಾವು ಅಗ್ನಿಶಾಮಕ ಸೇವೆ ನೀಡಲು ಸಿದ್ಧರಿದ್ದೇವೆ.

-ಕೆ.ಪಿ.ಗುರುರಾಜ್, ಜಿಲ್ಲಾ ಅಗ್ನಿಶಾಮಕ ಅಧಿಕಾರಿ, ಮೈಸೂರು

“ ಇತ್ತೀಚೆಗೂ ಅರಮನೆಯ ಪ್ರವೇಶ ದ್ವಾರದಲ್ಲೇ ಬೆಂಕಿ ಅವಘಡ ಸಂಭವಿಸಿತ್ತು. ಅದು 2017, ಮೇ 11 ರಂದು. ಅರಮನೆ ಪ್ರವೇಶ ದ್ವಾರದ ಎಟಿಎಂ ಕೇಂದ್ರದಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿಕೊಂಡಿತ್ತು. ಸರಸ್ವತಿಪುರಂ ಅಗ್ನಿಶಾಮಕ ಘಟಕದಿಂದ ವಾಹನ ಬರುವ ವೇಳೆಗೆ ಬೆಂಕಿ ವ್ಯಾಪಕವಾಗಿ ಆವರಿಸಿತ್ತು. ಆ ವೇಳೆ ಎಟಿಎಂ ಕೇಂದ್ರ ಪೂರ್ತಿ ಸುಟ್ಟು ಕರಕಲಾಗಿತ್ತು. ಬೆಂಕಿ ಕೆನ್ನಾಲಿಗೆ ಕಟ್ಟಡಕ್ಕೂ ಹಾನಿ ಮಾಡಿತ್ತು. ಇದರಿಂದ ಪ್ರವೇಶ ದ್ವಾರದ ಪಾರಂಪರಿಕ ಕಲಾತ್ಮಕ ವಿನ್ಯಾಸಕ್ಕೆ ಹಾನಿಯಾಗಿತ್ತು. ಅರಮನೆ ಆವರಣದಲ್ಲೇ ಅಗ್ನಿಶಾಮಕ ಘಟಕವಿದ್ದರೆ ಕೂಡಲೇ ಬೆಂಕಿ ನಂದಿಸಬಹುದಿತ್ತು. ಈ ಘಟನೆಯಿಂದಲೂ ಮೈಸೂರು ಅರಮನೆ ಮಂಡಳಿ ಎಚ್ಚೆತ್ತುಕೊಂಡಿಲ್ಲ. ಶಿಖಾ, ಮೈಸೂರು ಜಿಲ್ಲಾಧಿಕಾರಿಯಾಗಿದ್ದ ವೇಳೆಯಲ್ಲಿ ಅರಮನೆಗೆ ಅಗ್ನಿ ಶಾಮಕ ಸೇವೆ ಕಲ್ಪಿಸುವ ಬಗ್ಗೆ ಪ್ರಕ್ರಿಯೆಗಳು ನಡೆದಿದ್ದವು. ಆದರೆ, ಅವರು ವರ್ಗಾವಣೆಯಾದ ನಂತರ ಅದು ಅಲ್ಲಿಗೆ ನಿಂತು ಹೋಗಿದೆ. ಜಿಲ್ಲಾಧಿಕಾರಿಗಳು, ಮೈಸೂರು ಅರಮನೆ ಮಂಡಳಿ ಕಾರ್ಯನಿರ್ವಾಹಕ ಅಧಿಕಾರಿಯೂ ಆಗಿದ್ದು, ಈ ಬಗ್ಗೆ ಗಮನಹರಿಸುವುದು ಅವಶ್ಯವಾಗಿದೆ.





ವಾರಭವಿಷ್ಯ

19.5.2024 ರಿಂದ 25.5.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ವೃಷಭ, ಚಂದ್ರ-ಕನ್ಯಾ, ತುಲಾ, ವೃಶ್ಚಿಕ, ಕುಜ-ಮೀನ, ಬುಧ-ಮೇಷ, ಗುರು-ವೃಷಭ, ಶುಕ್ರ-ವೃಷಭ, ಶನಿ-ಕುಂಭ, ರಾಹು-ಮೀನ ಮತ್ತು ಕೇತು-ಕನ್ಯಾ

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ' ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
೭ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ನಿಮ್ಮ ಆರ್ಥಿಕ ಪರಿಸ್ಥಿತಿ ಕ್ರಮೇಣ ಸುಧಾರಿಸುತ್ತದೆ. ನಿರುದ್ಯೋಗಿಗಳು ಸಂದರ್ಶನದಲ್ಲಿ ಯಶಸ್ವಿಯಾಗುವರು. ಕುಟುಂಬ ಸದಸ್ಯರು ಮತ್ತು ಆಪ್ತ ಸ್ನೇಹಿತರೊಂದಿಗೆ ಸಂತೋಷದಿಂದ ಕಾಲ ಕಳೆಯುತ್ತೀರಿ. ಪ್ರಮುಖ ಯೋಜನೆಗಳು ಪೂರ್ಣಗೊಳ್ಳಲು ಗುರುಬಲದ ರಕ್ಷೆ ಇದೆ. ಸಣ್ಣ ಕೈಗಾರಿಕೆಯವರಿಗೆ ಕೆಲಸ ಹೆಚ್ಚಳವಾಗಿ ಆದಾಯವೂ ಹೆಚ್ಚಲಿದೆ. ಅಪರಿಚಿತರಿಂದ ಮೋಸ ಹೋಗುವಿರಿ.
– ಶ್ರೀ ಸುಬ್ರಮಣ್ಯಸ್ವಾಮಿ ಪೂಜೆ. ಶುಭ ಸಂಖ್ಯೆ-7

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ವಾರದ ಆರಂಭಕ್ಕೆ ಚಾಕಚಕ್ಯತೆಯಿಂದ ಸಮಸ್ಯೆಗಳನ್ನು ಎದುರಿಸುವಿರಿ. ಆದಾಯ ಕುಂಠಿತವಾಗಿ ಸಾಲ ಮಾಡಬೇಕಾಗಬಹುದು. ವ್ಯಾಪಾರ ವ್ಯವಹಾರಗಳಿಗೆ ಪ್ರತಿಸ್ಪರ್ಧಿಗಳು ಹೆಚ್ಚಾಗುವರು. ಸರ್ಕಾರಿ ಅಧಿಕಾರಿಗಳು ನಿಮ್ಮ ಬೇಡಿಕೆಗೆ ಸ್ಪಂದಿಸದೆ ಬೇಸರ. ಕೆಲವೊಮ್ಮೆ ನಿಮ್ಮದೇ ಆದ ಆಲೋಚನೆಗಳನ್ನು ಜಾರಿಗೊಳಿಸಿ ತೊಂದರೆ ಅನುಭವಿಸುವಿರಿ. ಆಧ್ಯಾತ್ಮಿಕ ಸೇವಾ ಕಾರ್ಯಗಳಲ್ಲಿ ಭಾಗಿಯಾಗಿ ನೆಮ್ಮದಿ ಪಡೆಯಿರಿ.
– ಶ್ರೀ ಲಕ್ಷ್ಮೀ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-4

ಮಿಥುನ (ಕ.ಕಿ.ಕು.ಘ.ಜ.ಛ.ಕೆ.ಕೊ.ಹ)
ಕೈಗೆತ್ತಿಕೊಂಡ ಕೆಲಸ ಕಾರ್ಯಗಳು ನಿರಾಯಾಸವಾಗಿ ಪೂರ್ಣಗೊಳ್ಳುತ್ತವೆ. ವೃತ್ತಿಪರ ಉದ್ಯೋಗಗಳಲ್ಲಿ ಅಧಿಕಾರಿಗಳೊಂದಿಗಿನ ವಿಚಾರ ವಿನಿಮಯ ಅನುಕೂಲಕರವಾಗಿರುತ್ತದೆ. ಹೊಸ ಬಂಡವಾಳ ಹೂಡುವ ಮೊದಲು ಅನುಭವಿಗಳ ಮಾರ್ಗದರ್ಶನ ಪಡೆಯಿರಿ. ಇತರರ ವಿಷಯದಲ್ಲಿ ಅನವಶ್ಯಕ ತಲೆ ಹಾಕಿ ತೊಂದರೆಗೆ ಗುರಿಯಾಗುವಿರಿ. ಅನಾರೋಗ್ಯದ ಕಾರಣ ವೈದ್ಯರ ಸಂದರ್ಶನ ಅನಿವಾರ್ಯವಾಗುವುದು.
– ಶ್ರೀ ಕೃಷ್ಣದರ್ಶನ. ಶುಭ ಸಂಖ್ಯೆ-1

ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)
ವಾರದ ಆದಿಗೆ ಮುಖ್ಯ ವ್ಯವಹಾರಗಳಲ್ಲಿ ಉಂಟಾಗಿದ್ದ ಅಡೆತಡೆಗಳು ನಿವಾರಣೆ ಆಗುವುದು. ಮನೆ ಮಂದಿಯ ಹಾಗೂ ಹಿರಿಯರ ಸಹಕಾರದಿಂದ ವೃತ್ತಿ ಜೀವನದಲ್ಲಿ ಉಂಟಾಗಿದ್ದ ಸಮಸ್ಯೆಗಳಿಂದ ಮುಕ್ತಿ ಹೊಂದುವಿರಿ. ಗೃಹ ನಿರ್ಮಾಣ ಕೆಲಸಗಳು ಮುನ್ನಡೆ ಹೊಂದುವುದು. ಮನೆಯಲ್ಲಿ ಮಂಗಳ ಕಾರ್ಯಗಳು ಜರುಗುವುದು. ವ್ಯಾಪಾರ ವಿಸ್ತರಣೆಗೆ ಬ್ಯಾಂಕ್ ಸಾಲ ದೊರೆಯುವುದು.
– ಶ್ರೀ ಕನಕಧಾರಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-5

ಸಿಂಹ (ಮ.ಮಿ.ಮು.ಮೆ.ಮೊ.ಟ.ಟಿ.ಟು.ಟೆ)
ಈ ವಾರದಲ್ಲಿ ನಿಮ್ಮ ಜೀವನದ ವಿವಿಧ ಅಂಶಗಳ ಬಗ್ಗೆ ಹೆಚ್ಚಿನ ಗಮನವನ್ನು ನೀಡಬೇಕಾಗುತ್ತದೆ. ಗೋಚರದಲ್ಲಿ ಉಂಟಾಗಿರುವ ಗುರು-ಶುಕ್ರ ಸಂಯೋಗದಿಂದ ವ್ಯಾಪಾರದಲ್ಲಿ ವೃದ್ಧಿ ಹಾಗೂ ವರಮಾನ ದ್ವಿಗುಣಗೊಳ್ಳುವುದು. ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಪ್ರಗತಿಯನ್ನು ಸಾಧಿಸುವಿರಿ. ಲೆಕ್ಕ ಸನ್ನದುದಾರರಿಗೆ ದೊಡ್ಡ ಫೈಲ್ ದೊರೆಯುವ ಸಂಭವವಿದೆ. ಅನಪೇಕ್ಷಿತ ಪ್ರಯಾಣಗಳನ್ನು ಮುಂದೂಡಿ.
– ಶ್ರೀ ಆದಿತ್ಯ ಹೃದಯ ಪಠಿಸಿ. ಶುಭ ಸಂಖ್ಯೆ-9

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ಸ್ಥಿರಾಸ್ತಿ ಕ್ರಯ-ವಿಕ್ರಯದಲ್ಲಿ ಉಂಟಾಗಿದ್ದ ತೊಂದರೆಗಳು ದೂರವಾಗಲಿದೆ. ಕಾರ್ಮಿಕ ವರ್ಗದವರಿಗೆ ಸರ್ಕಾರದ ಸವಲತ್ತುಗಳು ದೊರೆಯುವುದು. ಹಳೆ ಗೆಳೆಯರ ಭೇಟಿಯಿಂದ ಮನಸ್ಸು ಹರ್ಷಿತವಾಗುತ್ತದೆ. ದೀರ್ಘಾವಧಿ ಸಾಲದ ಸಮಸ್ಯೆಗಳಿಗೆ ಪರಿಹಾರ ದೊರಕುತ್ತದೆ. ಕುಟುಂಬ ಸದಸ್ಯರೊಂದಿಗೆ ಚರ್ಚಿಸದೆ ಮಾಡಿದ ಕಾರ್ಯಗಳು ಋಣಾತ್ಮಕ ಫಲಿತಾಂಶವನ್ನು ನೀಡುವುದು.
– ಶ್ರೀ ಕುಬೇರ ಮಂತ್ರ ಜಪಿಸಿ. ಶುಭ ಸಂಖ್ಯೆ-8

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಆರ್ಥಿಕ ಸಮಸ್ಯೆಗಳಿಂದ ಮುಕ್ತಿ ದೊರೆಯಲಿದೆ. ದವಸ-ಧಾನ್ಯ ವ್ಯಾಪಾರಗಳು ಸುಗಮವಾಗಿ ನಡೆದು ಕೈ ತುಂಬ ಲಾಭವನ್ನು ಹೊಂದುವಿರಿ. ಸರ್ಕಾರಿ ನೌಕರರಿಗೆ ಬಡ್ತಿಯೊಂದಿಗೆ ವರ್ಗಾವಣೆ ಯೋಗವಿದೆ. ಹೊಸ ವಾಹನ ಖರೀದಿಯ ಕನಸು ನನಸಾಗಲಿದೆ. ವಧು-ವರಾನ್ವೇಷಣೆ ಸಫಲವಾಗಲು ಗುರುಬಲವಿದೆ. ಪ್ರಯತ್ನ ಪುರುಷಾಧೀನ ಫಲ ದೈವಾಧೀನ. ಹೆಚ್ಚು ಮಾತು ಕಲಹಕ್ಕೆ ಕಾರಣವಾಗುವುದು.
– ಶ್ರೀ ಅಶ್ವತ್ಥವೃಕ್ಷ ಪೂಜೆ. ಶುಭ ಸಂಖ್ಯೆ-3

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು
ಈ ವಾರದಲ್ಲಿ ಪ್ರಮುಖ ಕೆಲಸಗಳು ನಿಮಗೆ ಅನುಕೂಲಕರವಾಗಿ ಪರಿಣಮಿಸಲಿದೆ. ಕಾಲ ಕಾಲಕ್ಕೆ ನಿಮ್ಮ ಸಹೋದರ, ಸಹೋದರಿಯರಿಂದ ಬೆಂಬಲವನ್ನು ಪಡೆಯುತ್ತೀರಿ. ಕುಟುಂಬ ಜೀವನ ಸ್ವಲ್ಪ ಏರು-ಪೇರುಗಳನ್ನು ಹೊಂದಬಹುದು. ಉದ್ಯೋಗ ಸ್ಥಳದಲ್ಲಿ ಕ್ಷುಲ್ಲಕ ವಿಷಯಗಳಿಗೆ ಜಗಳವಾಗಲು ಅವಕಾಶ ನೀಡಬೇಡಿ. 'ಮೌನಂ ಕಲಹಂ ನಾಸ್ತಿ' ಎಂಬ ವಾಕ್ಯ ಪಾಲಿಸಿ.
– ಶ್ರೀ ಗಣಪತಿಗೆ ಗರಿಕೆ ಸಮರ್ಪಣೆ. ಶುಭ ಸಂಖ್ಯೆ-7

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
'ಕಾಲಾಯ ತಸ್ಮೈ ನಮಃ' ನಾವು ಕಾಲಕ್ಕೆ ತಲೆಬಾಗಬೇಕು. ಆದಾಯಕ್ಕಿಂತ ಖರ್ಚುಗಳು ಹೆಚ್ಚಾಗುತ್ತವೆ ಹಾಗೂ ಹಣದ ವಿಚಾರ ನಿರಾಶಾದಾಯಕವಾಗಿರುತ್ತದೆ. ನಿಕಟ ಸಂಬಂಧಿಗಳು ಮನೆಗೆ ಆಗಮಿಸುವರು. ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಅಧಿಕಾರಿಗಳ ಸಹಕಾರ ದೊರಕುವುದು. ಮರ-ಮುಟ್ಟು ವ್ಯಾಪಾರಿಗಳಿಗೆ ಉತ್ತಮ ಆದಾಯ ದೊರೆಯುವುದು. ವಾರಾಂತ್ಯಕ್ಕೆ ಮನರಂಜನಾ ಖರ್ಚುಗಳು ದುಬಾರಿ ಎನಿಸಲಿದೆ.
– ಶ್ರೀ ಗುರ್ವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-9

ಮಕರ (ಬೊ.ಜ.ಜಿ.ಖಿ.ಖು.ಖೆ.ಖೊ.ಗ.ಗಿ.)
ಅಂದುಕೊಂಡಿದ್ದೇ ಒಂದು ಆಗುತ್ತಿರುವುದೇ ಮತ್ತೊಂದು ಎಂಬ ಮನಃಸ್ಥಿತಿಗೆ ಗ್ರಹಗತಿಗಳೇ ಕಾರಣ. ಮಂಥನ ಮಾಡದೆ ಅಮೃತ ಸಿಗದು. ಕೈಗೆ ಬಂದ ದುಡ್ಡು ಬಂದಂತೆ ಖರ್ಚಾಗುವುದು. ರಾಜಕಾರಣಿಗಳಿಗೆ ಕಾನೂನು ಉಪದ್ರವಗಳು ಎದುರಾಗುವುದು. ಹೊಸ ಬಂಡವಾಳ ಹೂಡಲು ಕಾಲವು ಪಕ್ವವಾಗಿಲ್ಲ. ವಾರಾಂತ್ಯಕ್ಕೆ ಚಂದ್ರಬಲದ ಕಾರಣ ಮನಸ್ಸಿಗೆ ಹಿತ ನೀಡುವ ಪ್ರಸಂಗಗಳು ನಡೆಯುವುದು.
– ಶ್ರೀ ಶನಿಚಾಲೀಸ ಪಠಿಸಿ. ಶುಭ ಸಂಖ್ಯೆ-4

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ವಾರದಾರಂಭಕ್ಕೆ ವ್ಯಾಪಾರದಲ್ಲಿ ಶ್ರಮಕ್ಕೆ ತಕ್ಕ ಪ್ರತಿಫಲ ದೊರಕುವುದು. ಕೈಗೆತ್ತಿಕೊಂಡ ಕೆಲಸಗಳು ನಿಧಾನವಾಗಿಯಾದರೂ ಸಫಲಗೊಳ್ಳುವುದು. ವಾರ ಮಧ್ಯೆ ಆಧ್ಯಾತ್ಮಿಕ ಸೇವಾ ಕಾರ್ಯಗಳಲ್ಲಿ ಭಾಗವಹಿಸುವಿರಿ. ಕಟ್ಟಡ ಕೆಲಸ ಮಾಡುವ ಇಂಜಿನಿಯರುಗಳಿಗೆ ಉತ್ತಮ ಪ್ರಾಜೆಕ್ಟ್‌ಗಳು ದೊರೆಯಲಿದೆ. ಸಣ್ಣ ಕೈಗಾರಿಕಾ ಉದ್ಯಮಿಗಳಿಗೆ ಉತ್ಸಾಹದಾಯಕ ವಾತಾವರಣವಿರುತ್ತದೆ.
– ಶ್ರೀ ಆಂಜನೇಯ ಉಪಾಸನೆ. ಶುಭ ಸಂಖ್ಯೆ-1

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ಸಮಾಜದ ಪ್ರಮುಖ ವ್ಯಕ್ತಿಗಳ ಸಂಪರ್ಕವು ಲಾಭದಾಯಕವಾಗುತ್ತದೆ. ಕೌಟುಂಬಿಕ ಯೋಜನೆಗಳನ್ನು ಕಾರ್ಯರೂಪಕ್ಕೆ ತೀವ್ರವಾಗಿ ಪ್ರಯತ್ನಿಸುವಿರಿ. ಹಣಕಾಸಿನ ವ್ಯವಹಾರಗಳಲ್ಲಿನ ಅಡೆತಡೆಗಳು ಹಾಗೆಯೇ ಮುಂದುವರೆಯುವುದು. ವಾರಮಧ್ಯೆ ಸಂತಸ ತರುವ ವಾರ್ತೆಯೊಂದು ಬರಲಿದೆ. ವಿದ್ಯುತ್ ಯಂತ್ರಗಳ ಮೇಲೆ ಕೆಲಸ ಮಾಡುವಾಗ ಜಾಗೃತರಾಗಿರಿ. ಪ್ರಯಾಣ ಮಧ್ಯೆ ತೊಂದರೆಗಳು ಉಂಟಾದೀತು.
– ಶ್ರೀ ರಾಮರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-5.

ಸದಾಚಾರದಿಂದ ನಡೆಯಲು ಗುರುಗಳ ಮಾರ್ಗದರ್ಶನ ಅವಶ್ಯಕ

ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯ



ಧಾರ್ಮಿಕ ಸಭೆಯನ್ನು ವಾಟಾಳು ಮಠದ ಶ್ರೀಸಿದ್ದಲಿಂಗ ಶಿವಾಚಾರ್ಯಸ್ವಾಮೀಜಿ ಉದ್ಘಾಟಿಸಿದರು.

ತಿ.ನರಸೀಪುರ, ಮೇ 18– ಭಕ್ತರು ಧಾರ್ಮಿಕ ಆಚರಣೆಗಳನ್ನು ರೂಢಿಸಿಕೊಳ್ಳಲು, ಜೀವನದಲ್ಲಿ ಸದಾಚಾರದಿಂದ ನಡೆಯಲು, ನಿಯಮಿತವಾಗಿ ಜೀವನ ನಡೆಸಲು ಮಠದ ಗುರುಗಳ ಮಾರ್ಗದರ್ಶನ ಅವಶ್ಯಕ ಎಂದು ಸುತ್ತೂರು ವೀರಸಂಹಾಸನ ಮಹಾಸಂಸ್ಥಾನ ಮಠದ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಕೊತ್ತೇಗಾಲದಲ್ಲಿ ಶನಿವಾರ ನಡೆದ ಶ್ರೀಮನ್ನಿರಂಜನ ಗುರು ಮಲ್ಲೇಶ್ವರ ದಾಸೋಹ ಮಠದ 20ನೇ ವಾರ್ಷಿಕೋತ್ಸವದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ ಮಾತನಾಡಿದ ಅವರು, ಮಠಗಳು ಹಾಗೂ ಭಕ್ತರ ನಡುವಿನ ಸಂಬಂಧ ಅನ್ಯೋನ್ಯವಾಗಿದ್ದು, ಮಠ ಮತ್ತು ಭಕ್ತರ ಸಂಬಂಧ ಮೀನು ಮತ್ತು ನೀರಿನ ಸಂಬಂಧವಿದ್ದಂತೆ. ನೀರನ್ನು ಬಿಟ್ಟು ಮೀನು ಇರದು. ಹಾಗೆಯೇ ಮೀನು ಇಲ್ಲದಿದ್ದರೆ ನೀರು ಶುಚಿಯಾಗಲ್ಲ. ಎರಡೂ ಪರಸ್ಪರ ಪೂರಕವಾದಂತದ್ದು, ಇಲ್ಲಿ ಭಕ್ತರು ನೀರಿನ ಹಾಗೆ, ಸ್ವಾಮೀಜಿಗಳು ಮೀನಿದ್ದಂತೆ, ಸ್ವಾಮೀಜಿಗಳು ಇದ್ದರೆ ಸಮಾಜ ಯಾವಾಗಲೂ ಸ್ವಚ್ಛವಾಗಿರುತ್ತದೆ ಎಂದರ್ಥ ಎಂದರು.

ಮಠಗಳು ಮನುಷ್ಯನಲ್ಲಿ ಭಕ್ತಿ ಭಾವನೆ ಮೂಡಿಸಿ ಮನಸ್ಸಿಗೆ ಶಾಂತಿ ನೆಮ್ಮದಿ ಉಂಟು ಮಾಡುತ್ತವೆ. ಗುರು ಮಲ್ಲೇಶ್ವರರು ಕಂತೆ ಭಿಕ್ಷೆಯ ಪರಿಕಲ್ಪನೆ ಕೊಟ್ಟಿದ್ದು, ಯಾವುದೇ ಮಠಕ್ಕೆ ಸ್ವಾಮೀಜಿಯಾದರೂ ನಾನು ಅನ್ನುವ, ನನ್ನ ಮಠ ಎನ್ನುವ ಭಾವನೆ ಇರಬಾರದು. ಬದಲಿಗೆ ಅದು ಭಗವಂತ ಸೇವೆ ಮಾಡಲು ಕೊಟ್ಟ ಅವಕಾಶ ಎಂದುಕೊಳ್ಳಬೇಕು ಎಂದರು.

ಗುರು ಮಲ್ಲೇಶ್ವರರು ಕಂತೆ ಭಿಕ್ಷೆ ಮೂಲಕ ಮಠಕ್ಕೆ ಯಾರೇ ಬಂದರೂ ಪ್ರಸಾದ ಸ್ವೀಕರಿಸಬೇಕೆಂಬ ಉದ್ದೇಶ ಹೊಂದಿದ್ದರು. ಕಂತೆ ಭಿಕ್ಷೆ ಯಾರಿಗೆ ಹಾಕಿದೆವು ಎಂಬುದು ಭಿಕ್ಷೆ ಹಾಕಿದವರಿಗೆ ಗೊತ್ತಾಗಬಾರದು. ಊಟ ಮಾಡಿದವರಿಗೆ ಯಾರು ಕೊಟ್ಟರು ಎಂಬುದು ಗೊತ್ತಾಗಬಾರದೆಂಬುದು ಕಂತೆ ಭಿಕ್ಷೆ ಉದ್ದೇಶವಾಗಿತ್ತು ಎಂದರು.

ಬೆಟ್ಟಕ್ಕೆ ಹೋದರೆ ವಾಪಸ್ ಬರುವುದಿಲ್ಲ ಎಂಬುದಿತ್ತು: ಹಿಂದಿನ ಕಾಲದಲ್ಲಿ ವಾಹನಗಳ ಸೌಲಭ್ಯಗಳಿರಲಿಲ್ಲ. ಭಕ್ತರು ಮಹದೇಶ್ವರಬೆಟ್ಟ ಸೇರಿದಂತೆ ಎಲ್ಲೆಡೆಗೆ ಬುತ್ತಿಯನ್ನು ತಲೆ ಮೇಲೆ ಹೊತ್ತು ನಡೆದೆ ಹೋಗಬೇಕಿತ್ತು. ಹಿಂದೆ ಮಾದಪ್ಪನ ಬೆಟ್ಟಕ್ಕೆ ಹೋಗಬೇಕಾದರೆ ಬೀಳ್ಕೊಡುಗೆ ನೀಡಲಾಗುತ್ತಿತ್ತು. ಬೆಟ್ಟಕ್ಕೆ ಹೋದವರು ಬರುತ್ತಾರೋ ಇಲ್ಲವೋ ಎಂಬಂತಾಗಿತ್ತು. ಬೆಟ್ಟದಿಂದ ಹೋದವರು ವಾಪಸ್ ಬಂದರೆ ಮಾದಪ್ಪನೇ ಬಂದ ಎಂದು ಜನ ಮೆರವಣಿಗೆ ಮಾಡಿ ಊರಿಗೆ ಕರೆದೊಯ್ಯುತ್ತಿದ್ದರು. ಆಗ ನಡೆದು ಹೋಗುವ ಅನಿವಾರ್ಯತೆ ಇತ್ತು. ಇದೀಗ ಆಧುನಿಕ ಸೌಲಭ್ಯಗಳಿವೆ. ಬೆಳಗ್ಗೆ ಹೋಗಿ ಕೈ ಮುಗಿದು ಮಧ್ಯಾಹ್ನ ವಾಪಸ್ಸಾಗಬಹುದಾಗಿದೆ. ನಡೆದು ಹೋಗುವಾಗ ಸಾಲು ಮರಗಳನ್ನು ನೆಡಲಾಗಿತ್ತು. ನಡೆಯುವಾಗ ವಿಶ್ರಾಂತಿಗಾಗಿ ಬೇರೆಲ್ಲೂ ಆಶ್ರಯಿಸಬಾರದೆಂಬ ಉದ್ದೇಶವಿತ್ತು. ಮರದ ಕೆಳಗೆ ವಿಶ್ರಾಂತಿ ಮಾಡಿ ಬುತ್ತಿ ಊಟ ಮಾಡಿ ಗಾಳಿ ಸೇವನೆ ಮಾಡುತ್ತಿದ್ದರು ಎಂದರು.

ಕಾರ್ಯಕ್ರಮದಲ್ಲಿ ಕೊತ್ತೇಗಾಲ ಮನ್ನಿರಂಜನ ಗುರುಮಲ್ಲೇಶ್ವರ ದಾಸೋಹ ಮಠದ ನಾಗಪ್ಪಸ್ವಾಮಿ, ಕನಕಪುರ ದೇಗುಲ ಮಠದ ಮುಮ್ಮಡಿ ನಿರ್ವಾಣ ಸ್ವಾಮಿ, ದೇವನೂರು ಗುರುಮಲ್ಲೇಶ್ವರ ದಾಸೋಹ ಮಠದ ಮಹಾಂತಸ್ವಾಮಿ, ವಾಟಾಳು ಮಠದ ಸಿದ್ದಲಿಂಗ ಶಿವಾಚಾರ್ಯ ಸ್ವಾಮಿ, ಮೈಸೂರು ಹೊಸಮಠದ ಚಿದಾನಂದ ಸ್ವಾಮಿ, ಸೋಮನಹಳ್ಳಿ ಶಿಲಾಮಠದ ಸಿದ್ದಮಲ್ಲಸ್ವಾಮಿ, ಕುಂದೂರು ಮಠದ ಶರತ್‌ಚಂದ್ರ ಸ್ವಾಮಿ, ಹುಬ್ಬಳ್ಳಿ ವಿರಕ್ತ ಮಠದ ರೇವಣ್ಣ ಸಿದ್ದೇಶ್ವರಸ್ವಾಮಿ, ಮಾದ್ರಹಳ್ಳಿ ಮಠದ ಶಾಂತಮಲ್ಲಿಕಾರ್ಜುನ ಸ್ವಾಮಿ, ಮುಡುಕನಪುರ ಹಲವಾರ ಮಠದ ಷಡಕ್ಷರಿ ದೇಶಿಕೇಂದ್ರಸ್ವಾಮಿ, ಮಲ್ಲನಮೂಲೆ ಕಂಬಳೇಶ್ವರ ಮಠದ ಚನ್ನಬಸವ ಸ್ವಾಮೀಜಿ, ಉದ್ಯಮಿ ನಿರಂಜನ್ ಪಮತ್ ಸೇರಿದಂತೆ ಹರಗುರು ಚರಮೂರ್ತಿಗಳು, ಕೊತ್ತೇಗಾಲ ಗ್ರಾಮಸ್ಥರು, ಯಜಮಾನರು ಹಾಜರಿದ್ದರು.

> ಕೈಲಾಸ ದೊಡ್ಡದಲ್ಲ, ಅನುಭವ ದೊಡ್ಡದು ಎಂಬುದನ್ನು ಗುರುಮಲ್ಲೇಶ್ವರರು ಚಾಚು ತಪ್ಪದೇ ಪಾಲಿಸಿಕೊಂಡು ಬಂದಿದ್ದರು. ತನ್ನೊಳಗಿನ ಅರಿವೇ ಗುರು ಎಂಬುದನ್ನು ಅವರು ತೋರಿಸಿಕೊಟ್ಟಿದ್ದರು. ಆಧುನಿಕ ಕಾಲದಲ್ಲಿ ಜನರು ಶ್ರೀಮಂತಿಕೆಗೆ ಮಾರುಹೋಗಿ ಕಾಯಕದಿಂದ ಗಳಿಸಿದ್ದನ್ನು ದಾಸೋಹದಲ್ಲಿ ಬಳಕೆ ಮಾಡುತ್ತಿಲ್ಲ. ಗಳಿಕೆ ಮಾಡುತ್ತಿದ್ದೀರಾ ಆದರೆ ವಿನಿಯೋಗ ಸರಿಯಾಗಿ ಆಗುತ್ತಿಲ್ಲ. ದೂರದ ದೇವಸ್ಥಾನಕ್ಕೆ ಕುಟುಂಬ ಸಮೇತ ಹೋಗಿ ಹುಂಡಿಗೆ ದುಡ್ಡು ಹಾಕಿ ಬರುತ್ತೀರಾ. ಆದರೆ ಮನೆಯಲ್ಲಿ ನಿಮ್ಮ ಜೊತೆಯಲ್ಲಿರುವ ತಂದೆ ತಾಯಿ ಕಡೆಗಾಣಿಸುವುದು ಕಾಣ ಸಿಗುತ್ತದೆ. ನಾಲ್ವರು ಮಕ್ಕಳಿದ್ದರೆ ತಂದೆ ತಾಯಿ ಸಾಕುವವರು ಯಾರು ಎಂಬ ಲೆಕ್ಕಾಚಾರ ಹಾಕುವಂತಾಗಿದೆ. ಇದಕ್ಕೆ ನಾವೆಲ್ಲಾ ನಾಚಿಕೆ ಪಡುವಂತಾಗಿದೆ
>
> - ಗೌರಿಶಂಕರಸ್ವಾಮಿ,
> ಮದ್ದಾರಲಿಂಗಯ್ಯನಹುಂಡಿ ವಿರಕ್ತ ಮಠದ ಪೀಠಾಧ್ಯಕ್ಷ.

ಮಳೆ: ಹೊನ್ನೇನಹಳ್ಳಿಯಲ್ಲಿ ಮನೆ ಗೋಡೆ ಕುಸಿತ



ಹಿರೀಕ್ಯಾತನಹಳ್ಳಿ, ಮೇ 18– ಗಾವಡಗೆರೆ ಹೋಬಳಿಯಾದ್ಯಂತ ಕಳೆದ ಐದಾರು ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ಇಲ್ಲಿನ ಬಿಳಿಗೆರೆ ಗ್ರಾಪಂ ವ್ಯಾಪ್ತಿಯ ಹೊನ್ನೇನಹಳ್ಳಿ ಗ್ರಾಮದಲ್ಲಿ ಮನೆಗಳ ಗೋಡೆಗಳು ಕುಸಿದು ಬಿದ್ದಿವೆ.

ಗ್ರಾಮದ ನಿವಾಸಿಗಳಾದ ಸಾಕಮ್ಮ ಮತ್ತು ಮಣಿಯಮ್ಮ ಅವರಿಗೆ ಸೇರಿದ ಮನೆಗಳ ಗೋಡೆಗಳು ಕುಸಿದು ಬಿದ್ದಿದೆ. ಅಲ್ಲದೇ ಮನೆಯ ಮೇಲ್ಛಾವಣಿ ಮರದ ತುಂಡು ಬಿದ್ದು ಮಳೆ ನೀರು ಮನೆಗೆ ಆವರಿಸಿ, ದವಸ ಧಾನ್ಯಗಳು ಸೇರಿದಂತೆ ಬೆಲೆಬಾಳುವ ವಸ್ತುಗಳು ನಾಶವಾಗಿವೆ. ಅಲ್ಲದೇ ಇಡೀ ಕುಟುಂಬ ರಾತ್ರಿ ಪೂರ್ತಿ ಜಾಗರಣೆ ಮಾಡುವ ಸ್ಥಿತಿ ನಿರ್ಮಾಣವಾಗಿದೆ ಎಂದರು.

ಕಳೆದ ಒಂದು ವಾರದಿಂದ ಸುರಿಯುತ್ತಿರುವ ಮಳೆಗೆ ತಂಬಾಕು ಬೆಳೆ ನಾಶವಾಗುತ್ತಿದೆ. ಈ ಹಿಂದೆ ಮಳೆ ಬೀಳದಿದ್ದಾಗ ಮಳೆಯಾಗಲೆಂದು ಕಪ್ಪೆ ಮೆರವಣಿಗೆ, ಕತ್ತೆ ಮೇಲೆ ದೇವರ ಮೆರವಣಿಗೆ ಮಾಡುತ್ತಿದ್ದ ರೈತರು ಇದೀಗ ಮಳೆ ಬಾರದಿರಲೆಂದು ದೇವರ ಮೊರೆ ಹೋಗುತ್ತಿದ್ದಾರೆ.

ಇನ್ನು ಮಳೆಯಿಂದ ಮನೆಗಳ ಗೋಡೆಗಳು ಕುಸಿದು ಬಿದ್ದ ಸ್ಥಳಕ್ಕೆ ಬಿಳಿಗೆರೆ ಗ್ರಾಪಂ ಪಿಡಿಓ ಶೀಲಾ, ಗ್ರಾಮ ಆಡಳಿತಾಧಿಕಾರಿ ಚೈತ್ರ ಭೇಟಿ ನೀಡಿ ಪರಿಶೀಲನೆ ನಡೆಸಿ ಮೇಲಧಿಕಾರಿಗಳಿಗೆ ವರದಿ ನೀಡಿ ಸರ್ಕಾರದಿಂದ ಪರಿಹಾರ ಕೊಡಿಸುವ ಭರವಸೆ ನೀಡಿದ್ದಾರೆ.

ತಗಡೂರಲ್ಲಿ ಕಾಲರಾ ಉಲ್ಬಣ: 76 ಮಂದಿ ಆಸ್ಪತ್ರೆಗೆ ದಾಖಲು



ನಂಜನಗೂಡು, ಮೇ 18– ಕಲುಷಿತ ಬೋರ್‌ವೆಲ್ ನೀರು ಸೇವನೆಯಿಂದ ತಾಲೂಕಿನ ತಗಡೂರು ಗ್ರಾಮದಲ್ಲಿ ಕಾಲರಾ ಸೋಂಕು ಉಲ್ಬಣಗೊಂಡಿದ್ದು, ಶನಿವಾರ ಮೂವರು ಸೇರಿದಂತೆ ಇದುವರೆಗೂ 76 ಮಂದಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಜಿಲ್ಲಾ ಸರ್ವೇಕ್ಷಣ ಅಧಿಕಾರಿಗಳ ತಂಡ, ನುರಿತ ಐವರು ತಜ್ಞ ವೈದ್ಯರ ತಂಡ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದು, ತಗಡೂರು ಸಾರ್ವಜನಿಕ ಆಸ್ಪತ್ರೆ, ನಗರದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಚಿಕಿತ್ಸೆ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಚಿಕಿತ್ಸೆಗಾಗಿ ಮೂವರನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರೆಲ್ಲಾ ಚೇತರಿಸಿಕೊಳ್ಳುತ್ತಿದ್ದಾರೆ.

ಗ್ರಾಮದಲ್ಲಿ 12 ಕೊಳವೆ ಬಾವಿಗಳಿದ್ದು, ಈ ಪೈಕಿ 4 ಕೊಳವೆ ಬಾವಿಗಳ ನೀರು ಕುಡಿಯಲು ಯೋಗ್ಯವಾಗಿಲ್ಲ ಆ ಬಾವಿಗಳಿಂದ ನೀರು ತೆಗೆದುಕೊಳ್ಳದಂತೆ ಈಗಾಗಲೇ ಗ್ರಾಮಸ್ಥರಿಗೆ ತಿಳಿಸಿ ಕ್ರಮ ವಹಿಸಲಾಗಿದೆ. ತಾಲೂಕು ಪಂಚಾಯಿತಿಯಿಂದಲೂ ಪರ್ಯಾಯವಾಗಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ.

ಚಿಕಿತ್ಸೆ ನೀಡಲು ಸಕಲ ಕ್ರಮ: ತಗಡೂರು ಗ್ರಾಮಕ್ಕೆ ನುರಿತ ವೈದ್ಯರ ತಂಡ ಭೇಟಿ ನೀಡಿ ಕುಡಿಯುವ ನೀರಿನ ಬಾವಿಗಳ ಪರಿಶೀಲಿಸಿದ್ದಾರೆ. ಐವರು ಆರೋಗ್ಯ ಅಧಿಕಾರಿಗಳು, ನುರಿತ ದಾದಿಯರು, ಹಿರಿಯ ವೈದ್ಯರ ತಂಡ, ಆಶಾ ಕಾರ್ಯಕರ್ತೆಯರು ಸ್ಥಳದಲ್ಲಿದ್ದು ಪರಿಸ್ಥಿತಿ ನಿಯಂತ್ರಣಕ್ಕೆ ತಂದಿದ್ದಾರೆ. ರೋಗಿಗಳಿಗೆ ಫ್ಲೂ ್ಯಯಡ್, ಪ್ರತಿರೋಧ ನಿರೋಧಕ ಚುಚ್ಚುಮದ್ದು ನೀಡಲಾಗಿದೆ. ಗ್ರಾಮಗಳಲ್ಲಿ ಹಬ್ಬಗಳ ಆಚರಣೆ ಸಂದರ್ಭ ಶುಚಿತ್ವವಿಲ್ಲದ ಮಾಂಸದ ಅಡುಗೆ ಸೇವನೆ ಕೂಡ ಸೋಂಕಿಗೆ ಕಾರಣವಿರಬಹುದು. ಪರಿಸ್ಥಿತಿ ನಿಯಂತ್ರಣದಲ್ಲಿದ್ದು, ಅಗತ್ಯವಿದ್ದರೆ ನುರಿತ ವೈದ್ಯರು, ತುರ್ತು ಚಿಕಿತ್ಸಾ ವಾಹನಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಲಾಗಿದ್ದು, ಭಯಪಡುವ ಅಗತ್ಯವಿಲ್ಲ. ಸೋಂಕನ್ನು ನಿಯಂತ್ರಣದಲ್ಲಿಡಲು ಅಗತ್ಯ ಕ್ರಮಗಳನ್ನು ವಹಿಸಲಾಗಿದೆ. ಜಿಲ್ಲಾ ಆಸ್ಪತ್ರೆಯ ನುರಿತ ವೈದ್ಯರ ತಂಡ ಸೇವೆಯಲ್ಲಿದ್ದು, ಭಯ ಪಡುವ ಅಗತ್ಯವಿಲ್ಲ ಎಂದು ತಾಲೂಕು ಆರೋಗ್ಯ ಅಧಿಕಾರಿ ಈಶ್ವರ್ ಕಾಟ್ಕೆ ತಿಳಿಸಿದರು.

ಸ್ಥಳಕ್ಕೆ ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ತಾಪಂ ಇಓ, ಜಿಲ್ಲಾ ಆರೋಗ್ಯ ಅಧಿಕಾರಿಗಳು, ತಾಲೂಕು ಆರೋಗ್ಯ ಅಧಿಕಾರಿಗಳು, ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದಾರೆ.

ಚುನಾವಣೆಯಲ್ಲಿ ನನ್ನನ್ನು ಬೆಂಬಲಿಸಿ: ಪುಟ್ಟಸಿದ್ದಶೆಟ್ಟಿ ಮನವಿ



ಸುದ್ದಿಗೋಷ್ಠಿಯಲ್ಲಿ ಕೆ.ಸಿ.ಪುಟ್ಟಸಿದ್ದಶೆಟ್ಟಿ ಮಾತನಾಡಿದರು.

ಹೆಚ್.ಡಿ.ಕೋಟೆ, ಮೇ 18– ಮುಖ್ಯಮಂತ್ರಿ ಸಿದ್ದರಾಮಯ್ಯನವರ ಆಡಳಿತದಲ್ಲಿ ಶಿಕ್ಷಣ ಕ್ಷೇತ್ರ ಸಂಪೂರ್ಣ ಹಳಿ ತಪ್ಪಿದ್ದು, ಅತಿಥಿ ಶಿಕ್ಷಕರನ್ನು ಕಾಯಂಗೊಳಿಸದೆ ಅನ್ಯಾಯ ಮಾಡಲಾಗುತ್ತಿದೆ ಎಂದು ದಕ್ಷಿಣ ಶಿಕ್ಷಕರ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಕೆ.ಸಿ.ಪುಟ್ಟಸಿದ್ದಶೆಟ್ಟಿ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಶಿಕ್ಷಕರ ನೇಮಕಾತಿ ನಡೆಯದೆ 15 ಲಕ್ಷ ವಿದ್ಯಾರ್ಥಿಗಳು ಅತಿಥಿ ಶಿಕ್ಷಕರನ್ನು ಅವಲಂಬಿಸಿದ್ದಾರೆ. ಹೀಗಾಗಿ ಕೂಡಲೇ ಸರ್ಕಾರ ಅತಿಥಿ ಶಿಕ್ಷಕರನ್ನು ಕಾಯಂಗೊಳಿಸಬೇಕಿದೆ ಎಂದರು.

ಮುಖ್ಯಮಂತ್ರಿ, ಶಿಕ್ಷಣ ಸಚಿವರು ಅತಿಥಿ ಶಿಕ್ಷಕರು, ಪದವಿ ಕಾಲೇಜು ಉಪನ್ಯಾಸಕರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ. ಶಿಕ್ಷಣ ಕ್ಷೇತ್ರದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಇದಕ್ಕೆ ಸರ್ಕಾರ ಕಡಿವಾಣ ಹಾಕದಿದ್ದರೆ ಸಾರ್ವಜನಿಕವಾಗಿ ಹೋರಾಟ ಮಾಡಬೇಕಾಗುತ್ತದೆ ಎಂದರು.

ನಾನು ದಕ್ಷಿಣ ಶಿಕ್ಷಕರ ಕ್ಷೇತ್ರದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದು ಮತದಾರರು ನನ್ನನ್ನು ಬೆಂಬಲಿಸಿ, ನನಗೆ ಪ್ರಥಮ ಪ್ರಾಶಸ್ತ್ಯದ ಮತವನ್ನು ನೀಡಿ ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಕಾಯಕ ಸಮಾಜ ಒಕ್ಕೂಟದ ರಾಜ್ಯ ಸಂಚಾಲಕ ಕೆಂಪಶೆಟ್ಟಿ ಜಿಲ್ಲಾ ಉಪಾಧ್ಯಕ್ಷ ಶಿವಪ್ಪಶೆಟ್ಟಿ ಹಾಜರಿದ್ದರು.

ಬೆಟ್ಟದಪುರದಲ್ಲಿ ಬಸವ ಜಯಂತಿ ಪೂರ್ವಭಾವಿ ಸಭೆ



ಶ್ರೀಪವಾಡ ಬಸವೇಶ್ವರ ದೇವಾಲಯದ ಆವರಣದಲ್ಲಿ ಬಸವ ಜಯಂತಿ ಪೂರ್ವಭಾವಿ ಸಭೆ ನಡೆಯಿತು.

ಬೆಟ್ಟದಪುರ, ಮೇ 18– ಗ್ರಾಮದ ಶ್ರೀಪವಾಡ ಬಸವೇಶ್ವರ ದೇವಾಲಯದ ಆವರಣದಲ್ಲಿ ಬಸವ ಜಯಂತಿ ಪೂರ್ವಭಾವಿ ಸಭೆ ನಡೆಯಿತು.

ಮೈಸೂರು ಜಿಲ್ಲಾ ಬಸವ ಬಳಗದ ಅಧ್ಯಕ್ಷ ಪ್ರದೀಪ್ ಮಾತನಾಡಿ, ಜೂ.9 ರಂದು ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಕಾಯಕ ಯೋಗಿ ಶ್ರೀಬಸವೇಶ್ವರರ ಬಸವ ಜಯಂತಿ ನಡೆಯಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಜಿಲ್ಲಾ ಕಾರ್ಯದರ್ಶಿ ಸ್ವಾಮಿ ಮಾತನಾಡಿ, ವೀರಶೈವ ಲಿಂಗಾಯತ ಸಮಾಜದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಅಂದು ನಡೆಯುವ ವೈಭವದ ಬಸವ ಜಯಂತಿ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಇದೇ ವೇಳೆ ಕಾರ್ಯಕ್ರಮದ ಸಿದ್ಧತೆ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ನಿವೃತ್ತ ಪಿಡಿಓ ಶಿವಯೋಗಿ, ಬೆಟ್ಟದಪುರ ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಶಿವದೇವ್, ತಾಲೂಕು ಶಿವಕುಮಾರ ಸ್ವಾಮೀಜಿ ಸಂಘಗಳ ಅಧ್ಯಕ್ಷ ಕೂರ್ಗಲ್ ಶಿವಕುಮಾರಸ್ವಾಮಿ, ತಾಲೂಕು ರೈತ ಸಂಘದ ಅಧ್ಯಕ್ಷ ಅನಂತ್, ತಾಲೂಕು ಯುವ ಘಟಕದ ಅಧ್ಯಕ್ಷ ಮಂಜು, ಸುರಗಳ್ಳಿ ವಿದ್ಯಾಶಂಕರ್, ಶಿವು, ಸಂಜಯ್, ವಿಕಾಸ್, ಎಸ್.ಮಲ್ಲೇಶ್, ಮಹದೇವಪ್ಪ, ಜೈಲಿಂಗಪ್ಪ, ಕುಮಾರಸ್ವಾಮಿ, ದ್ಯಾವಪ್ಪಾಜಿ, ಕೆಂಪಣ್ಣ, ಮಂಜು, ವಿಶ್ವೇಶ್ವರಯ್ಯ, ಶಾಂತಪ್ಪ ಇನ್ನಿತರರಿದ್ದರು.

ಗೃಹಸಚಿವ ಪರಮೇಶ್ವರ್ ರಾಜೀನಾಮೆಗೆ ಆಗ್ರಹ



ಪಿರಿಯಾಪಟ್ಟಣ, ಮೇ 18– ರಾಜ್ಯದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ದಿನೇ ದಿನೆ ಹೆಚ್ಚಾಗುತ್ತಿದ್ದು, ಕಾನೂನು ವ್ಯವಸ್ಥೆ ಕಾಪಾಡುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ. ಹೀಗಾಗಿ ಇದರ ನೈತಿಕ ಹೊಣೆ ಹೊತ್ತು ಗೃಹ ಸಚಿವ ಜಿ.ಪರಮೇಶ್ವರ್ ಕೂಡಲೆ ರಾಜೀನಾಮೆ ನೀಡಬೇಕು ಎಂದು ಮೈಸೂರು ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ನಳಿನಿಗೌಡ ಒತ್ತಾಯಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಹುಬ್ಬಳ್ಳಿಯೊಂದರಲ್ಲೇ ತಿಂಗಳೊಳಗಾಗಿ ಇಬ್ಬರು ಯುವತಿಯರ ಹತ್ಯೆ ನಡೆದಿದೆ. ಇನ್ನು ಪೆನ್‌ಡ್ರೈವ್ ಪ್ರಕರಣದಲ್ಲಿ ಯಾರೋ ಮಾಡಿದ ಕೃತ್ಯಕ್ಕೆ ಮಹಿಳೆಯರ ಮಾನಹಾನಿಯಾಗಿದೆ. ಈ ಪ್ರಕರಣವನ್ನು ತನ್ನ ರಾಜಕೀಯಕ್ಕಾಗಿ ಬಳಸಿಕೊಳ್ಳುತ್ತಿರುವ ಸರ್ಕಾರದ ನಡೆ ಖಂಡನೀಯ. ಹೀಗಾಗಿ ಕೂಡಲೇ ಗೃಹ ಸಚಿವ ಜಿ.ಪರಮೇಶ್ವರ್ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಸರಗೂರಲ್ಲಿ ಕಸಾಪ 110ನೇ ಸಂಸ್ಥಾಪನಾ ದಿನಾಚರಣೆ



ಕಸಾಪ 110ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಡಾ.ವೈ.ಡಿ.ರಾಜಣ್ಣ ಮಾತನಾಡಿದರು.

ಸರಗೂರು, ಮೇ 18– ಕನ್ನಡ ಸಾಹಿತ್ಯ ಪರಿಷತ್ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ. ಕನ್ನಡಿಗರ ಬದುಕು ಹಸನಾಗಬೇಕೆಂಬ ಆಶಯದಿಂದ ಕನ್ನಡ ಸಾಹಿತ್ಯ ಪರಿಷತ್ ಆರಂಭವಾಯಿತು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ ತಿಳಿಸಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ ಸರಗೂರು ಕನ್ನಡ ಸಾಹಿತ್ಯ ಪರಿಷತ್ ಮತ್ತು ಪದವಿ ಕಾಲೇಜು ಸಹಯೋಗದಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್‌ನ 110ನೇ ಸಂಸ್ಥಾಪನಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡ ಭಾಷೆ, ಸಾಹಿತ್ಯ, ಕಲೆ, ಜನಪದ, ಸಂಸ್ಕೃತಿಗಳ ಸಂವರ್ಧನೆ ಹಾಗೂ ಸಂರಕ್ಷಣೆ ಮಹದಾಶಯದೊಂದಿಗೆ ಸ್ವತಂತ್ರಾಧಿಕಾರವುಳ್ಳ ಪರಿಷತ್ತೊಂದು ಇರಬೇಕು ಮತ್ತು ಸರ್ಕಾರ ಆ ಪರಿಷತ್ತನ್ನು ಅಂಗೀಕರಿಸಿ ಅದಕ್ಕೆ ವಿಶೇಷ ಸಹಾಯ ಮಾಡುವುದು ಉಚಿತ ಎಂದು 1914ರಲ್ಲಿ ಅಂದಿನ ಮೈಸೂರು ಸಂಸ್ಥಾನದ ಸಂಪದಭ್ಯುದಯ ಸಮಾಜ ತನ್ನ ವಾರ್ಷಿಕ ಅಧಿವೇಶನದಲ್ಲಿ ಕೈಗೊಂಡ ಮಹತ್ವದ ನಿರ್ಧಾರ ಕನ್ನಡ ಸಾಹಿತ್ಯ ಪರಿಷತ್ತಿನ ಉಗಮಕ್ಕೆ ಕಾರಣವಾಯಿತು. ಆಗ ಮೈಸೂರು ಅರಸರಾಗಿದ್ದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಪರಿಷತ್ತಿನ ಸ್ಥಾಪನೆಗೆ ಚಾಲನೆ ನೀಡಿದರು. ಬೆಂಗಳೂರಿನಲ್ಲಿ ಆರಂಭವಾದ ಅಂದಿನ ಕರ್ಣಾಟಕ ಸಾಹಿತ್ಯ ಪರಿಷತ್ತೇ ಇಂದು 'ಕನ್ನಡ ಸಾಹಿತ್ಯ ಪರಿಷತ್ತು' ಆಗಿ ಹೆಮ್ಮರವಾಗಿ ಬೆಳೆದಿದೆ. ಕನ್ನಡ ಸಾಹಿತ್ಯ, ಸಂಸ್ಕೃತಿ, ಕಲೆ, ಸಂಗೀತ, ರಂಗಭೂಮಿ ಜನಪದ ಕಲೆಗಳನ್ನು ಸಂರಕ್ಷಿಸುವುದು, ಸಾಹಿತಿ, ಕಲಾವಿದರನ್ನು ಪ್ರೋತ್ಸಾಹಿಸುವುದು, ಕನ್ನಡ ನಾಡಿನ ಏಕೀಕರಣ ಕೂಡ ಕಸಾಪ ಆರಂಭದ ಪ್ರಮುಖ ಉದ್ದೇಶ ಆಗಿತ್ತು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ತಾಲೂಕು ಕಸಾಪ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ, ಕನ್ನಡ ಭಾಷೆ ಬೆಳವಣಿಗೆ, ಕರ್ನಾಟಕ ಏಕೀಕರಣ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ಪ್ರಾತಿಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕಳೆದ ಒಂದು ಶತಮಾನಕ್ಕೂ ಹೆಚ್ಚು ಅವಧಿಯಲ್ಲಿ ಶ್ರೇಷ್ಠ ಮಹನೀಯರ ಅಧ್ಯಕ್ಷತೆಗಳಲ್ಲಿ ನಡೆಸಿರುವ ಸಮ್ಮೇಳನಗಳ ಕೊಡುಗೆ ಚಾರಿತ್ರಿಕ ಮಹತ್ವ ಹೊಂದಿದೆ. ಈ ಕಾರ್ಯಕ್ರಮಗಳಲ್ಲದೆ ಅನೇಕ ಸಾಹಿತ್ಯಕ, ಸಾಂಸ್ಕೃತಿಕ, ಚಾರಿತ್ರಿಕ ಮತ್ತು ವರ್ತಮಾನದ ಪ್ರಸ್ತುತತೆಗಳಿಗೆ ಅನುಗುಣವಾದ ಅನೇಕ ಮಹತ್ವದ ಕಾರ್ಯಕ್ರಮಗಳನ್ನೂ ಸಹಾ ಪರಿಷತ್ತು ನಡೆಸಿಕೊಂಡು ಬಂದಿದೆ ಎಂದರು.

ಇದೇ ವೇಳೆ ನಿವೃತ್ತ ಶಿಕ್ಷಕರಾದ ಸಾಂಬಮೂರ್ತಿ, ನಂಜಯ್ಯ, ಲಯನ್ಸ್ ಸಂಸ್ಥೆ ಮಾಜಿ ಅಧ್ಯಕ್ಷ ಯೋಗೀಶ್ ಅವರನ್ನು ಅಭಿನಂದಿಸಲಾಯಿತು. ತಾಲೂಕು ಆದಿ ಕರ್ನಾಟಕ ಸಮಾಜದ ಅಧ್ಯಕ್ಷ ಶಿವಣ್ಣ, ಖಜಾಂಚಿ ಮಲ್ಲೇಶ್, ಸರ್ಕಾರಿ ಪದವಿ ಕಾಲೇಜಿನ ಉಪನ್ಯಾಸಕಿ ವೆಂಕಟಮ್ಮ, ಸಹಾಯಕ ಪ್ರಾಧ್ಯಾಪಕ ಡಾ.ಡಿ.ರವಿಕುಮಾರ್, ವರ್ತಕರ ಸಂಘದ ಅಧ್ಯಕ್ಷ ಶ್ರೀನಿವಾಸ್, ಉಪನ್ಯಾಸಕಿ ವೃಂದಾ, ನಾಗರಾಜು ಹಾಜರಿದ್ದರು.

ಶ್ರೀಪಾರ್ವತಿ ಸಮೇತ ಶಿವ ಗಣೇಶ ಉತ್ಸವ ಮೂರ್ತಿ ಮೆರವಣಿಗೆ



ಬನ್ನೂರಿನ ಶ್ರೀಆನಂದವಲ್ಲಿ ಹನುಮಂತೇಶ್ವರ ದೇವಾಲಯದಲ್ಲಿ ಕಾಳಮ್ಮ ದೇವಿ ಪೂಜೆ ಅಂಗವಾಗಿ ಶ್ರೀಪಾರ್ವತಿ ಸಮೇತ ಶಿವ ಗಣೇಶ ಉತ್ಸವ ಮೂರ್ತಿ ಮೆರವಣಿಗೆ ಅದ್ದೂರಿಯಾಗಿ ನಡೆಯಿತು.

ವಿದ್ಯಾರ್ಥಿಗಳು, ಪೋಷಕರೊಂದಿಗೆ ಸುತ್ತೂರು ಶ್ರೀಗಳು



ಸುತ್ತೂರು ಮಠದ ಜೆಎಸ್‌ಎಸ್ ವಸತಿ ಶಾಲೆಗೆ ಪ್ರವೇಶ ಬಯಸಿ ರಾಜ್ಯದ ವಿವಿಧೆಡೆಗಳಿಂದ ಆಗಮಿಸಿರುವ ಸಹಸ್ರಾರು ವಿದ್ಯಾರ್ಥಿಗಳು ಹಾಗೂ ಪೋಷಕರು. ಚಿತ್ರದಲ್ಲಿ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರನ್ನು ಕಾಣಬಹುದು.



ಶ್ರೀ ಗೋವಿಂದೇಗೌಡ ರವರಿಗೆ ಹುಟ್ಟು ಹಬ್ಬದ ಶುಭಾಶಯಗಳು



ಪ್ರಥಮ ದರ್ಜೆ ಗುತ್ತಿಗೆದಾರರು ಮತ್ತು ಮೈಸೂರಿನ
ಹೆಸರಾಂತ ವೈಶಾಖ್ ಗ್ರೂಪ್ ಆಫ್ ಹೋಟೆಲ್ಸ್‌ನ
ಮಾಲೀಕರು
(ಹೋಟೆಲ್ ವೈಶಾಖ್ ಇಂಟರ್‌ನಾಷನಲ್,
ಹೋಟೆಲ್ ವೈಶಾಖ್ ರೆಸಿಡೆನ್ಸಿ,
ಹೋಟೆಲ್ ವೈಶಾಖ್ ಕಂಫರ್ಟ್,
ಹೋಟೆಲ್ ರಿಯೋ ಮೆರಿಡಿಯನ್)
ಹಾಗೂ ನೂರಾರು ಕುಟುಂಬದ
ಅನ್ನದಾತರಾದ

ಶ್ರೀ ಗೋವಿಂದೇಗೌಡ ರವರಿಗೆ
ಹುಟ್ಟುಹಬ್ಬದ ಶುಭಾಷಯಗಳು.

ತಾಯಿ ಚಾಮುಂಡೇಶ್ವರಿ ಇವರಿಗೆ
ಆಯುರಾರೋಗ್ಯ ಕರುಣಿಸಲೆಂದು ಪ್ರಾರ್ಥಿಸುವ
ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರು





ಓಂ



ಶಕ್ತಿ



ಶುಭ ಕೋರುವವರು :
ಸಿ. ಪ್ರವೀಣ್ ಕುಮಾರ್
ಶ್ರೀ ಓಂಶಕ್ತಿ ಗ್ರೂಪ್